**2014**

# ಪ್ರಚಲಿತ ವಿದ್ಯಮಾನಗಳು

## (ಜನವರಿ-ಮಾರ್ಚ್)




**ಕರುನಾಡು ಎಗ್ಸಾಂ**

# ರಾಜ್ಯ

## ಗ್ರಾಮೀಣಾಭಿವೃದ್ಧಿಯ 15 ಅಂಶಗಳನ್ನು ಮೊಟ್ಟಮೊದಲು ಜಾರಿಗೊಳಿಸಿದ ಯಲವಗಿ ಗ್ರಾಮ ಪಂಚಾಯತ್

ಗ್ರಾಮೀಣ ಜೀವನಮಟ್ಟ ಸುಧಾರಣೆ ನಿಟ್ಟಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರೂಪಿಸಿದ ದೇಶಕ್ಕೆ ಮಾದರಿ ಎನ್ನಬಹುದಾದ 15 ಅಂಶಗಳನ್ನು ಮೊಟ್ಟಮೊದಲು ಅನುಷ್ಠಾನಗೊಳಿಸಿದ ಕೀರ್ತಿ ಹಾವೇರಿ ಜಿಲ್ಲೆ ಸವಣೂರು ತಾಲೂಕಿನ ಯಲವಗಿ ಗ್ರಾಮ ಪಂಚಾಯತ್‌ಗೆ ಸಂದಿದೆ. ಗಾಂಧೀಜಿಯವರ 'ಗ್ರಾಮ ಸ್ವರಾಜ್' ಕನಸು ನನಸಾಗಿಸಲು ಇಲಾಖೆ 15 ಅಂಶಗಳ ಕಾರ್ಯಕ್ರಮ ಜಾರಿಗೊಳಿಸಿತ್ತು. ಈ ಕಾರ್ಯಕ್ರಮಗಳ ಪೈಕಿ ಕೆಲವನ್ನು ಅನೇಕ ಗ್ರಾಪಂಗಳು ಅನುಷ್ಠಾನಗೊಳಿಸಿರಬಹುದು. ಆದರೆ ಯಾಲವಗಿ ಗ್ರಾ.ಪಂ. ಎಲ್ಲ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ತಡರಾತ್ರಿ ನಡೆದ ಚರ್ಚೆಯ ಪ್ರೇರಣೆಯೇ ಪ್ರಮುಖ ಕಾರಣವಾಗಿದೆ.

**ಜಾರಿಯಾದ ಅಂಶಗಳು:**

ರೈತರ ಭೂ ಅಭಿವೃದ್ಧಿ, ಕೃಷಿಕ ಮಹಿಳಾ ಸಶಕ್ತೀಕರಣ, ಸ್ಮಶಾನ ಅಭಿವೃದ್ಧಿ, ಕೌಶಲ್ಯಾಭಿವೃದ್ಧಿ, ರಾಜೀವಗಾಂಧಿ ಚೈತನ್ಯ ಯೋಜನೆ, ಮನೆಗೊಂದು ಶೌಚಾಲಯ, ರಾಜೀವಗಾಂಧಿ ಸೇವಾ ಕೇಂದ್ರ, ಕುರಿ, ಕೋಳಿ, ದನದ ದೊಡ್ಡಿ, ನಮ್ಮ ಹೊಲ, ನಮ್ಮ ದಾರಿ, ರೈತರ ಕಣ, ನಮ್ಮ ಹಳ್ಳಿ, ನಮ್ಮ ನೀರು, ಆಟದ ಮೈದಾನ, ಶುದ್ಧ ಕುಡಿಯುವ ನೀರಿನ ಘಟಕ, ನಮ್ಮೂರ ಕೆರೆ, ಸಂಜೀವಿನಿ ಈ ಅಂಶಗಳನ್ನು ಜಾರಿಗೊಳಿಸಲಾಗಿದೆ.

ಆಸ್ತಿ ಸೃಷ್ಟಿ ಗ್ರಾಮೀಣಾಭಿವೃದ್ಧಿ ಇಲಾಖೆಯ 15 ಅಂಶಗಳ ಕಾರ್ಯಕ್ರಮದಿಂದ ಸಮುದಾಯ ಹಾಗೂ ವೈಯಕ್ತಿಕ ಆಸ್ತಿ ಸೃಷ್ಟಿ, ಅಭಿವೃದ್ಧಿ ವಿಚಾರದಲ್ಲಿ ಉದ್ಯೋಗ ಹಾಗೂ ಯೋಜನೆ ಹಣ ನೇರವಾಗಿ ಜನರ ಕೈಸೇರಲಿದೆ. ಗುಣಮಟ್ಟದ ಕಾಮಗಾರಿಯೊಂದಿಗೆ ಗ್ರಾಮದ ಅಭಿವೃದ್ಧಿ ಹಾಗೂ ಆರ್ಥಿಕ ಸಬಲೀಕರಣಕ್ಕೆ ಮಹತ್ವದ ಉತ್ತೇಜನ ದೊರೆಯಲಿದೆ.

## ರಾಜ್ಯ ಸರ್ಕಾರದ 2014-15 ನೇ ಸಾಲಿನ ಬಜೆಟ್ ಮುಖ್ಯಾಂಶಗಳು

'ಅನ್ನಭಾಗ್ಯ', 'ಕ್ಷೀರಭಾಗ್ಯ'ದಂತಹ ಜನಪ್ರಿಯ ಯೋಜನೆಗಳ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಎರಡನೇ ಬಜೆಟ್‌ನಲ್ಲಿ 'ಕೃಷಿ ಭಾಗ್ಯ', 'ಪ್ರಿಯದರ್ಶಿನಿ', 'ಆಶಾಕಿರಣ' 'ಕಾಯಕ ನಿಧಿ' ಸೇರಿದಂತೆ ಒಂದು ಡಜನ್ ಹೊಸ ಕಾರ್ಯಕ್ರಮಗಳನ್ನು ಘೋಷಿಸಿದ್ದಾರೆ.

**ಮುಖ್ಯಾಂಶಗಳು:**

- **ಕೃಷಿ ಭಾಗ್ಯ-** 45 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬದುಗಳ ಮೂಲಕ ಮಳೆ ನೀರಿನ ಸಂರಕ್ಷಣೆ, ಲಾಭದಾಯಕ ಬೆಳೆಗಳ ಅಳವಡಿಕೆ, ತೋಟಗಾರಿಕೆ ಬೆಳೆಗಳು, ಪಶು ಸಂಗೋಪನಾ ಚಟುವಟಿಕೆ ಮೂಲಕ ಕೃಷಿ ಕಾರ್ಮಿಕರ ಆದಾಯ ಹೆಚ್ಚಿಸುವ ಗುರಿ.
- **ಗ್ರಾಹಕ ಮಾರಾಟ ಅಂಗಳ-** ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ, ರೈತರು ತಾವು ಬೆಳೆದ ಬೆಳೆಯನ್ನು ನೇರವಾಗಿ ಮಾರಾಟ ಮಾಡಲು ಅವಕಾಶ. ಇದಕ್ಕಾಗಿ ಗ್ರಾಹಕ ಮಾರಾಟ ಅಂಗಳ ಸ್ಥಾಪನೆ. ಯೋಜನೆ ಜಾರಿಗಾಗಿ ಕೃಷಿ ಉತ್ಪನ್ನ ಮಾರಾಟ ಅಧಿನಿಯಮಕ್ಕೆ ತಿದ್ದುಪಡಿ.
- **ಗೌರವ ಯೋಜನೆ-** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಮತ್ತು ನಿರ್ಮಲ ಭಾರತ ಅಭಿಯಾನ ಯೋಜನೆಯಡಿ 1.50 ಲಕ್ಷ ಗ್ರಾಮೀಣ ಕುಟುಂಬಗಳಿಗೆ ಶೌಚಾಲಯ ಸಹಿತ ಸ್ನಾನ ಗೃಹಗಳ ನಿರ್ಮಾಣ.

- **ರೈತರಿಗೆ ಸೂರ್ಯ ಜ್ಯೋತಿ-** ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಸೌರಶಕ್ತಿ ಆಧರಿತ ಪಂಪ್ ಅಳವಡಿ ಸಿಕೊಳ್ಳಲು ನೆರವು. ಸಣ್ಣ ನೀರಾವರಿ ಇಲಾಖೆ ಮೂಲಕ ಯೋಜನೆ ಜಾರಿ.
- **ನಮ್ಮ ಭೂಮಿ ತಂತ್ರಾಂಶ-** ಭೂಮಿ ತಂತ್ರಾಂಶ ಹಳೆಯದಾಗಿರುವುದರಿಂದ, ರಾಜ್ಯದ ಎಲ್ಲಾ ಜಮೀನುಗಳ ಭೂ ದಾಖಲೆಗಳ ಸಂಪೂರ್ಣ ಆಡಳಿತ ನಿರ್ವಹಣೆ ಸಾಧನವಾಗಿ ನಮ್ಮ ಭೂಮಿ ತಂತ್ರಾಂಶ ಅಭಿವೃದ್ಧಿಗೆ ಕ್ರಮ.
- **ಬಾಡಿಗೆ ಸೇವಾ ಕೇಂದ್ರ-** ರೈತರಿಗೆ ಸಕಾಲದಲ್ಲಿ ಕೃಷಿ ಯಂತ್ರೋ ಪಕರಣ ಗಳು ಬಾಡಿಗೆಗೆ ಸಿಗುವಂತೆ ಮಾಡಲು ಚಾರಿಟೆಬಲ್ ಟ್ರಸ್ಟ್, ಸಂಘ, ಸಂಸ್ಥೆಗಳು, ಸ್ವಸಹಾಯ ಗುಂಪುಗಳು, ಸರ್ಕಾರೇತರ ಸಂಸ್ಥೆಗಳ ಸಹಯೋಗದಲ್ಲಿ ಬಾಡಿಗೆ ಆಧರಿತ ಸೇವಾ ಕೇಂದ್ರ ಆರಂಭ.
- **ಜಲಧಾರ-** 5 ಲಕ್ಷ ಎಸ್‌ಸಿ/ಎಸ್‌ಟಿ ವರ್ಗದ ಜನರ ಮನೆಗಳಿಗೆ ಕುಡಿಯುವ ನೀರಿನ ನಳ ಮತ್ತು ನೀರು ಸಂಪರ್ಕ ಹಾಗೂ ಎಸ್ ಸಿ/ಎಸ್‌ಟಿ ವರ್ಗದ ಕಾಲೋನಿಗಳಿಗೆ 1000 ಮೇಲ್ಮಟ್ಟದ ನೀರಿನ ಟ್ಯಾಂಕ್ ನಿರ್ಮಾಣ.
- **ಕರ್ನಾಟಕ ಖಾದಿ-** ಖಾದಿ ಉತ್ಪನ್ನಗಳನ್ನು ಹೊಸ ವಿನ್ಯಾಸದಲ್ಲಿ ತಯಾರಿಸಿ, ಬ್ರ್ಯಾಂಡ್ ಮಾಡಿ ಮಾರುಕಟ್ಟೆಗೆ ಬಿಡುಗಡೆ ಮಾಡಲು ಕ್ರಮ. ಇದಕ್ಕಾಗಿ ಖಾಸಗಿ ಡಿಸೈನ್ ಸಂಸ್ಥೆಗಳ ಸಹಯೋಗ.
- **ಕೃಷಿ ಸಹಾಯವಾಣಿ-** ರೈತರು ಹತಾಷೆಯಿಂದ ಹೊರಬರುವಂತೆ ಮಾಡಲು ಮತ್ತು ಅವರಿಗೆ ಸೂಕ್ತ ಸಲಹೆ ಹಾಗೂ ಸಹಾಯ ಒದಗಿಸಲು ಕೃಷಿ ಇಲಾಖೆ ಮೂಲಕ ಸಹಾಯವಾಣಿ ಆರಂಭ. ಕೃಷಿ, ಮಾನಸಿಕ ತಜ್ಞರ ಮೂಲಕ ಸಲಹೆ ನೀಡಲು ಯೋಜನೆ ಜಾರಿ.
- **ಕಾಯಕ ನಿಧಿ-** ಕೃಷಿ ಮಾರುಕಟ್ಟೆಯಲ್ಲಿ ಕಾರ್ಯನಿರ್ವ ಹಿಸುತ್ತಿರುವ ಹಮಾಲಿಗಳ ಕಲ್ಯಾಣಕ್ಕಾಗಿ 1 ಕೋಟಿ ರೂ. ಮೊತ್ತದ ಕಾಯಕ ನಿಧಿ ಸ್ಥಾಪನೆ. ನಿಧಿಯಲ್ಲಿ ಸರ್ಕಾರದ ಪಾಲು ಶೇ.50ರಷ್ಟು ಹಾಗೂ ಕೃಷಿ ಮಾರುಕಟ್ಟೆ ಪಾಲು ಶೇ.50ರಷ್ಟು ಇರಲಿದೆ.
- **ಪ್ರಾಚ್ಯಪ್ರಜ್ಞೆ-** ಕರ್ನಾಟಕದ ಸಮೃದ್ಧ ಪ್ರಾಚೀನ ಸ್ಮಾರಕ ಮತ್ತು ಮೂರ್ತ ಹಾಗೂ ಅಮೂರ್ತ ಪರಂಪರೆಯ ಸಂಪತ್ತಿನ ಬಗ್ಗೆ ವಿದ್ಯಾರ್ಥಿ ಗಳಲ್ಲಿ ಅರಿವು ಮೂಡಿಸಲು ಪ್ರಾಚ್ಯಪ್ರಜ್ಞೆ ಎಂಬ ಕಾರ್ಯಕ್ರಮ ಜಾರಿಗೆ.
- **ಶ್ರಮಶಕ್ತಿ ಪುರಸ್ಕಾರ-** ಕಾರ್ಮಿಕರು ಮತ್ತು ಕೈಗಾರಿಕೆಗಳನ್ನು ಉತ್ತೇಜಿಸಲು ರಾಜ್ಯ ಮಟ್ಟದಲ್ಲಿ ಮುಖ್ಯಮಂತ್ರಿಗಳ ಶ್ರಮ ಶಕ್ತಿ ಪುರಸ್ಕಾರ ಯೋಜನೆ ಜಾರಿಗೆ.
- **ತರಬೇತುದಾರರಿಗೆ ತರಬೇತಿ-** ವಿಜ್ಞಾನ ಶಿಕ್ಷಣ ಪ್ರೋತ್ಸಾಹದ ನಿಟ್ಟಿನಲ್ಲಿ ಶಾಲಾ, ಕಾಲೇಜು ಶಿಕ್ಷಕರಿಗೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಮೂಲಕ ತರಬೇತಿ.
- **ಮೊಬೈಲ್ ಸಹಾಯವಾಣಿ-** ಮೀನುಗಾರರಿಗೆ ವಿವಿಧ ಸರ್ಕಾರಿ ಯೋಜನೆ ವಿವರ, ಮಾರುಕಟ್ಟೆ ದರದ ಮಾಹಿತಿ, ಹವಾಮಾನ ವರದಿ ಇತ್ಯಾದಿ ಕುರಿತು ಧ್ವನಿ ಸಂದೇಶಗಳನ್ನು ಕನ್ನಡದಲ್ಲಿ ನೀಡುವ ಯೋಜನೆ. ಇದಕ್ಕಾಗಿ ರೈತರಿಗೆ ಉಚಿತ ಸಿಮ್‌ಕಾರ್ಡ್ ವಿತರಣೆ.
- **ನಿರಾಮಯ-** ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ನಿಂದ ಬಳಲುತ್ತಿರುವರಿಗೆ ನಿರಾಮಯ ಆರೋಗ್ಯ ವಿಮಾ ಯೋಜನೆ ಜಾರಿ. ಪ್ರತಿ ವ್ಯಕ್ತಿಗೆ ಒಂದು ಬಾರಿ ಸರ್ಕಾರಿಂದ 250 ರೂ. ಪ್ರೀಮಿಯಂ ಪಾವತಿ. ಇದರಿಂದ 1ಲಕ್ಷ ರೂ.ವರೆಗೆ ವೈದ್ಯಕೀಯ ಸೌಲಭ್ಯ.
- **ಸಾಲು ಮರ ತಿಮ್ಮಕ್ಕನ ನೆರಳು-** ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ 3000 ಕಿ.ಮೀ ರಸ್ತೆ ಅಕ್ಕಪಕ್ಕದ ಗಿಡಗಳನ್ನು ನೆಡುವ ಮತ್ತು ಅವುಗಳನ್ನು 5 ವರ್ಷ ಕಾಲ ನಿರ್ವಹಣೆ ಮಾಡುವ ಗುರಿ.
- **ಸ್ಮಾರ್ಟ್ ಪಡಿತರ ಚೀಟಿ-** ಪಡಿತರ ವ್ಯವಸ್ಥೆಯಲ್ಲಿನ ಲೋಪದೋಷ ದೂರ ಮಾಡುವ ನಿಟ್ಟಿನಲ್ಲಿ ರಾಜ್ಯದಾದ್ಯಂತ ಪಡಿತರ ಗ್ರಾಹಕರಿಗೆ ಸ್ಮಾರ್ಟ್ ಪಡಿತರ ಚೀಟಿ ವಿತರಣೆ ಮಾಡಲಾಗುವುದು.

- **ಜ್ಯೋತಿ ಸಂಜೀವಿನಿ-** ಸರ್ಕಾರಿ ನೌಕರರು ಮತ್ತು ಅವರ ಅವಲಂಬಿತರಿಗೆ 7 ಮಾರಣಾಂತಿಕ ಕಾಯಿಲೆಗಳ ವಿಷಯದಲ್ಲಿ ನಗದು ರಹಿತ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಒದಗಿಸಲು ಜ್ಯೋತಿ ಸಂಜೀವಿನಿ ಯೋಜನೆ ಜಾರಿ.
- **ಸ್ವದೇಶಕ್ಕೆ ಸ್ವಾಗತ-** ವಿದೇಶಗಳಲ್ಲಿರುವ ಭಾರತೀಯ ಮೂಲದ ಸಂಶೋಧಕರು ಮತ್ತು ಅಧ್ಯಾಪಕರನ್ನು ಮರಳಿ ರಾಜ್ಯದತ್ತ ಸೆಳೆಯುವ ನಿಟ್ಟಿನಲ್ಲಿ 'ಸ್ವದೇಶಕ್ಕೆ ಸ್ವಾಗತ' ಎಂಬ ಯೋಜನೆ ಜಾರಿ. ಮೊದಲ ಹಂತದಲ್ಲಿ 50 ವಿಜ್ಞಾನಿಗಳು, 50 ಅಧ್ಯಾಪಕರ ನೇಮಕ.
- **ಯುವ ಶಕ್ತಿ ಕೇಂದ್ರ-** ಯುವಜನರು ಒಂದೆಡೆ ಸೇರಿ ದೈಹಿಕ ಚಟುವಟಿಕೆಯಲ್ಲಿ ಮತ್ತು ಆಟೋಟಗಳಲ್ಲಿ ತೊಡಗಲು ಪ್ರತಿಯೊಂದು ಜಿಲ್ಲೆಯಲ್ಲಿ ಯುವ ಶಕ್ತಿ ಕೇಂದ್ರ ಆರಂಭ. ಪ್ರತಿ ಕೇಂದ್ರಕ್ಕೆ ತಲಾ 15 ಲಕ್ಷ ರೂ. ವೆಚ್ಚ.
- **ಪ್ರಿಯದರ್ಶಿನಿ-** ಮಹಿಳಾ ಸಹಕಾರಿಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಮಹಿಳಾ ಸಹಕಾರ ಸಂಘಗಳಿಗೆ ಷೇರುಧನವಾಗಿ ನೀಡಲು ಬಜೆಟ್‌ನಲ್ಲಿ ಒಟ್ಟಾರೆ 1 ಕೋಟಿ ರೂ. ನೀಡುವ ನಿರ್ಧಾರ ಘೋಷಿಸಲಾಗಿದೆ.
- **ಆಶಾಕಿರಣ-** ಅಂಗವಿಕಲ ಸಹಕಾರಿಗಳು ಸ್ಥಾಪಿಸುವ ಸಹಕಾರ ಸಂಘಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಷೇರುಧನವಾಗಿ ಬಜೆಟ್‌ನಲ್ಲಿ ಒಟ್ಟಾರೆ 1 ಕೋಟಿ ರೂ. ಒದಗಿಸಲಾಗಿದೆ. ಯೋಜನೆಗೆ ಆಶಾಕಿರಣ ಎಂಬ ಹೆಸರನ್ನು ಸರ್ಕಾರ ಇಟ್ಟಿದೆ.
- **ಸಾಂತ್ವನ-** ರಸ್ತೆ ಅಪಘಾತದಲ್ಲಿ ಗಾಯಗೊಂಡು ಸರ್ಕಾರ ಗುರುತಿಸಿದ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆಗೆ ದಾಖಲಾದವರಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ 'ಸಾಂತ್ವನ' ಯೋಜನೆಯಡಿ 25000 ರೂ. ವಿತರಣೆಗೆ ಸರ್ಕಾರದ ನಿರ್ಧಾರ.
- **ಗ್ರಾಮೀಣ ಕ್ರೀಡೋತ್ಸವ-** ದೇಸಿ ಗ್ರಾಮೀಣ ಕ್ರೀಡೆಗಳನ್ನು ಪ್ರೋತ್ಸಾಹಿ ಸುವ ನಿಟ್ಟಿನಲ್ಲಿ ಪ್ರತಿ ತಾಲೂಕಿನಲ್ಲಿ ಗ್ರಾಮೀಣ ಕ್ರೀಡೋತ್ಸವ ಆಯೋಜನೆ. ಯೋಜನೆಗಾಗಿ ಪ್ರತಿ ತಾಲೂಕಿಗೆ 1.5 ಲಕ್ಷ ರೂಪಾಯಿ ನೀಡಿಕೆ.
- **ಗ್ರಾಮ ವಿಕಾಸ-** ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಎಸ್‌ಸಿ/ಎಸ್‌ಟಿ ಜನಾಂಗದವರು ಹೆಚ್ಚಾಗಿ ವಾಸಿಸುವ 2 ಗ್ರಾಮ ಸೇರಿ ಒಟ್ಟು 5 ಗ್ರಾಮಗಳ ಸರ್ವ ತೋಮುಖ ಅಭಿವೃದ್ಧಿಗೆ ಯೋಜನೆ ಜಾರಿ.
- **ಕೆರೆ ಅಭಿವೃದ್ಧಿ-** ರಾಜ್ಯದಲ್ಲಿನ ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ನಿಟ್ಟಿ ನಲ್ಲಿ 2014-15ನೇ ಸಾಲಿನಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಒಂದು ಕೆರೆ ಅಭಿವೃದ್ಧಿಗೆ ಕೆರೆ ಅಭಿವೃದ್ಧಿ- ನಾಡಿನ ಶ್ರೇಯೋಭಿವೃದ್ಧಿ ಯೋಜನೆ.

ಕರುನಾಡು

# ರಾಷ್ಟ್ರೀಯ

## ಬಿಹಾರದಲ್ಲಿ ಪುರಾತನ ವಿಶ್ವವಿದ್ಯಾಲಯದ ಅವಶೇಷ ಪತ್ತೆ

ಪುರಾತನ ಕಾಲದ ವಿಶ್ವವಿದ್ಯಾಲಯವೊಂದರ ಅವಶೇಷಗಳನ್ನು ಬಿಹಾರದಲ್ಲಿ ಪತ್ತೆಹಚ್ಚಲಾಗಿದೆ. ಬಿಹಾರದ ನಳಂದ ಜಿಲ್ಲೆಯ ತೆಲ್ಹರ (Telhara) ಗ್ರಾಮದಲ್ಲಿ ಪುರಾತನ ವಿಶ್ವವಿದ್ಯಾಲಯದ ಅವಶೇಷಗಳು ಪತ್ತೆಹಚ್ಚಲಾಗಿರುವುದಾಗಿ ಭಾರತೀಯ ಪುರಾತತ್ವ ಇಲಾಖೆ ಹೇಳಿದೆ.

- ಬಿಹಾರ ಈಗಾಗಲೇ ಇತಿಹಾಸ ಪ್ರಸಿದ್ಧ ನಳಂದ ಹಾಗೂ ವಿಕ್ರಮಶೀಲ ವಿಶ್ವವಿದ್ಯಾಲಯಗಳಿಂದ ಪ್ರಸಿದ್ಧ ಹೊಂದಿದೆ. ಈ ಎರಡೂ ವಿಶ್ವವಿದ್ಯಾಲಯಗಳಲ್ಲಿ ಸಾವಿರಾರು ಬೌದ್ಧ ಬಿಕ್ಕುಗಳು ಅಭ್ಯಾಸ ನಡೆಸುತ್ತಿದ್ದರು ಎಂದು ಇತಿಹಾಸಗಳಿಂದ ತಿಳಿದುಬಂದಿದೆ.
- ಸದ್ಯ ಅವಶೇಷಗಳು ಪತ್ತೆಯಾಗಿರುವ ತೆಲ್ಹರ್ ಗ್ರಾಮ ಬೌದ್ಧ ಧರ್ಮದ ಇತಿಹಾಸವನ್ನು ಹೊಂದಿದ್ದು, ಕ್ರಿ.ಶ 7ನೇ ಶತಮಾನದಲ್ಲಿ ಚೀನಾದ ಪ್ರವಾಸಿಗ ಹ್ಯೂಯೆನ್ ತ್ಸ್ಯಾಂಗ್ ಈ ಪ್ರದೇಶಕ್ಕೆ ಭೇಟಿ ಮಾಡಿದ್ದನು.
- ಈ ವಿಶ್ವವಿದ್ಯಾಲಯ 5 ನೇ ಶತಮಾನಕ್ಕೆ ಸೇರಿದ್ದು ಎನ್ನಲಾಗಿದ್ದು, ಇದರ ಅನ್ವೇಷಣೆ ಒಂದು ಮೈಲುಗಲ್ಲು ಎನ್ನಲಾಗಿದೆ.

## ಭಾರತ ಈಗ ಪೋಲಿಯೋ ಮುಕ್ತ ರಾಷ್ಟ್ರ: ಶ್ಲಾಘನೆಗಳ ಮಹಾಪೂರ

ಭಾರತ ಈಗ ಪೋಲಿಯೋ ಮುಕ್ತ ರಾಷ್ಟ್ರ. ಸತತ ಮೂರು ವರ್ಷಗಳಲ್ಲಿ ದೇಶದಲ್ಲಿ ಯಾವುದೇ ಪೋಲಿಯೋ ಪ್ರಕರಣ ಕಂಡು ಬಂದಿಲ್ಲ. ಒಂದು ಕಾಲದಲ್ಲಿ ಪೋಲಿಯೋ ರಾಜಧಾನಿಯೆಂದೇ ಖ್ಯಾತಿ ಹೊಂದಿದ್ದ ಭಾರತ ಇಂತಹ ಸಾಧನೆ ಮಾಡಿರುವುದು ಈಗ ವಿಶ್ವವನ್ನೆ ನಿಬ್ಬೆರಗಾಗಿ ಮಾಡಿದೆ.

- 2009 ರಲ್ಲಿ ಜಾಗತಿಕ ಮಟ್ಟದಲ್ಲಿ ಕಂಡು ಬರುತ್ತಿದ್ದ ಪೋಲಿಯೋ ಪ್ರಕರಣಗಳ ಅರ್ಧದಷ್ಟು ಭಾರತದಲ್ಲಿ ಕಂಡು ಬರುತ್ತಿದ್ದವು. 2009 ರಲ್ಲಿ 741 ಪೋಲಿಯೋ ಪ್ರಕರಣಗಳು ಕಂಡು ಬಂದಿದ್ದರೆ, 2010 ರಲ್ಲಿ 42 ಹಾಗೂ 2011 ರಲ್ಲಿ ಕೇವಲ ಒಂದೇ ಒಂದು ಪ್ರಕರಣ ಕಂಡು ಬಂದಿದೆ.
- ಜನವರಿ 13, 2011 ರಲ್ಲಿ ಪಶ್ಚಿಮ ಬಂಗಾಳದ ಹೌರ ಜಿಲ್ಲೆಯಲ್ಲಿ ಕಂಡು ಬಂದ ಪ್ರಕರಣವೇ ದೇಶದಲ್ಲಿ ಕೊನೆಯ ಪೋಲಿಯೊ ಪ್ರಕರಣ.
- ಪ್ರಸ್ತುತ ಪಾಕಿಸ್ತಾನ, ನೈಜೀರಿಯಾ ಹಾಗೂ ಆಫ್ಘಾನಿಸ್ತಾನ ವಿಶ್ವದಲ್ಲೆ ಅತ್ಯಂತ ಹೆಚ್ಚು ಪೋಲಿಯೊ ಪ್ರಕರಣಗಳು ಪತ್ತೆಯಾಗುತ್ತಿರುವ ರಾಷ್ಟ್ರಗಳು ಎನಿಸಿವೆ.
- ಪೋಲಿಯೊ ಒಂದು ವೈರಸ್ ಮೂಲಕ ಹರಡುವ ರೋಗ. ಮನುಷ್ಯನ ಮಲದ ಮೂಲಕ ಈ ವೈರಸ್ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ. ದೇಹದ ನರವ್ಯವಸ್ಥೆಯ ಮೇಲೆ ಹಾನಿ ಮಾಡುವ ಮೂಲಕ ವ್ಯಕ್ತಿಯನ್ನು ಊನವಾಗಿಸುತ್ತದೆ.
- ಭಾರತದಲ್ಲಿ 1988 ರಲ್ಲಿ ಪೋಲಿಯೋ ವಿರುದ್ದ ಲಸಿಕೆ ಹಾಕಿಸುವ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು. ಐದು ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೊ ಲಸಿಕೆಯನ್ನು ಹಾಕಿಸುವ ಮೂಲಕ ದೇಶವನ್ನು ಇಂದು ಪೋಲಿಯೊ ಮುಕ್ತ ರಾಷ್ಟ್ರವನ್ನಾಗಿ ಮಾಡಲಾಗಿದೆ. ವಿಶ್ವಸಂಸ್ಥೆ, ಯುರೋಪಿಯನ್ ಒಕ್ಕೂಟ ಸೇರಿದಂತೆ ಅನೇಕ ಸಂಸ್ಥೆಗಳ ಭಾರತದ ಈ ಸಾಧನೆಯನ್ನು ಮುಕ್ತವಾಗಿ ಶ್ಲಾಘಿಸಿವೆ.
- ಫೆಬ್ರವರಿ 13, 2014 ರಂದು ವಿಶ್ವ ಆರೋಗ್ಯ ಸಂಸ್ಥೆ ಭಾರತವನ್ನು ಪೋಲಿಯೊ ಮುಕ್ತ ರಾಷ್ಟ್ರವೆಂದು ಘೋಷಿಸಲಿದೆ.



ಸಂಪರ್ಕಿಸಿ:karunaduexams.com

**ಚೆನ್ನೈನಲ್ಲಿ ಅತ್ಯಂತ ಹೆಚ್ಚು ಮಕ್ಕಳ ಕ್ಯಾನ್ಸರ್ ಪ್ರಕರಣಗಳು: ಸಮೀಕ್ಷೆ**

ಇಂಡಿಯನ್ ಕೌನ್ಸಿಲ್ ಫಾರ್ ಮೆಡಿಕಲ್ ರಿಸರ್ಚ್ ನಡೆಸಿರುವ ಸಮೀಕ್ಷೆಯ ಪ್ರಕಾರ ಚೆನ್ನೈನಲ್ಲಿ ಅತ್ಯಂತ ಹೆಚ್ಚು ಮಕ್ಕಳ (14 ವರ್ಷ ವಯಸ್ಸಿನ) ಕ್ಯಾನ್ಸರ್ ಪ್ರಕರಣಗಳು ಕಂಡುಬಂದಿರುವುದಾಗಿ ತಿಳಿದು ಬಂದಿದೆ. ಚೆನ್ನೈ ನಂತರ ದೇಶದ ರಾಜಧಾನಿ ನವದೆಹಲಿಯಲ್ಲಿ ಎರಡನೇ ಸ್ಥಾನದಲ್ಲಿರುವುದಾಗಿ ಸಮೀಕ್ಷೆಯಿಂದ ಬಹಿರಂಗಗೊಂಡಿದೆ.

- ಪ್ರತಿ 10 ಲಕ್ಷ ಮಕ್ಕಳಲ್ಲಿ 159 ಕ್ಯಾನ್ಸರ್ ಪ್ರಕರಣಗಳು ಚೆನ್ನೈನಲ್ಲಿ ಪ್ರತಿ ವರ್ಷ ದಾಖಲಾಗುತ್ತಿವೆ. ಇದು ದೇಶದ ಇತರೆ ನಗರಗಳಿಗೆ ಹೋಲಿಸಿದರೆ ಅತ್ಯಂತ ಹೆಚ್ಚು.
- ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ 149 ಪ್ರಕರಣಗಳು ಪತ್ತೆಯಾಗುವ ಮೂಲಕ ಎರಡನೇ ಸ್ಥಾನದಲ್ಲಿದೆ.
- ಪುಣೆಯಲ್ಲಿ ಕೇವಲ 47 ಪ್ರಕರಣಗಳು ದಾಖಲಾಗುವ ಮೂಲಕ ದೇಶದಲ್ಲಿ ಅತ್ಯಂತ ಕಡಿಮೆ ಕ್ಯಾನ್ಸರ್ ಪ್ರಕರಣಗಳು ದಾಖಲಾಗಿರುವ ನಗರವೆಂಬ ಕುಖ್ಯಾತಿಗೆ ಪಾತ್ರವಾಗಿದೆ.
- ಸಮೀಕ್ಷೆ ಪ್ರಕಾರ ಗಂಡು ಮಕ್ಕಳಲ್ಲಿ ಹೆಣ್ಣು ಮಕ್ಕಳಿಗಿಂತ ಅತ್ಯಂತ ಹೆಚ್ಚು ಕ್ಯಾನ್ಸರ್ ಪ್ರಕರಣಗಳು ಕಂಡು ಬಂದಿವೆ. ರಕ್ತ ಕ್ಯಾನ್ಸರ್ ಸಾಮಾನ್ಯವಾಗಿ ಕಂಡು ಕ್ಯಾನ್ಸರ್ ಸ್ವರೂಪ ಎಂದು ತಿಳಿದು ಬಂದಿದೆ.

ಜೈನರಿಗೆ 'ಅಲ್ಪಸಂಖ್ಯಾತ' ಸ್ಥಾನಮಾನ ಕೇಂದ್ರ ಸರ್ಕಾರ ಅಧಿಕೃತ ಆದೇಶ

ಜೈನರಿಗೆ ಅಲ್ಪಸಂಖ್ಯಾತ ಸ್ಥಾನಮಾನ ನೀಡಲು ಜನವರಿ 20ಕ್ಕೆ ಒಪ್ಪಿಗೆ ಸೂಚಿಸಿದ್ದ ಕೇಂದ್ರ ಸರ್ಕಾರ ಇದೀಗ ಅದನ್ನು ಅಧಿಕೃತಗೊಳಿಸಿದೆ. ಜನವರಿ 20ರಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಜೈನರ ಬೇಡಿಕೆಗೆ ಒಪ್ಪಿಗೆ ಲಭಿಸಿತ್ತು. ಇದೀಗ ಜೈನರಿಗೆ ಅಲ್ಪಸಂಖ್ಯಾತ ಸ್ಥಾನಮಾನ ನೀಡಿ, ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ.

**6 ಧರ್ಮಗಳು:**

ಇದುವರೆಗೆ ರಾಷ್ಟ್ರದಲ್ಲಿ ಕ್ರೈಸ್ತ, ಮುಸಲ್ಮಾನ, ಸಿಖ್, ಬೌದ್ಧ, ಪಾರ್ಸಿಗಳು ಮಾತ್ರ ಇದುವರೆಗೆ ಅಲ್ಪಸಂಖ್ಯಾತ ಸ್ಥಾನಮಾನ ಪಡೆದಿದ್ದರು. ಈಗ ರಾಷ್ಟ್ರದಲ್ಲಿ ಒಟ್ಟು 50 ಲಕ್ಷದಷ್ಟಿರುವ ಜೈನರು ಕೂಡಾ ಅಲ್ಪಸಂಖ್ಯಾತ ಸ್ಥಾನಪಡೆದುಕೊಂಡಿದ್ದಾರೆ. ಇನ್ನುಕೇಂದ್ರ ಸರ್ಕಾರದ ವಿಶೇಷ ಕಲ್ಯಾಣ ಯೋಜನೆಗಳ ಅನುದಾನ ಜೈನರಿಗೆ ಲಭಿಸಲಿದೆ. ಕರ್ನಾಟಕದಲ್ಲಿ ಜೈನರು ಈಗಾಗಲೇ ಅಲ್ಪಸಂಖ್ಯಾತರ ಸ್ಥಾನಮಾನ ನೀಡಿದೆ.

**ದೇಶದ ಅರ್ಥವ್ಯವಸ್ಥೆಯನ್ನು ಹಾಳುಗೆಡಹುತ್ತಿರುವ ಕಪ್ಪುಹಣ ಅಥವಾ ಕಾಳಧನ:**

ಕಪ್ಪುಹಣ ಅಥವಾ ಕಾಳಧನ ದೇಶವನ್ನು ಕಾಡುತ್ತಿರುವ ಬಹುದೊಡ್ಡ ಸಮಸ್ಯೆ. ಅಕ್ರಮ ಮಾರ್ಗಗಳ ಸಂಪಾದಿಸಿದ ಈ ಹಣ ದೇಶದ ಅರ್ಥವ್ಯವಸ್ಥೆಯನ್ನು ಹಾಳುಗೆಡಹುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ಈ ಕುರಿತು ಇಲ್ಲಿದೆ ಒಂದಷ್ಟು ಮಾಹಿತಿ.

**ಕಪ್ಪುಹಣ ಅಂದರೇನು?**

ಇದು ತೆರಿಗೆ ತಪ್ಪಿಸಿ ಗಳಿಸಿದ ಆದಾಯ. ಈ ರೀತಿಯ ಆದಾಯಕ್ಕೆ ಯಾವುದೇ ಲೆಕ್ಕ ಇರುವುದಿಲ್ಲ.



ಸಂಪರ್ಕಿಸಿ:karunaduexams.com

**ಯಾರಿಂದ ಸಮೀಕ್ಷೆ?**

ನ್ಯಾಷನಲ್ ಕೌನ್ಸಿಲ್ ಫಾರ್ ಅಪ್ಲೈಡ್ ಎಕನಾಮಿಕ್ ರೀಸರ್ಚ್(ಎನ್ಸಿಎಇಆರ್), ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಪಬ್ಲಿಕ್ ಫೈನಾನ್ಸ್ ಆಯಂಡ್ ಪಾಲಿಸಿ(ಎನ್ಐಪಿಎಫ್ಪಿ) ಮತ್ತು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಫೈನಾನ್ಶಿಯಲ್ ಮ್ಯಾನೇಜ್ಮೆಂಟ್(ಎನ್ಐಎಫ್ಎಂ) ಇತ್ತೀಚೆಗೆ ಭಾರತದ ಕಪ್ಪುಹಣದ ಕುರಿತು ಲೆಕ್ಕಹಾಕಿದೆ.

1985ರ ಬಳಿಕ ಕಪ್ಪು ಹಣದ ಕುರಿತು ಲೆಕ್ಕಹಾಕಿದ್ದು ಇದೇ ಮೊದಲು. ಈ ಕುರಿತು ಡಿಸೆಂಬರ್ ತಿಂಗಳಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ. ಅದರಂತೆ ದೇಶದ ಕಪ್ಪುಹಣದ ಪ್ರಮಾಣ 25 ಲಕ್ಷ ಎಂದು ಅಂದಾಜಿಸಲಾಗಿದೆ. ಅಂದರೆ ದೇಶದ ಒಟ್ಟು ಪ್ರಾದೇಶಿಕ ಉತ್ಪನ್ನದ ಶೇ.30ರಷ್ಟು.

**ಯಾವ ಕ್ಷೇತ್ರದಲ್ಲಿ ಹೆಚ್ಚು?**

ದೇಶದ ಕಾಳದನದ ಮೂರನೇ ಒಂದರಷ್ಟು ರಿಯಲ್ ಎಸ್ಟೇಟ್ ಕ್ಷೇತ್ರದಲ್ಲಿ ಹರಿದಾಡುತ್ತಿದೆ. ಆ ಬಳಿಕ ಉತ್ಪಾದನೆ, ಚಿನ್ನ, ಗೃಹೋಪಯೋಗಿ ವಸ್ತುಗಳ ಖರೀದಿಗೆ ಬಳಕೆಯಾಗುತ್ತದೆ. ಪ್ರಾಪರ್ಟಿ ಡೀಲ್, ಬುಲಿಯನ್, ಚಿನ್ನಾಭರಣ ಖರೀದಿ, ಲಾಭರಹಿತ ಸಂಸ್ಥೆಯ ಹೆಸರಿನಲ್ಲಿ, ತೆರಿಗೆದಾರರ ಸ್ವರ್ಗವಾಗಿರುವ ಮಾರಿಷಸ್, ಸಿಂಗಾಪುರದಂತಹ ದೇಶಗಳ ಬ್ಯಾಂಕ್ಗಳಲ್ಲಿ ಈ ಹಣವನ್ನು ಸುರಕ್ಷಿತವಾಗಿ ಇಡಲಾಗುತ್ತದೆ.

**ಸೃಷ್ಟಿ ಹೇಗೆ?**

ಸುಳ್ಳು ಬಿಲ್ ನೀಡುವ ಮೂಲಕ. ಈ ವಿಧಾನದಲ್ಲಿ ದೇಶದಲ್ಲಿ ದೊಡ್ಡಮಟ್ಟದಲ್ಲಿ ಕಪ್ಪುಹಣ ಸೃಷ್ಟಿಸಲಾಗುತ್ತದೆ. ಕ್ರೆಡಿಟ್/ಡೆಬಿಟ್ ಕಾರ್ಡ್ ವರ್ಗಾವಣೆ ಕ್ರೆಡಿಟ್ ಹಾಗೂ ಡೆಬಿಟ್ ಕಾರ್ಡ್ ಮೂಲಕ ನಡೆಯುವ ಖರೀದಿ ಪ್ರಕ್ರಿಯೆಯಿಂದ ಕಪ್ಪುಹಣದ ವ್ಯವಹಾರದ ಮೇಲೆ ದೊಡ್ಡ ಹೊಡೆತ ಬೀಳುತ್ತದೆ. ಈ ಮೂಲಕ ಹಣಕಾಸು ವರ್ಗಾವಣೆ ಕುರಿತು ಸರ್ಕಾರಕ್ಕೆ ಸರಿಯಾದ ಲೆಕ್ಕಾಚಾರ ಸಿಗುತ್ತದೆ.

**ಸರ್ಕಾರ ಕ್ರಮಗಳೇನು?**

ಕಳೆದ ಮೂರು ವರ್ಷಗಳಲ್ಲಿ ಸರ್ಕಾರ 50 ಸಾವಿರ ಕೋಟಿಯ ಅಕ್ರಮ ಹಣವನ್ನು ಪತ್ತೆಹಚ್ಚಿದೆ. ವಿದೇಶಗಳ ನೆರವಿನಿಂದ 1 ಸಾವಿರ ಕೋಟಿಯಷ್ಟು ಮೊತ್ತದ ತೆರಿಗೆ ಕಳ್ಳತನ ಪತ್ತೆಮಾಡಿದೆ. ವಿದೇಶಗಳಲ್ಲಿ ತೆರಿಗೆ ತಪ್ಪಿಸಿ ಇಟ್ಟಿರುವ ಹಣದ ಕುರಿತು 12,500 ಮಾಹಿತಿಗಳಿವೆ. ಈ ಕುರಿತ ತನಿಖೆ ಪ್ರಗತಿಯಲ್ಲಿದೆ.

## ದೇಶದ ಮೊದಲ ಮೋನೋ ರೈಲು ಮುಂಬೈನಲ್ಲಿ ಲೋಕಾರ್ಪಣೆ

ದೇಶದ ಮೊತ್ತ ಮೊದಲ ಮೋನೋ ರೈಲಿಗೆ ಮುಂಬೈನಲ್ಲಿ ಚಾಲನೆ ಸಿಕ್ಕಿದೆ. ವಡಾಲಾ ಮತ್ತು ಚೆಂಬೂರ್ ನಡುವಿನ 8.93 ಕಿ.ಮೀ ಉದ್ದದ ಮಾರ್ಗದಲ್ಲಿ ಸಂಚರಿಸಲಿರುವ ರೈಲಿಗೆ ಮುಖ್ಯಮಂತ್ರಿ ಪೃಥ್ವಿರಾಜ್ ಚೌಹಾಣ್ ಚಾಲನೆ ನೀಡಿದರು. 2009ರಲ್ಲಿ ಆರಂಭಗೊಂಡಿದ್ದ ಯೋಜನೆ 2 ವರ್ಷ ಕಾಲ ವಿಳಂಬಗೊಂಡಿದ್ದು, ಇದೀಗ ಸಾರ್ವಜನಿಕರ ಬಳಕೆಗೆ ಲಭ್ಯವಾಗಲಿದೆ.

**ಮೋನೋ-ಮೆಟ್ರೋ ವ್ಯತ್ಯಾಸ:**

- ಅತಿ ಕಿರಿದಾದ, ದಟ್ಟಣೆಯ ಪ್ರದೇಶದಲ್ಲೂ ಮೋನೋ ರೈಲು ಸಾಗುತ್ತದೆ. ಮೆಟ್ರೋಗೆ ಇದು ಸಾಧ್ಯವಿಲ್ಲ.

- ಮೋನೋ ರೈಲು ನಿರ್ಮಾಣ ವೆಚ್ಚ ಮೆಟ್ರೋ ರೈಲಿಗಿಂತಲೂ ಕಡಿಮೆ ಮತ್ತು ಅತಿ ವೇಗವಾಗಿ ನಿರ್ಮಿಸಬಹುದು.
- ಮೆಟ್ರೋ ರೈಲಿಗೆ ಹೋಲಿಸಿದರೆ, ಮೋನೋ ರೈಲು ಮಾರ್ಗಕ್ಕೆ ಅತಿ ಕಡಿಮೆ ಜಾಗ ಸಾಕು.
- ಮೆಟ್ರೋ ರೈಲಿನಲ್ಲಿ 2 ಸಾವಿರಕ್ಕೂ ಮಿಕ್ಕಿ ಮಂದಿ ಏಕಕಾಲಕ್ಕೆ ಸಾಗಿಸಬಹುದಾದರೆ, ಮೋನೋ ರೈಲಿನಲ್ಲಿ ಸುಮಾರು 600 ಮಂದಿಯನ್ನು ಒಂದು ಬಾರಿ ಸಾಗಿಸಬಹುದು.
- ಮೆಟ್ರೋ ರೈಲಿನ ವೇಗ ಹೆಚ್ಚು. ಮೋನೋ ರೈಲು ಗರಿಷ್ಠ 85 ಕಿ.ಮೀ. ವೇಗದಲ್ಲಿ ಸಾಗುತ್ತದೆ.

**ಮೋನೋ ಹೇಗಿರುತ್ತದೆ?**

ರೈಲು ವ್ಯವಸ್ಥೆಯಲ್ಲಿ ಎರಡು ಮಾದರಿಗಳು. ಎರಡು ಪಟ್ಟಿಗಳ ಮೇಲೆ ಸಾಗುವ ಮತ್ತು ಏಕ ಪಟ್ಟಿಯ ಮೇಲೆ ಸಾಗುವ ರೈಲು ಎಂಬುದಾಗಿ. ಇದರಲ್ಲಿ ಮೋನೋ ಎಂಬ ಹೆಸರೇ ಹೇಳುವಂತೆ ಏಕ ಪಟ್ಟಿಯ ಮೇಲೆ ಸಾಗುವ, ರೈಲು ವ್ಯವಸ್ಥೆಗೆ ಮೋನೋ ರೈಲು ಒಂದು ಹೆಸರು. ಈ ರೈಲು ಸಿಮೆಂಟ್‌ನ ತೊಲೆಯಂತಹ ಏಕ ಸಂರಚನೆಯ ಮೇಲೆ ಸಾಗುತ್ತದೆ. ಮೆಟ್ರೋ ಮಾದರಿಯ ರೈಲಿನಂತೇ, ನಗರದಲ್ಲಿ ಸಂಪರ್ಕ ಸಾಧನವಾಗಿ ಇದು ಪ್ರಸಿದ್ಧ. ಎತ್ತರದ ಕಂಬಗಳ ಮೇಲಿನ ತೊಲೆಗಳಲ್ಲಿ ಸಾಗುತ್ತದೆ. ವಿದೇಶಗಳಲ್ಲಿ ಅಯಸ್ಕಾಂತೀಯ ಶಕ್ತಿಯಲ್ಲಿ ಸಾಗುವ ಮೋನೋ ರೈಲುಗಳೂ ಇವೆ. ಜರ್ಮನಿ ಎಂಜಿನಿಯರ್ ಈಗುನ್ ಲಂಗೆನ್ ಮೋನೋ ರೈಲಿನ ಪರಿಕಲ್ಪನೆಯನ್ನು 1897ರಲ್ಲಿ ಮೊದಲ ಬಾರಿಗೆ ಪರಿಚಯಿಸಿದ್ದರು.

**ಮೋನೋರೈಲ್ ವಿಶೇಷತೆ?**

- ವಡಾಲಾ- ಚೆಂಬೂರ್ ಮಾರ್ಗದ ನಡುವಿನ ದೂರ 8.9 ಕಿ.ಮೀ
- ಪ್ರತಿ ಮೋನೋ ರೈಲಿನಲ್ಲಿ ಇರುವ ಬೋಗಿ ಸಂಖ್ಯೆ 4
- ಪ್ರತಿ ಮೋನೋ ರೈಲಿನಲ್ಲಿ ಪ್ರಯಾಣಿಸಬಹುದಾದವರ ಸಂಖ್ಯೆ 568 ಜನ
- ಮೋನೋ ರೈಲು ಸಾಗಬಹುದಾದ ಗರಿಷ್ಠ ವೇಗ 80 ಕಿ.ಮೀ
- ಪ್ರತಿ ದಿನ 1.25 ಲಕ್ಷ ಜನ ರೈಲು ಬಳಸುವ ನಿರೀಕ್ಷೆ

## ರಾಜೀವ್‌ಗಾಂಧೀ ಖೇಲ್‌ರತ್ನ, ಧ್ಯಾನ್‌ಚಂದ್ ಮತ್ತು ದ್ರೋಣಾಚಾರ್ಯ ಪ್ರಶಸ್ತಿ ಆಯ್ಕೆಗೆ ಹೊಸ ನಿಯಮ

ದೇಶದ ಅತ್ಯುನ್ನತ ಕ್ರೀಡಾ ಪ್ರಶಸ್ತಿಗಳಾದ ರಾಜೀವ್‌ಗಾಂಧೀ ಖೇಲ್‌ರತ್ನ, ಧ್ಯಾನ್‌ಚಂದ್ ಮತ್ತು ದ್ರೋಣಾಚಾರ್ಯ ಪ್ರಶಸ್ತಿಗಳಿಗೆ ಹೊಸ ನಿಯಮಗಳನ್ನು ಅಳವಡಿಸುವ ಪ್ರಸ್ತಾಪವನ್ನು ಕೇಂದ್ರ ಸರಕಾರ ಅಂಗೀಕರಿಸಿದೆ.

**ಹೊಸ ನಿಯಮಗಳೇನು?**

- ಒಲಿಂಪಿಕ್ಸ್ ಕ್ರೀಡಾಕೂಟ (ಬೇಸಿಗೆ, ಚಳಿಗಾಲ ಮತ್ತು ಪ್ಯಾರಲಿಂಪಿಕ್ಸ್), ಏಷ್ಯನ್ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್, ವಿಶ್ವಕಪ್ ಮತ್ತು ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಪದಕ ವಿಜೇತ ಕ್ರೀಡಾಪಟುಗಳಿಗೆ 90 ಅಂಕ ಲಭಿಸಲಿದೆ.
- ಧ್ಯಾನ್‌ಚಂದ್ ಪ್ರಶಸ್ತಿಗೆ 70 ಅಂಕ ದೊರೆಯಲಿದೆ. ಆಯ್ಕೆ ಸಮಿತಿ ಖೇಲ್‌ರತ್ನ ಮತ್ತು ದ್ರೋಣಾಚಾರ್ಯ ಪ್ರಶಸ್ತಿಗಳಿಗೆ ಹೆಚ್ಚುವರಿ ಶೇಕಡಾ 10 ಅಂಕ ನೀಡುವ ಅಧಿಕಾರ ಹೊಂದಿರುತ್ತದೆ.

- ಧ್ಯಾನ್‌ಚಂದ್ ಪ್ರಶಸ್ತಿಗೆ ಶೇಕಡಾ 30ರಷ್ಟು ಅಂಕ ನೀಡಬಹುದಾಗಿದೆ. ಇದರಲ್ಲಿ ಕ್ರೀಡೆಯ ಅಭಿವೃದ್ಧಿ, ಕ್ರೀಡಾಪಟುವಿನ ವೃತ್ತಿಜೀವನ, ಸಾಧನೆ, ನಾಯಕತ್ವ, ಶಿಸ್ತು ಮುಂತಾದ ವಿಷಯಗಳು ಸೇರ್ಪಡೆಗೊಂಡಿರುತ್ತದೆ.
- ಇನ್ನು ಮುಂದೆ ಖೇಲ್‌ರತ್ನ ಪ್ರಶಸ್ತಿಗೆ ಪ್ರತಿ ವರ್ಷ ಒಬ್ಬರಿಗೆ ಮಾತ್ರ ಸೀಮಿತಗೊಳಿಸಲಾಗಿದ್ದು, 5 ಮಂದಿಗೆ ದ್ರೋಣಾಚಾರ್ಯ ಪ್ರಶಸ್ತಿ ಹಾಗೂ ಧ್ಯಾನ್‌ಚಂದ್ ಪ್ರಶಸ್ತಿಗೆ ಗರಿಷ್ಠ ಮೂವರನ್ನು ಆಯ್ಕೆ ಮಾಡಬಹುದಾಗಿದೆ.
- ಆದರೆ ಇಬ್ಬರನ್ನು ಮಾತ್ರ ಆಯ್ಕೆ ಮಾಡುವ ಸಂದರ್ಭದಲ್ಲಿ ಈ ನಿಯಮಗಳು ಅನ್ವಯ ಆಗುವುದಿಲ್ಲ. ಅದರಲ್ಲೂ 20 ಮತ್ತು ಅದಕ್ಕಿಂತ ಹೆಚ್ಚಿನ ವರ್ಷ ಕ್ರೀಡೆಯಲ್ಲಿ ತೊಡಗಿಸಿಕೊಂಡ ಕ್ರೀಡಾಪಟು ಹಾಗೂ ಕೋಚ್‌ಗಳು ನೇರ ಅರ್ಹತೆ ಪಡೆಯಲಿದ್ದಾರೆ.
- ಕ್ರಿಕೆಟ್‌ನಲ್ಲಿ ಮಾತ್ರ ಆಟಗಾರನ ವೈಯಕ್ತಿಕ ಸಾಧನೆಯನ್ನು ಆಯ್ಕೆ ಸಮಿತಿ ಪರಿಗಣಿಸಲಿದೆ. ಇದೇ ಮೊದಲ ಬಾರಿ ಆಯ್ಕೆ ಸಮಿತಿಗೆ ಕ್ರೀಡಾ ಪತ್ರಕರ್ತರು, ತಜ್ಞರು ಮತ್ತು ವೀಕ್ಷಕ ವಿವರಣೆಕಾರರೂ ಸೇರಿಸಿಕೊಳ್ಳಬಹುದಾಗಿದೆ.

## ಭಾರತದಲ್ಲಿ ಪ್ಲಾಸ್ಟಿಕ್ ನೋಟುಗಳನ್ನು ಬಿಡುಗಡೆಗೊಳಿಸಲು ಸಜ್ಜಾಗಿರುವ ರಿಸರ್ವ್ ಬ್ಯಾಂಕ್

ಭಾರತೀಯ ರಿಸರ್ವ್ ಬ್ಯಾಂಕ್ ಈ ವರ್ಷದ ಮಧ್ಯಾವಧಿಯಲ್ಲಿ 10 ಮುಖಬೆಲೆಯ ಒಂದು ಶತಕೋಟಿ ನೋಟುಗಳನ್ನು ಪ್ರಯೋಗಾರ್ಥವಾಗಿ ಬಿಡುಗಡೆ ಮಾಡಲು ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಪ್ಲಾಸ್ಟಿಕ್ ನೋಟುಗಳ ಕುರಿತ ಒಂದಷ್ಟು ಮಾಹಿತಿ ಇಲ್ಲಿದೆ.

**ಪ್ರಥಮ ಪ್ರಯೋಗ:**

- ಪ್ಲಾಸ್ಟಿಕ್ ನೋಟುಗಳ ಪ್ರಯೋಗಕ್ಕೆ ಮೊದಲು ಕೈಹಾಕಿದ್ದು ಹೈಟಿ ಮತ್ತು ಕೋಸ್ಟರಿಕಾ ದೇಶಗಳು. 1980ರ ದಶಕದಲ್ಲಿ ನಡೆದ ಈ ಪ್ರಯೋಗಕ್ಕೆ ಈ ಎರಡು ದೇಶಗಳು ಅಮೆರಿಕದ ತಂತ್ರಜ್ಞಾನವನ್ನು ಬಳಸಿಕೊಂಡಿದ್ದವು. ಆದರೆ, ಶಾಹಿಯ ಸಮಸ್ಯೆಯಿಂದಾಗಿ ಈ ಪ್ರಯೋಗ ಕೈಕೊಟ್ಟಿತು.
- 1983ರಲ್ಲಿ ಬ್ರಿಟನ್ ತಂತ್ರಜ್ಞಾನವನ್ನು ಬಳಸಿಕೊಂಡು ಐಲ್ ಆಫ್ ಮ್ಯಾನ್ ಎನ್ನುವ ದೇಶ ಪ್ಲಾಸ್ಟಿಕ್‌ನೋಟನ್ನು ಬಿಡುಗಡೆ ಮಾಡಿತ್ತು. ಈ ಪ್ರಯೋಗದ ಯಶಸ್ಸಿಗೂ ಶಾಹಿಯೇ ಅಡ್ಡಿಯಾಯಿತು.
- ವಿಶ್ವದಲ್ಲೇ ಮೊದಲ ಬಾರಿ ಸಂಪೂರ್ಣವಾಗಿ ಪ್ಲಾಸ್ಟಿಕ್ ನೋಟುಗಳನ್ನು ಪರಿಚಯಸಿದ್ದು ಆಸ್ಟ್ರೇಲಿಯಾ. 1988ರಿಂದ ಆಸ್ಟ್ರೇಲಿಯಾದಲ್ಲಿ ಪ್ಲಾಸ್ಟಿಕ್ ನೋಟುಗಳು ಚಲಾವಣೆಯಲ್ಲಿವೆ.

**ಏನಿದರ ಉಪಯೋಗ?**

ಪ್ಲಾಸ್ಟಿಕ್ ನೋಟುಗಳ ಆಯುಷ್ಯ ಜಾಸ್ತಿ. ಈ ನೋಟುಗಳು ಬೇಗ ಹಾಳಾಗುವುದಿಲ್ಲ. ಉಷ್ಣವಲಯದಲ್ಲಿರುವ ರಾಷ್ಟ್ರಗಳಿಗೆ ಈ ರೀತಿಯ ನೋಟು ಹೇಳಿಮಾಡಿಸಿದಂತಿದೆ. ತಾಪಮಾನದ ಏರಿಕೆಯಿಂದಾಗಿ ಮೈಯಿಂದ ಇಳಿಯುವ ಬೆವರನ್ನು ಕಾಗದದ ನೋಟುಗಳು ಹೀರಿಕೊಳ್ಳಬಹುದು. ಆದರೆ, ಪ್ಲಾಸ್ಟಿಕ್ ನೋಟುಗಳಲ್ಲಿ ಈ ಸಮಸ್ಯೆಯಿಲ್ಲ. ಕಾಗದದ ನೋಟುಗಳಿಗೆ ಹೋಲಿಸಿದರೆ ಈ ರೀತಿಯ ನೋಟುಗಳ ಉತ್ಪದನಾ ವೆಚ್ಚವೂ ಕಡಿಮೆ, ನಕಲು ಮಾಡುವುದು ಕಷ್ಟ.



ಸಂಪರ್ಕಿಸಿ:karunaduexams.com

**ಅನನುಕೂಲಗಳೇನು?**

ಪ್ಲಾಸ್ಟಿಕ್ ನೋಟುಗಳನ್ನು ಮಡಚಲು ಸಾಧ್ಯವಿಲ್ಲ. ಕೈಯಿಂದ ಬಹುಬೇಗ ಜಾರುತ್ತವೆ 23ಕ್ಕೂ ಹೆಚ್ಚು ದೇಶಗಳು ಆಸ್ಟ್ರೇಲಿಯಾ, ಬ್ರೂನೈ, ಪಪುವ ನ್ಯೂಗಿನಿಯಾ, ನ್ಯೂಜಿಲ್ಯಾಂಡ್, ರೊಮಾನಿಯಾ, ವಿಯೆಟ್ನಾಂ ಸೇರಿ ವಿಶ್ವದಲ್ಲಿ 23ಕ್ಕೂ ಹೆಚ್ಚು ದೇಶಗಳು ಪಾಲಿಮರ್ ಅಥವಾ ಪ್ಲಾಸ್ಟಿಕ್ ನೋಟುಗಳನ್ನು ಬಳಸುತ್ತಿವೆ. 2016ಕ್ಕೆ ಬ್ರಿಟನ್‌ನಲ್ಲಿ 2016ರ ವೇಳೆಗೆ ದೇಶದಲ್ಲಿ ಪ್ಲಾಸ್ಟಿಕ್ ನೋಟುಗಳನ್ನು ಪರಿಚಯಿಸುವುದಾಗಿ ಬ್ರಿಟನ್‌ನ ಕೇಂದ್ರ ಬ್ಯಾಂಕ್ ಘೋಷಿಸಿದೆ.

**ಹೇಗೆ ತಯಾರಿಸುತ್ತಾರೆ?**

ಪ್ಲಾಸ್ಟಿಕ್ ನೋಟುಗಳನ್ನು ಪಾಲಿ ಪ್ರೊಪೈಲಿನ್‌ನಿಂದ ನಿರ್ಮಿಸಿರುವ ಫ್ಲೆಕ್ಸಿಬಲ್ ಹಾಗೂ ಪಾರದರ್ಶಕ ಫಿಲ್ಮ್‌ನಿಂದ ಉತ್ಪಾದಿಸಲಾಗುತ್ತದೆ. ಈ ನೋಟುಗಳ ಎದುರು ಮತ್ತು ಹಿಂದೆ ವಿಶೇಷವಾಗಿ ತಯಾರಿಸಿದ ಶಾಹಿಯ ಪದರಗಳ ಕೋಟಿಂಗ್ ಮಾಡಲಾಗಿರುತ್ತದೆ.

**ಮುಂದಿನ ಯೋಜನೆ:**

ಆರ್‌ಬಿಐ ಕೊಚ್ಚಿ, ಮೈಸೂರು, ಜೈಪುರ, ಶಿಮ್ಲಾ ಮತ್ತು ಭುವನೇಶ್ವರದಲ್ಲಿ 10 ಮುಖಬೆಲೆಯ ಪ್ಲಾಸ್ಟಿಕ್ ನೋಟುಗಳನ್ನು ಪ್ರಯೋಗಾರ್ಥವಾಗಿ ಪರಿಚಯಿಸಲು ಉದ್ದೇಶಿಸಿದೆ. ಇಲ್ಲಿ ಸಿಗುವ ಪ್ರತಿಕ್ರಿಯೆಯನ್ನು ನೋಡಿಕೊಂಡು ಬಳಿಕ ಹೆಚ್ಚಿನ ಮುಖಬೆಲೆಯ ನೋಟುಗಳನ್ನೂ ಪರಿಚಯಿಸುವ ಉದ್ದೇಶ ಆರ್‌ಬಿಐಗಿದೆ. ಇತ್ತೀಚೆಗೆ ಪಾಕಿಸ್ತಾನದ ಸರ್ಕಾರದ ನೆರವಿನೊಂದಿಗೆ ಹೆಚ್ಚುತ್ತಿರುವ ನಕಲಿ ನೋಟುಗಳ ದಂದೆಯಿಂದಾಗಿ ಭಾರತದ ಆರ್ಥಿಕತೆಗೆ ದೊಡ್ಡಮಟ್ಟದ ಹೊಡೆತ ಬೀಳುತ್ತಿದೆ. ಜತೆಗೆ, ಉಷ್ಣವಲಯದಲ್ಲಿರುವ ಕಾರಣ ಕಾಗದದ ನೋಟುಗಳು ಬಹುಬೇಗ ಹಾಳಾಗುತ್ತಿವೆ.

**ಬ್ರೈಲ್ ಲಿಪಿ ಒಳಗೊಂಡ ಭಾರತದ ಮೊದಲ ರೈಲಿಗೆ ಚಾಲನೆ**

ದೃಷ್ಟಿ ಹೀನರಿಗೆ ಓದಲು ಅನುಕೂಲವಾದ ಬ್ರೇಲ್ ಲಿಪಿ ಸಂದೇಶಗಳನ್ನು ಇದೇ ಮೊದಲ ಬಾರಿ ಭಾರತದ ರೈಲೊಂದರಲ್ಲಿ ಅಳವಡಿಸಲಾಗಿದೆ. ದಿಲ್ಲಿ-ಪುರಿ ಮಧ್ಯೆ ಸಂಚರಿಸುವ ಪುರುಷೋತ್ತಮ್ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಈ ವಿನೂತನ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ.

**ಬ್ರೈಲ್ ಲಿಪಿ ಎಲ್ಲೆಲ್ಲಿ?**

ತ್ರೀ ಟೈರ್ ಏಸಿ ಬೋಗಿಯೊಂದರಲ್ಲಿ ಮೊದಲ ಬಾರಿಗೆ ಬ್ರೇಲ್ ಲಿಪಿ ಸಂದೇಶ ಫಲಕಗಳನ್ನು ಸಿದ್ಧ ಪಡಿಸಲಾಗಿದ್ದು, ಈ ತಿಂಗಳ ಅಂತ್ಯದ ವೇಳೆಗೆ ಕಾರ್ಯಾರಂಭ ಮಾಡಲಿದೆ. ಬೋಗಿಯಲ್ಲಿರುವ ಎಲ್ಲ ಸೂಚನಾ ಫಲಕಗಳು ಬ್ರೇಲ್ ಲಿಪಿಯನ್ನು ಹೊಂದಲಿವೆ. ಉದಾಹರಣೆಗೆ: ಬರ್ಥ್, ಶೌಚಾಲಯ, ವಾಷ್ ಬೇಸಿನ್, ಬಾಗಿಲುಗಳು, ಎಚ್ಚರಿಕೆ ಸಂದೇಶ ಸಾರುವ ಮತ್ತು ಸೂಚನೆ ನೀಡುವ ಫಲಕಗಳು ಬ್ರೇಲ್ ಲಿಪಿಯನ್ನೂ ಹೊಂದಲಿವೆ.

**ಉಪಯೋಗವೇನು?**

ಈ ಲಿಪಿ ಸಂದೇಶ ಹೊಂದಿರುವ ಮೊದಲ ಬೋಗಿಯನ್ನು ಚೆನ್ನೈನ ಬೋಗಿ ಕಾರ್ಖಾನೆಯಲ್ಲಿ ಸಿದ್ಧಪಡಿಸಲಾಗಿದೆ. ಈವರೆಗೆ ರೈಲು ಬೋಗಿಗಳಲ್ಲಿ ಸಂದೇಶ ಫಲಕಗಳಾದ ಸೀಟ್ ನಂಬರ್, ಸೂಚನೆ, ಸಂಕೇತಗಳನ್ನು ಸ್ಟಿಕ್ಕರ್ ಅಥವಾ ಲೋಹದ ಪ್ಲೇಟ್‌ಗಳಲ್ಲಿ ಮಾತ್ರ ಹಾಕಲಾಗುತ್ತಿತ್ತು. ದೃಷ್ಟಿಹೀನರಿಗೆ ಇವುಗಳನ್ನು ಗುರ್ತಿಸುವುದು ಕಷ್ಟವಾಗುತ್ತಿತ್ತು. ಈ ಹೊಸ ವ್ಯವಸ್ಥೆಯಿಂದ ಅಂಧ ಪ್ರಯಾಣಿಕರಿಗೆ ನೆರವಾಗಲಿದೆ.

# ಅಂತರರಾಷ್ಟ್ರೀಯ

## ಸಿರಿಯಾ ಮಕ್ಕಳ ಸಂರಕ್ಷಣೆಗೆ "No Lost Generation" ಕಾರ್ಯಕ್ರಮ ಜಾರಿಗೊಳಿಸಿದ ವಿಶ್ವಸಂಸ್ಥೆ

ಯುದ್ಧ ಪೀಡಿತ ಸಿರಿಯಾದಲ್ಲಿನ ಮಕ್ಕಳ ಸಂರಕ್ಷಣೆಗೆ ವಿಶ್ವಸಂಸ್ಥೆ ಮತ್ತು ಅದರ ಅಂಗ ಸಂಸ್ಥೆಯಾದ ಯುನೆಸೆಫ್ (UNICEF) "No Lost Generation" ಎಂಬ ಹೊಸ ಯೋಜನೆಯೊಂದನ್ನು ಜಾರಿಗೊಳಿಸಿದೆ. ಸಿರಿಯಾದ ಭೀಕರ ಯುದ್ಧದಲ್ಲಿ ಅನಾಥರಾಗಿರುವ ಮಕ್ಕಳ ಮುಂದಿನ ಭವಿಷ್ಯವನ್ನು ಉತ್ತಮಪಡಿಸುವುದು ಈ ಯೋಜನೆಯ ಪ್ರಮುಖ ಗುರಿ.

- ಯುನಿಸೆಫ್ ನ ವಿನೂತನ ಯೋಜನೆಯ ಮೂಲಕ 1 ಬಿಲಿಯನ್ ದತ್ತಿ ಸಂಗ್ರಹ ಮಾಡುವ ಮೂಲಕ ಸಿರಿಯಾ ಯುದ್ಧದಿಂದ ಕಂಗಾಲಾಗಿರುವ ಮಕ್ಕಳ ಭವಿಷ್ಯಕ್ಕೆ ಭದ್ರ ಬುನಾದಿ ಹಾಕುವ ಗುರಿಯನ್ನು ಹೊಂದಲಾಗಿದೆ.
- ಕಳೆದ ಮೂರು ವರ್ಷಗಳಿಂದ ನಡೆಯುತ್ತಿರುವ ಈ ಯುದ್ಧದಲ್ಲಿ ಸಾವಿರಾರು ಮಕ್ಕಳು ನಿರ್ಗತಿಕರಾಗಿದ್ದು, ಶಾಲೆಯಿಂದ ಹೊರ ಉಳಿದಿರುವುದಾಗಿ ಯುನಿಸೆಫ್ ಹೇಳಿದೆ.
- ಕೇವಲ ಸಿರಿಯಾ ಅಲ್ಲದೇ ನೆರೆಯ ರಾಷ್ಟ್ರಗಳಲ್ಲಿ ನಿರಾಶ್ರಿತರಾಗಿರುವ ಮಕ್ಕಳಿಗೂ ಈ ಯೋಜನೆ ಅನ್ವಯವಾಗಲಿದೆ.
- ಮಕ್ಕಳಗೆ ಉತ್ತಮ ಶಿಕ್ಷಣ ಮತ್ತಿತ್ತರ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಉತ್ತಮ ಜೀವನ ಕೊಡುವುದು ಈ ಯೋಜನೆಯ ಪ್ರಮುಖ ಉದ್ದೇಶ ಎಂದು ಯುನಿಸೆಫ್ ತಿಳಿಸಿದೆ.

## 2016: ಅಂತರರಾಷ್ಟ್ರೀಯ ದ್ವಿದಳ ಧಾನ್ಯ ವರ್ಷ ವಿಶ್ವ ಸಂಸ್ಥೆ ಘೋಷಣೆ

ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ 2016 ನೇ ವರ್ಷವನ್ನು ಅಂತರರಾಷ್ಟ್ರೀಯ ದ್ವಿದಳ ಧಾನ್ಯ ವರ್ಷವೆಂದು ಒಮ್ಮತದಿಂದ ಘೋಷಿಸಿದೆ. ದ್ವಿದಳ ಧಾನ್ಯಗಳ ಬಳಕೆಯನ್ನು ಪ್ರೋತ್ಸಾಹಿಸಲು ಈ ನಿರ್ಧಾರ ಪ್ರಮುಖ ಪಾತ್ರವಹಿಸಲಿದೆ.

- ದ್ವಿದಳ ಧಾನ್ಯಗಳು ಮನುಷ್ಯನ ಆರೋಗ್ಯದಲ್ಲಿ ಪ್ರಮುಖ ಪಾತ್ರವಹಿಸಿವೆ. ದ್ವಿದಳ ಧಾನ್ಯಗಳ ಸೇವನೆಯಿಂದ ದೇಹಕ್ಕೆ ಬೇಕಾಗುವ ಎಲ್ಲಾ ಪ್ರಮುಖ ಪೋಶಕಾಂಶಗಳ ಪೂರೈಕೆಯಾಗುವುದಾಗಿ ಸಂಶೋಧನೆಯಿಂದ ತಿಳಿದು ಬಂದಿದೆ.
- ದಿನ ನಿತ್ಯದ ಆಹಾರ ಸೇವನೆಯಲ್ಲಿ ದ್ವಿದಳ ಧಾನ್ಯಗಳ ಪ್ರಾಮುಖ್ಯತೆಯನ್ನು ಅರಿತ ವಿಶ್ವಸಂಸ್ಥೆ 2016 ವರ್ಷವನ್ನು ಅಂತರರಾಷ್ಟ್ರೀಯ ದ್ವಿದಳ ಧಾನ್ಯಗಳ ವರ್ಷವೆಂದು ಘೋಷಿಸುವ ಮೂಲಕ ದ್ವಿದಳ ಧಾನ್ಯಗಳ ಬಳಕೆಯ ಬಗ್ಗೆ ಅರಿವು ಮೂಡಿಸಲು ಸಹಕಾರಿಯಾಗಲಿದೆ. ಅಲ್ಲದೇ ದ್ವಿದಳ ಧಾನ್ಯಗಳ ಬಗ್ಗೆ ಇನ್ನು ಅನೇಕ ಸಂಶೋಧನೆ ನಡೆಸಲು ಅನುಕೂಲವಾಗಲಿದೆ.
- ಭಾರತ ವಿಶ್ವದಲ್ಲೇ ಅತಿ ಹೆಚ್ಚು ದ್ವಿದಳ ಧಾನ್ಯ ಉತ್ಪಾದಿಸುವ ಹಾಗೂ ಬಳಸುವ ರಾಷ್ಟ್ರ. ಆದರೆ ತಲಾ ವ್ಯಕ್ತಿಗೆ ಲಭ್ಯವಿರುವ ಪ್ರಮಾಣ ಮಾತ್ರ ಕೇವಲ ವರ್ಷಕ್ಕೆ 15 ಕೆ.ಜಿ ಇದ್ದು ವಿಶ್ವದ ಇತರೆ ರಾಷ್ಟ್ರಗಳಿ ಹೋಲಿಸಿದರೆ ತೀರಾ ಕಡಿಮೆ ಇದೆ.

## ಪರಮಾಣು ಬಳಕೆ: ಪಟ್ಟನ್ನು ಸಡಿಲಗೊಳಿಸದ ಇರಾನ್

ಇರಾನ್ ಯುರೇನಿಯಂ ಸಂಸ್ಕರಣೆ ಮತ್ತು ಬಳಕೆ ಸೇರಿದಂತೆ ವಿಶ್ವದ ಆರು ರಾಷ್ಟ್ರಗಳು ಹಾಗೂ ಇರಾನ್ ನಡುವೆ ನಡೆಯುತ್ತಿದ್ದ ಮಾತುಕತೆಗೆ ಕೊನೆಗೂ ಇರಾನ್ ಒಪ್ಪಿಗೆ ನೀಡಿದೆ. ವಿಶ್ವ ಸಂಸ್ಥೆಯ ಭದ್ರತಾ ಮಂಡಳಿ ಐದು ರಾಷ್ಟ್ರಗಳು (ಅಮೆರಿಕಾ, ರಷ್ಯಾ, ಫ್ರಾನ್ಸ್, ಚೀನಾ ಮತ್ತು

ಬ್ರಿಟನ್) ಹಾಗೂ ಜರ್ಮನಿ ದೇಶ ಇರಾನ್ ಪರಮಾಣು ಬಳಕೆಯ ಮೇಲೆ ನಿರ್ಬಂಧ ಹೇರಲು ಅನೇಕ ಬಾರಿ ಮಾತುಕತೆ ನಡೆಸಲಾಗಿತ್ತು. ಆದರೆ ಇರಾನ್ ಮಾತ್ರ ಪರಮಾಣು ಬಳಕೆಯನ್ನು ಮುಂದುವರೆಸುವುದಾಗಿ ವಿಶ್ವಕ್ಕೆ ಸೆಡ್ಡು ಹೊಡಿದಿತ್ತು. ಇರಾನ್ ನ ತನ್ನ ಪಟ್ಟನ್ನು ಸಡಿಲಗೊಳಿಸದ ಹಿನ್ನಲೆಯಲ್ಲಿ ಅಮೆರಿಕಾ ಸೇರಿದಂತೆ ಪ್ರಮುಖ ರಾಷ್ಟ್ರಗಳು ಇರಾನ್ ಮೇಲೆ ಆರ್ಥಿಕ ದಿಗ್ಬಂಧನ ಹೇರಿದ್ದವು, ಈ ಹಿನ್ನಲೆಯಲ್ಲಿ ಇರಾನ್ ನಲ್ಲಿ ಆರ್ಥಿಕ ಬಿಕ್ಕಟ್ಟು ಎದುರಾಗಿತ್ತು. ಆರ್ಥಿಕ ಸಂಕಷ್ಟದಿಂದ ಹೊರಬರುವ ಸಲುವಾಗಿ ಇರಾನ್ ಸದ್ಯ ಪರಮಾಣು ಬಳಕೆಯನ್ನು ಮಿತಗೊಳಿಸಲು ಸಮ್ಮತಿಸಿದೆ.

**ಮಾತುಕತೆಯ ಮುಖ್ಯಾಂಶಗಳು**:

- ಸದ್ಯ ಇರಾನ್ ವಿಶ್ವದ ಪ್ರಮುಖ ರಾಷ್ಟ್ರಗಳ ಒತ್ತಡಕ್ಕೆ ಮಣಿದಿದ್ದು, ಯುರೇನಿಯಂ ಸಂಸ್ಕರಣೆ ಮತ್ತು ಬಳಕೆಯನ್ನು ಕಡಿಮೆಗೊಳಿಸಲಿದೆ. ಇರಾನ್ ನ ಈ ನಿರ್ಧಾರದಿಂದಾಗಿ ಇರಾನ್ ಮೇಲೆ ಹೇರಲಾದ ಆರ್ಥಿಕ ದಿಗ್ಬಂಧನವನ್ನು ತೆರವುಗೊಳಿಸಲಿವೆ.
- ಇರಾನ್ ಜತೆ ನಡೆಸಲಾದ ಮಾತುಕತೆಯ ಫಲದಂತೆ ಇದೇ ಜನವರಿ 20 ರಿಂದಲೇ ಅಂತರರಾಷ್ಟ್ರೀಯ ಮಟ್ಟದ ತಜ್ಞರು ಇರಾನ್ ಯುರೇನಿಯಂ ಸಂಸ್ಕರಣ ಘಟಕಗಳನ್ನು ಮುಂದಿನ ಆರು ದಿನಗಳ ಕಾಲ ತಪಾಸಣೆ ಮಾಡಲಿರುವರು. ಆರು ತಿಂಗಳ ನಂತರ ಇರಾನ್ ಪರಮಾಣು ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಲಿದೆ ಎಂಬ ವಿಶ್ವಾಸವನ್ನು ವಿಶ್ವ ಸಂಸ್ಥೆಯ ಭದ್ರತೆ ಪಡೆಗಳ ವ್ಯಕ್ತಪಡಿಸಿವೆ.
- ಇರಾನ್ ತಾನು ಕೈಗೊಂಡಿರುವ ಯುರೇನಿಯಂ ಸಂಸ್ಕರಣೆಯಿಂದ ಅಣ್ವಸ್ತ್ರಗಳ ತಯಾರಿಕೆಗೆ ಬಳಸಬಹುದು ಎಂಬುದು ವಿಶ್ವದ ಪ್ರಮುಖ ರಾಷ್ಟ್ರಗಳ ವಾದವಾಗಿತ್ತು. ಆದರೆ ಈ ಹೇಳಿಕೆಯನ್ನು ತಳ್ಳಿ ಹಾಕಿದ ಇರಾನ್ ತಾನು ನಡೆಸುತ್ತಿರುವ ಯುರೇನಿಯಂ ಸಂಸ್ಕರಣೆ ಕೇವಲ ಶಾಂತಿಯುತ ಉದ್ದೇಶಕ್ಕಾಗಿ ಮಾತ್ರ ಎಂದು ಹೇಳಿದೆ,

<u>ಮಕ್ಕಳಿಗೂ ದಯಾಮರಣದ ಹಕ್ಕನ್ನು ದಯಪಾಲಿಸಿದ ವಿಶ್ವದ ಮೊದಲ ದೇಶ ಬೆಲ್ಜಿಯಂ</u>

ಮರಣಶಯ್ಯೆಯಲ್ಲಿರುವ ಎಲ್ಲ ವಯಸ್ಸಿನ ಮಕ್ಕಳಿಗೂ ದಯಾಮರಣ ಹಕ್ಕು ದಯ ಪಾಲಿಸುವ 'ಸಾಯುವ ಹಕ್ಕು' ಶಾಸನವನ್ನು ಭಾರಿ ಬಹುಮತದೊಂದಿಗೆ ಬೆಲ್ಜಿಯಂ ಸಂಸತ್ತು ಅಂಗೀಕರಿಸಿದೆ. ತನ್ಮೂಲಕ ಇಚ್ಛಾಮರಣ ಹೊಂದಲು ಮಕ್ಕಳಿಗೂ ಅವಕಾಶ ನೀಡಿದ ಮೊದಲ ದೇಶ ಎಂಬ ಪಟ್ಟಕ್ಕೇರಿದೆ.

**ವಿಶ್ವದ ಪ್ರಥಮ ರಾಷ್ಟ್ರ**:

- ಈವರೆಗಿನ ಹಾಲೆಂಡ್‌ನಲ್ಲಿ 12 ವರ್ಷ ಮೇಲ್ಪಟ್ಟ ಮಕ್ಕಳಿಗೆ ಮಾತ್ರ ತಮ್ಮ ಜೀವನ ಅಂತ್ಯ ಮಾಡಿಕೊಳ್ಳುವ ಅವಕಾಶವಿತ್ತು. ಇದು ಅತಿ ಕನಿಷ್ಠ ವಯಸ್ಸಿನವರಿಗೆ ಇಚ್ಛಾಮರಣ ಕಲ್ಪಿಸಿದ ಮೊದಲ ದೇಶ ಎನ್ನಿಸಿಕೊಂಡಿತ್ತು.
- ಇದೀಗ ಹಾಲೆಂಡ್ ದಾಖಲೆ ಮುರಿದಿರುವ ಬೆಲ್ಜಿಯಂ, ಯಾವುದೇ ವಯಸ್ಸಿನ ಭೇದಭಾವವಿಲ್ಲದೇ ಎಲ್ಲರಿಗೂ ದಯಾಮರಣ ಕಲ್ಪಿಸುವ ಕಾನೂನಿಗೆ ಅಂಗೀಕಾರ ನೀಡಿದೆ.
- 2002ರಲ್ಲಿ ಬೆಲ್ಜಿಯಂನಲ್ಲಿ ಜಾರಿಗೆ ಬಂದ ಇಚ್ಛಾಮರಣ ಕಾಯ್ದೆ ಪ್ರಕಾರ ವಯಸ್ಕರಿಗೆ ಮಾತ್ರ ಇಚ್ಛಾಮರಣ ಹೊಂದಲು ಅವಕಾಶವಿತ್ತು.

- ಎಲ್ಲ ವಯಸ್ಸಿನ ಮಕ್ಕಳಿಗೂ ದಯಾಮರಣ ಹಕ್ಕು ದಯಪಾಲಿಸುವ ಶಾಸನದ ಪರವಾಗಿ 86, ವಿರುದ್ಧವಾಗಿ 44 ಮಂದಿ ಮತ ಚಲಾಯಿಸಿದರು. 22 ಮಂದಿ ಮತದಾನದಿಂದ ದೂರ ಉಳಿದರು.
- 2006ರಿಂದ 2012ರ ಅವಧಿಯಲ್ಲಿ 20 ವರ್ಷದೊಳಗಿನ ಒಬ್ಬ ವ್ಯಕ್ತಿಯಿಂದ ಮಾತ್ರ ದಯಾಮರಣಕ್ಕೆ ಅವಕಾಶ ಕೋರಿ ಬೆಲ್ಜಿಯಂ ಸರ್ಕಾರಕ್ಕೆ ಅರ್ಜಿ ಬಂದಿದೆ.
- ಸಾಮಾನ್ಯವಾಗಿ ಬೆಲ್ಜಿಯಂನಲ್ಲಿ ಪ್ರತಿ ವರ್ಷ 1000ಕ್ಕೂ ಹೆಚ್ಚು ಇಂತಹ ಅರ್ಜಿಗಳು ಸಲ್ಲಿಕೆಯಾಗುತ್ತವೆ.

**ಸೌದಿ ಅರೇಬಿಯ ಹಾಗೂ ಭಾರತ ಜಂಟಿ ಸಹಭಾಗಿತ್ವದಲ್ಲಿ 'ಬಾಸ್ಮತಿ ಅಕ್ಕಿ ಹಬ್'**

ಮಧ್ಯಪೂರ್ವ ಹಾಗೂ ಉತ್ತರ ಆಫ್ರಿಕಾ ರಾಷ್ಟ್ರಗಳ ಬಾಸ್ಮತಿ ಅಕ್ಕಿ ಗ್ರಾಹಕರ ಬೇಡಿಕೆ ಪೂರೈಸಲು ಸೌದಿ ಅರೇಬಿಯ ಹಾಗೂ ಭಾರತ ಜಂಟಿ ಸಹಭಾಗಿತ್ವದಲ್ಲಿ ದುಬೈನಲ್ಲಿ 'ಬಾಸ್ಮತಿ ಅಕ್ಕಿ ಹಬ್' ಆರಂಭಿಸಲಾಗಿದೆ. ಬಾಸ್ಮತಿ ಅಕ್ಕಿಯ ದಾಸ್ತಾನು ಹಾಗೂ ವಿತರಣೆ ಕಾರ್ಯ ಇಲ್ಲಿಂದ ನಡೆಯಲಿದೆ.

**ಪ್ಯಾನ್ ಗಲ್ಫ್ ಕಂಪನಿ ಹೊಣೆ:**

ಮೊದಲ ವರ್ಷ ಒಂದು ಲಕ್ಷ ಟನ್ ಬಾಸ್ಮತಿ ಅಕ್ಕಿಯನ್ನು ದುಬೈನ ಜಬೇಲಾಲಿ ಎಂಬಲ್ಲಿ ದಾಸ್ತಾನು ಮಾಡುವ ಹೊಣೆಯನ್ನು 'ಪ್ಯಾನ್ ಗಲ್ಫ್ ಫುಡ್ ಆಯಂಡ್ ಇಂಡಸ್ಟ್ರೀಸ್' ಹೊತ್ತುಕೊಂಡಿದೆ. ಅಕ್ಕಿಯ ದಾಸ್ತಾನು ಜತೆಗೆ ಸಂಸ್ಕರಣೆ, ಪಾಲಿಷ್ ಮಾಡುವಿಕೆ ಹಾಗೂ ಪ್ಯಾಕಿಂಗ್ ಕಾರ್ಯವೂ ಇಲ್ಲಿಯೇ ನಡೆಯಲಿದೆ. ಇದಕ್ಕಾಗಿ ಮುಂದಿನ ಒಂದು ವರ್ಷಕ್ಕೆ ಸುಮಾರು ರೂ.16.73 ಕೋಟಿ ಹೂಡಿಕೆ ಮಾಡಲು ನಿರ್ಧರಿಸಲಾಗಿದೆ.

**ಉಪಯೋಗವೇನು?**

ಸೌದಿ ಅರೇಬಿಯಾ ಸೇರಿದಂತೆ ಯೆಮೆನ್, ಇರಾನ್, ಇರಾಕ್, ಬಹರೇನ್, ಒಮಾನ್, ಯುಎಇ ಹಾಗೂ ಕುವೈತ್‌ನಲ್ಲಿ ಬಾಸ್ಮತಿ ಅಕ್ಕಿಗೆ ಅಧಿಕ ಬೇಡಿಕೆ ಇದ್ದು, ಈ ರಾಷ್ಟ್ರಗಳಲ್ಲಿ ಪ್ರತಿವರ್ಷ 40 ಲಕ್ಷ ಟನ್ ಇಂತಹ ಅಕ್ಕಿಯ ಬಳಕೆಯಾಗುತ್ತಿದೆ. ಲೀಫ್ ಕಂಪೆನಿಯ ಪ್ರತಿಷ್ಠಿತ ಬ್ರಾಂಡ್‌ಗಳಾದ ಬಿಗ್ ಡ್ಯಾಡ್, ಅಂಕಲ್ ಚೆಫ್, ಲಜೀಜ್ ಹಾಗೂ ಆಫ್ರಿನ್ ಹೆಸರಿನ ಬಾಸ್ಮತಿ ಅಕ್ಕಿ ಮಾರುಕಟ್ಟೆಯಲ್ಲಿ ಲಭ್ಯವಾಗಲಿದೆ

# ವ್ಯವಹಾರ

## ಭಾರತದ ಕಂಪನಿಯೊಂದಿಗೆ ಪ್ರತಿಷ್ಠಿತ ಲಿವರ್‌ಪೂಲ್ ತಂಡ ಒಪ್ಪಂದ

ಇಂಗ್ಲೀಷ್ ಪ್ರೀಮಿಯರ್ ಲೀಗ್‌ನ ಪ್ರತಿಷ್ಠಿತ ಕ್ಲಬ್‌ಗಳಲ್ಲಿ ಒಂದಾದ ಲಿವರ್‌ಪೂಲ್ ತಂಡ ಈಗ ಭಾರತದ ಕಂಪನಿಯೊಂದಿಗೆ ಇದೇ ಮೊದಲ ಬಾರಿ ಮಾರುಕಟ್ಟೆ ಒಪ್ಪಂದ ಮಾಡಿಕೊಂಡಿದೆ. ಇದರೊಂದಿಗೆ ಭಾರತದಲ್ಲಿ ಪ್ರತಿಷ್ಠಿತ ಫುಟ್ಬಾಲ್ ಟೂರ್ನಿ ಕೈ ಕಾಲೂರಲು ಪ್ರಯತ್ನಗಳು ಆರಂಭವಾದಂತಾಗಿದೆ.

**ಒಪ್ಪಂದವೇನು?**

- ರೆಡ್ಸ್ ಮೂರು ವರ್ಷಗಳ ಅವಧಿಗೆ ಕೊಲೊ ಸ್ಮಾರ್ಟ್ ಫೋನ್ ಜತೆ ಒಪ್ಪಂದ ಮಾಡಿಕೊಂಡಿದೆ. ಇದರಿಂದ ಭಾರತೀಯ ಅಭಿಮಾನಿಗಳು ಈ ಮೊಬೈಲ್‌ನಲ್ಲಿ ಕಿರು ಚಿತ್ರಗಳನ್ನು ವೀಕ್ಷಿಸಬಹುದಾಗಿದ್ದು, ಲಿವರ್‌ಪೂಲ್ ತಂಡದ ಪ್ರಮುಖ ಆಟಗಾರರನ್ನು ಭೇಟಿ ಮಾಡುವ ಅವಕಾಶ ಕಲ್ಪಿಸಿದೆ.
- ಲಿವರ್‌ಪೂಲ್ ತಂಡ ಇಂಗ್ಲೀಷ್ ಪ್ರೀಮಿಯರ್ ಲೀಗ್‌ನಲ್ಲಿ ಪ್ರಸ್ತುತ ನಾಲ್ಕನೇ ಸ್ಥಾನದಲ್ಲಿದ್ದು, ಭಾರತೀಯ ಮಾರುಕಟ್ಟೆಗೆ ಪ್ರವೇಶಿಸಿದೆ.
- ಸದ್ಯದಲ್ಲೇ ಪುಣೆಯಲ್ಲಿ ಅಂತಾರಾಷ್ಟ್ರೀಯ ಅಕಾಡೆಮಿಯನ್ನು ತೆರೆಯಲಿದೆ. ಕಳೆದ ಸೆಪ್ಟೆಂಬರ್‌ನಲ್ಲಿ ಇಂಗ್ಲೀಷ್ ಚಾಂಪಿಯನ್ ಮ್ಯಾಂಚೆಸ್ಟರ್ ಯುನೈಟೆಡ್ ಮತ್ತು ಲಿವರ್‌ಪೂಲ್ ತಂಡಗಳು ಭಾರತೀಯ ಟಯರ್ ಕಂಪನಿ ಅಪೊಲೊ ಜತೆ ಮೂರು ವರ್ಷಗಳ ಒಪ್ಪಂದ ಮಾಡಿಕೊಂಡಿದ್ದವು.

## ದೇಶದಾದ್ಯಂತ ಎಟಿಎಂ ಮತ್ತು ಕಿರು ಎಟಿಎಂ ಪ್ರಾರಂಭಿಸಲು ಭಾರತೀಯ ಅಂಚೆ ಇಲಾಖೆ ಸಜ್ಜು

ಬ್ಯಾಂಕ್ ಆರಂಭಿಸಲು ಅನುಮತಿ ಕೋರಿ ಸಲ್ಲಿಸಿರುವ ಅರ್ಜಿಗೆ ರಿಸರ್ವ್ ಬ್ಯಾಂಕ್ ಸಮ್ಮತಿ ಸೂಚಿಸುವ ಮುನ್ನವೇ ದೇಶಾದ್ಯಂತ ಬರೋಬ್ಬರಿ 3 ಸಾವಿರ ಎಟಿಎಂ ಹಾಗೂ 1.35 ಲಕ್ಷ ಕಿರು (ಮೈಕ್ರೋ) ಎಟಿಎಂಗಳನ್ನು ತೆರೆಯಲು ಭಾರತೀಯ ಅಂಚೆ ಇಲಾಖೆ ಮುಂದಾಗಿದೆ. 2015 ರೊಳಗಾಗಿ ಈ ಎಲ್ಲ ಎಟಿಎಂಗಳು ಕಾರ್ಯನಿರ್ವಹಿಸಲಿವೆ. ಮೊದಲ ಹಂತದಲ್ಲಿ ಫೆಬ್ರವರಿ 5 ರಂದು ಬೆಂಗಳೂರು, ನವದೆಹಲಿ ಹಾಗೂ ಚೆನ್ನೈನಲ್ಲಿ ಮೊದಲ ಮೂರು ಎಟಿಎಂಗಳು ಆರಂಭವಾಗಲಿವೆ ಎಂದು ತಿಳಿಸಿದ್ದಾರೆ.

**'ಭಾರತೀಯ ಅಂಚೆ' ಬ್ರಾಂಡ್:**

ಈ ವರ್ಷದಲ್ಲಿ 'ಭಾರತೀಯ ಅಂಚೆ' ಬ್ರಾಂಡ್‌ನಡಿ ಸಾವಿರ ಎಟಿಎಂಗಳು ತಲೆ ಎತ್ತಲಿವೆ. ಮುಂದಿನ 18 ತಿಂಗಳಲ್ಲಿ ಈ ಸಂಖ್ಯೆ ಮೂರು ಸಾವಿರಕ್ಕೆ ಏರಿಕೆಯಾಗಲಿದೆ. ಅಂಚೆ ಇಲಾಖೆಯಲ್ಲಿ ಉಳಿತಾಯ ಖಾತೆ ಹೊಂದಿರುವ 26 ಕೋಟಿ ಮಂದಿ ಮಾತ್ರ ಈ ಎಟಿಎಂಗಳನ್ನು ಬಳಸಬಹುದು. ಆರು ತಿಂಗಳ ಬಳಿಕ ಅಂಚೆ ಎಟಿಎಂ ಗ್ರಾಹಕರು ಇತರ ಬ್ಯಾಂಕ್‌ಗಳ ಎಟಿಎಂಗಳನ್ನು ಮತ್ತು ಇತರ ಬ್ಯಾಂಕ್‌ಗಳ ಗ್ರಾಹಕರು ಅಂಚೆ ಎಟಿಎಂಗಳನ್ನು ಬಳಸಿಕೊಳ್ಳುವುದಕ್ಕೆ ರಿಸರ್ವ್ ಬ್ಯಾಂಕ್‌ನಿಂದ ಅನುಮತಿ ಸಿಗುವ ವಿಶ್ವಾಸವಿದೆ. ಎಟಿಎಂ ವ್ಯವಸ್ಥೆ ಆರಂಭಿಸಲು ಇನ್ಫೋಸಿಸ್ ಕಂಪನಿ ನೆರವು ಪಡೆಯಲಾಗುತ್ತಿದೆ ಎಂದು ವಿವರಿಸಿದ್ದಾರೆ.



ಸಂಪರ್ಕಿಸಿ:karunaduexams.com

**6 ಲಕ್ಷ ಕೋಟಿ ಹಣ:**

ಅಂಚೆ ಇಲಾಖೆಯ ಉಳಿತಾಯ ಖಾತೆಗಳಲ್ಲಿ 6 ಲಕ್ಷ ಕೋಟಿ ರೂ.ನಷ್ಟು ಹಣವಿದೆ. ಇದು ಭಾರತೀಯ ಸ್ಟೇಟ್ ಬ್ಯಾಂಕ್‌ನ ಉಳಿತಾಯ ಖಾತೆಗಳಲ್ಲಿರುವ ಒಟ್ಟು ಹಣಕ್ಕಿಂತ ಅರ್ಧದಷ್ಟು ಹಾಗೂ ಖಾಸಗಿ ಕ್ಷೇತ್ರದ ದೈತ್ಯ ಬ್ಯಾಂಕು ಐಸಿಐಸಿಐನ ಉಳಿತಾಯ ಖಾತೆಗಳಲ್ಲಿರುವ ಹಣಕ್ಕಿಂತ ಎರಡುಪಟ್ಟು ಹೆಚ್ಚು. ದೇಶದಲ್ಲಿ 1.55 ಲಕ್ಷ ಅಂಚೆ ಕಚೇರಿಗಳಿದ್ದು, ಈ ಪೈಕಿ ಶೇ.90ರಷ್ಟು ಗ್ರಾಮೀಣ ಪ್ರದೇಶದಲ್ಲೇ ಇರುವುದು ವಿಶೇಷ. ಉಳಿತಾಯ ಖಾತೆಯಲ್ಲಿ ಹಣ ಇಡುವ ಗ್ರಾಹಕರಿಗೆ ಅಂಚೆ ಇಲಾಖೆ ಶೇ.4ರಷ್ಟು ಬಡ್ಡಿಯನ್ನೂ ನೀಡುತ್ತಿದೆ. ಚೆಕ್‌ಬುಕ್ ಸೌಲಭ್ಯ ಕೂಡ ಒದಗಿಸುತ್ತಿದೆ. ಅಂಚೆ ಇಲಾಖೆಯನ್ನು ಬ್ಯಾಂಕ್ ಆಗಿ ಪರಿವರ್ತಿಸಲು ಅನುಮತಿ ಕೋರಿ ರಿಸರ್ವ್ ಬ್ಯಾಂಕ್‌ಗೆ ಈಗಾಗಲೇ ಅರ್ಜಿ ಸಲ್ಲಿಸಿದೆ.

**ಕಿರು ಎಟಿಎಂಗಳು:**

ವಾಣಿಜ್ಯ ಬ್ಯಾಂಕುಗಳ ಎಟಿಎಂನಂತೆಯೇ ಅಂಚೆ ಎಟಿಎಂಗಳೂ ಕಾರ್ಯನಿರ್ವಹಿಸಲಿವೆ. ಆದರೆ, ಕಿರು ಎಟಿಎಂಗಳು ಸಣ್ಣ ಅಂಚೆ ಕಚೇರಿ ಮಟ್ಟದಲ್ಲಿರಲಿದ್ದು, ಇದು ಕೈಯಿಂದ ಬಳಸುವ (ಒಂದು ರೀತಿ ಅಂಗಡಿಗಳಲ್ಲಿ ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡುಗಳನ್ನು ಸ್ವೈಪ್ ಮಾಡುವ ರೀತಿಯ) ಉಪಕರಣವಾಗಿರುತ್ತವೆ.  ಅಂಚೆ ಎಟಿಎಂಗೆ ಇನ್ಫೋಸಿಸ್ ಸಾಫ್ಟ್‌ವೇರ್ ಅಳವಡಿಸಲಾಗಿದೆ

**<u>ಮೊಬೈಲ್ ಮೆಸೇಜಿಂಗ್ ಸರ್ವೀಸ್ ವಾಟ್ಸ್‌ಆಪ್ ಅನ್ನು ಖರೀದಿಸಿದ ಫೇಸ್‌ಬುಕ್</u>**

ಮೊಬೈಲ್ ತಂತ್ರಜ್ಞಾನದ ಇತಿಹಾಸದಲ್ಲೇ ಅತಿದೊಡ್ಡ ಡೀಲ್ ನಡೆದಿದೆ. ಜನಪ್ರಿಯ ಮೊಬೈಲ್ ಮೆಸೇಜಿಂಗ್ ಸರ್ವೀಸ್ ಆಗಿರುವ ವಾಟ್ಸ್‌ಆಪ್ ಅನ್ನು ಬರೋಬ್ಬರಿ 12 ಲಕ್ಷ ಸಾವಿರ ಕೋಟಿಗೆ ಫೇಸ್‌ಬುಕ್ ಖರೀದಿಸಿದೆ.

**ಯಾಕೆ ಡೀಲ್?**

ಸಾಮಾಜಿಕ ತಾಣಗಳಲ್ಲಿ ಜನಪ್ರಿಯತೆ ಗಳಿಸಿರುವ ಫೇಸ್‌ಬುಕ್‌ಗೆ ಮೊಬೈಲ್ ಸಂವಹನದಲ್ಲೂ ಪಾರುಪತ್ಯ ಗಳಿಸಬೇಕೆಂಬ ಧ್ಯೇಯವಿತ್ತು. ಅದರ ಪರಿಣಾಮವೇ ಫೇಸ್‌ಬುಕ್-ವಾಟ್ಸ್‌ಆಪ್ ಡೀಲ್. ಈ ಬೃಹತ್ ಒಪ್ಪಂದದ ಮೂಲಕ ಫೇಸ್‌ಬುಕ್ ಸ್ಥಾಪಕ ಮಾರ್ಕ್ ಝುಕರ್‌ಬರ್ಗ್ ಮೊಬೈಲ್ ಸಂವಹನ ಲೋಕಕ್ಕೆ ಕಾಲಿಟ್ಟಿದ್ದಾರೆ. ವಿಶೇಷವಾಗಿ ಯುವಜನರ ಮನಸ್ಸಿನಲ್ಲಿ ಸ್ಥಾನ ಪಡೆಯುವುದು ಹಾಗೂ ತನ್ನ ಜನಪ್ರಿಯತೆಯನ್ನು ಇನ್ನಷ್ಟು ಹೆಚ್ಚಿಸುವುದು ಇದರ ಹಿಂದಿನ ಮುಖ್ಯ ಉದ್ದೇಶವಾಗಿದೆ.

**ಒಪ್ಪಂದದಲ್ಲೇನಿದೆ?**

ಒಟ್ಟು 19 ಶತಕೋಟಿ ಡಾಲರ್‌ಗೆ ವಾಟ್ಸ್‌ಆಪ್ ಅನ್ನು ಫೇಸ್‌ಬುಕ್ ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದೆ. ಒಪ್ಪಂದದ ಪ್ರಕಾರ, ಫೇಸ್‌ಬುಕ್ ಮೊದಲು 4 ಶತಕೋಟಿ ಡಾಲರ್ ಅನ್ನು ನಗದು ರೂಪದಲ್ಲಿ ನೀಡಲಿದೆ. ನಂತರ ಫೇಸ್‌ಬುಕ್‌ನ ಷೇರುಗಳ ರೂಪದಲ್ಲಿ 12 ಶತಕೋಟಿ ಡಾಲರ್ ನೀಡಲಿದೆ. ಅಷ್ಟೇ ಅಲ್ಲದೆ, ವಾಟ್ಸ್‌ಆಪ್ ಸ್ಥಾಪಕರು ಮತ್ತು ನೌಕರರಿಗೆ 3 ಶತಕೋಟಿ ಡಾಲರ್ ಮೊತ್ತದ ನಿಯಂತ್ರಿತ ಷೇರುಗಳನ್ನು ಫೇಸ್‌ಬುಕ್ ಒದಗಿಸಲಿದೆ. ಒಪ್ಪಂದದಂತೆ, ವಾಟ್ಸ್‌ಆಪ್ ಸ್ಥಾಪಕ ಜಾನ್ ಕೌಮ್ ಫೇಸ್‌ಬುಕ್‌ನ ನಿರ್ದೇಶಕರ ಮಂಡಳಿಯಲ್ಲಿ ಸ್ಥಾನ ಪಡೆಯಲಿದ್ದಾರೆ.



**ದೊಡ್ಡ ಡೀಲ್?**

ವಾಟ್ಸ್‌ಆಪ್-ಫೇಸ್‌ಬುಕ್ ಡೀಲ್ 19 ಶತಕೋಟಿ ಡಾಲರ್(12 ಲಕ್ಷ ಸಾವಿರ ಕೋಟಿ). 2011ರಲ್ಲಿ 8.5 ಬಿಲಿಯನ್ ಡಾಲರ್(528 ಶತಕೋಟಿ ಡಾಲರ್)ಗೆ ಸ್ಕೈಪ್ ಅನ್ನು ಮೈಕ್ರೋಸಾಫ್ಟ್ ಖರೀದಿಸಿತ್ತು. ಮೋಟೊರೋಲಾ ಖರೀದಿ ವೇಳೆ ಲೆನೋವೋ 2.9 ಶತಕೋಟಿ ಡಾಲರ್ ಅನ್ನು ಗೂಗಲ್‌ಗೆ ನೀಡಿತ್ತು. ಇತ್ತೀಚೆಗಷ್ಟೇ ಫೇಸ್‌ಬುಕ್ 1 ಶತಕೋಟಿ ಡಾಲರ್‌ಗೆ ಇನ್‌ಸ್ಟಾಗ್ರಾಂ ಅನ್ನು ಸ್ವಾಧೀನಪಡಿಸಿಕೊಂಡಿತ್ತು. ಹಾಗಾಗಿ ಮೊಬೈಲ್ ಟೆಕ್ ವಲಯದ ಇತಿಹಾಸದಲ್ಲೇ ಅತ್ಯಂತ ಹೆಚ್ಚಿನ ಮೊತ್ತಕ್ಕೆ ನಡೆದ ಒಪ್ಪಂದವೆಂದರೆ ವಾಟ್ಸ್‌ಆಪ್-ಫೇಸ್‌ಬುಕ್ ಡೀಲ್.

**ವಾಟ್ಸ್‌ಆಪ್ ಇತಿಹಾಸ:**

ವಾಟ್ಸ್‌ಆಪ್‌ನ ಸ್ಥಾಪಕ ಹಾಗೂ ಸಿಇಒ ಜಾನ್ ಕೌಮ್(37) ಮೂಲತಃ ಉಕ್ರೇನ್‌ನವರು. ಕಡು ಬಡ ಕುಟುಂಬವರಾಗಿದ್ದ ಕೌಮ್ ಕುಟುಂಬ ಕ್ಯಾಲಿಫೋರ್ನಿಯಾಗೆ ವಲಸೆ ಬಂದಿತ್ತು. ಆಗ ಕೌಮ್‌ಗೆ 16 ವರ್ಷ. ಸರ್ಕಾರವು ಅತಿ ಬಡವರಿಗೆ ನೀಡುವ ಆಹಾರದ ಕೂಪನ್ ಮೂಲಕ ಆಹಾರ ಪಡೆದು ಕೌಮ್ ಕುಟುಂಬ ದಿನದೂಡುತ್ತಿತ್ತು. ಒಂದು ಕಾಲದಲ್ಲಿ ಅಂತಹ ದುರವಸ್ಥೆಯ ಬದುಕಿಗೆ ಸಾಕ್ಷಿಯಾಗಿದ್ದ ಕೌಮ್ ಈಗ ಕೋಟ್ಯಧಿಪತಿಯಾಗಿ ಬೆಳೆದಿದ್ದಾರೆ. ಬಿಲ್ ಗೇಟ್ಸ್, ಮಾರ್ಕ್ ಝುಕರ್‌ಬರ್ಗ್‌ರಂತೆಯೇ ಕೌಮ್ ಕೂಡ ಅರ್ಧದಲ್ಲೇ ಕಾಲೇಜು ಬಿಟ್ಟವರು. ಬಾಗಿಲು ತಟ್ಟಿ ವಾಪಸಾಗಿದ್ದ ವಾಟ್ಸ್‌ಆಯಪ್‌ನ ಸಹಸ್ಥಾಪಕ ಬ್ರಿಯಾನ್ ಆಯಕ್ಟನ್ 2009ರಲ್ಲಿ ಕೆಲಸಕ್ಕಾಗಿ ಸ್ವತಃ ಫೇಸ್‌ಬುಕ್ ಹಾಗೂ ಟ್ವಿಟರ್ ಕಚೇರಿಯ ಬಾಗಿಲು ತಟ್ಟಿದ್ದ. ಆದರೆ ಕೆಲಸ ಗಿಟ್ಟಿಸಿಕೊಳ್ಳುವಲ್ಲಿ ವಿಫಲನಾದ. ನಂತರ ವಾಟ್ಸ್‌ಆಯಪ್‌ನ ಸಹಸ್ಥಾಪಕನ ಹುದ್ದೆ ಬ್ರಿಯಾನ್‌ನ ಬದುಕಿಗ ಗತಿಯನ್ನೇ ಬದಲಾಯಿಸಿತು. ಅಂದು ಕೆಲಸೇ ನೀಡದೇ ವಾಪಸ್ ಕಳುಹಿಸಿದ್ದ ಅದೇ ಫೇಸ್‌ಬುಕ್ ಈಗ ಕೌಮ್- ಬ್ರಿಯಾನ್‌ರ ಕಂಪನಿಯನ್ನು ಖರೀದಿಸಿದೆ ಎನ್ನುವುದು ವಿಪರ್ಯಾಸ.

**ಪರಿಣಾಮವೇನು?**

ಈ ಡೀಲ್‌ನಿಂದಾಗಿ ವಾಟ್ಸ್‌ಆಯಪ್ ಬ್ರ್ಯಾಂಡ್ ಮೇಲೆ ಯಾವುದೇ ಪರಿಣಾಮ ಬೀರದು. ಈ ಬ್ರ್ಯಾಂಡ್ ಅನ್ನು ಇದೇ ರೀತಿ ಮುಂದುವರಿಸಿಕೊಂಡು ಹೋಗುವುದಾಗಿ ಝುಕರ್‌ಬರ್ಗ್ ಭರವಸೆ ನೀಡಿದ್ದಾರೆ. ಜತೆಗೆ ವಾಟ್ಸ್‌ಆಯಪ್‌ನ ಪ್ರಧಾನ ಕಚೇರಿಯೂ ಕ್ಯಾಲಿಫೋರ್ನಿಯಾದ ಮೌಂಟನ್ ವ್ಯೂವ್‌ನಲ್ಲೇ ಇರಲಿದೆ. ಅದು ಸ್ವತಂತ್ರವಾಗಿ ಕಾರ್ಯನಿರ್ವಹಿಸಲಿದೆ. ಈಗ ಹೇಗೆ ಸೇವೆ ನೀಡುತ್ತದೆಯೋ ಅದೇ ರೀತಿ ಸೇವೆ ನೀಡಲಿದೆ. ಬಳಕೆದಾರರಿಗೆ ಈಗಿನಂತೆಯೇ ಜಾಹೀರಾತುಗಳ ಕಿರಿಕಿರಿಯೂ ಇರುವುದಿಲ್ಲ.

## ಸ್ವದೇಶಿ ನಿರ್ಮಿತ ಸರಸ ವಿಮಾನ ಅಧಿಕೃತ ಹಾರಟಕ್ಕೆ ಸಿದ್ಧ

ಸ್ವದೇಶಿ ನಿರ್ಮಿತ 14 ಸೀಟುಗಳ ಮಲ್ಟಿರೋಲ್ ವಿಮಾನ ಸರಸ್ 15 ದಿನದೊಳಗೆ ಮೊದಲ ಅಧಿಕೃತ ಹಾರಾಟಕ್ಕೆ ಸಿದ್ಧವಾಗಲಿದೆ. ಈ ಮೇಲ್ದರ್ಜೆಗೇರಿಸಲ್ಪಟ್ಟ ಸರಸ್ ಆಕಾಶಕ್ಕೇರಬೇಕಾದರೆ ಲೋಸ್ಪೀಡ್ ಟ್ಯಾಕ್ಸಿ, ಹೈ ಸ್ಪೀಡ್ ಟ್ಯಾಕ್ಸಿ ಮತ್ತಿತರ ಪರೀಕ್ಷೆ ಕಡ್ಡಾಯ. 15 ದಿನದೊಳಗೆ ಪರೀಕ್ಷೆಗಳು ಪೂರ್ಣಗೊಳ್ಳುವ ಸಾಧ್ಯತೆ ಇದೆ. ಬಳಿಕ ಸರಸ್ ಅನ್ನು ವಾಯುಸೇನೆಗೆ ಸೇರ್ಪಡೆಗೊಳಿಸುವ ಕಾರ್ಯ ಆರಂಭವಾಗಲಿದೆ.

**ಏನಿದು ಸರಸ್?**

ಇದೊಂದು ದೇಶೀಯವಾಗಿ ನಿರ್ಮಿತ ಎರಡು ಎಂಜಿನ್‌ನ ಮಲ್ಟಿರೋಲ್ ಹಗುರ ಸಾಗಣೆ ವಿಮಾನವಾಗಿದೆ. ಈ ವಿಮಾನವನ್ನು ದೇಶೀಯ ಕಂಪನಿಗಳಾದ ನ್ಯಾಷನಲ್ ಏರೋಸ್ಪೇಸ್ ಲ್ಯಾಬೊರೇಟರೀಸ್(ಎನ್‌ಎಎಲ್) ಮತ್ತು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್(ಎಚ್‌ಎಎಲ್) ವಿನ್ಯಾಸಗೊಳಿಸಿದೆ. ಭಾರತೀಯ ವಾಯುಸೇನೆಗೆಂದೇ ಈ ವಿಮಾನ ನಿರ್ಮಿಸಲಾಗುತ್ತಿದೆ.

**ಕಾರ್ಯವೇನು?**

ಪ್ರಯಾಣಿಕರು ಮತ್ತು ಸರಕು ಸಾಗಣೆ, ರಿಮೋಟ್ ಸೆನ್ಸಿಂಗ್, ತರಬೇತಿಗಾಗಿ, ಏರಿಯಲ್ ಹಾಗೂ ಕರಾವಳಿ ಕಣ್ಗಾವಲು, ಗಡಿ ಗಸ್ತು, ವೈದ್ಯಕೀಯ ಸ್ಥಳಾಂತರ ಯೋಜನೆಗಳಿಗೂ ಈ ವಿಮಾನ ಬಳಸಬಹುದು.

**ಅಭಿವೃದ್ಧಿ ಹಂತಗಳು:**

ರಷ್ಯಾದ ಸಹಭಾಗಿತ್ವದೊಂದಿಗೆ 1991ರಲ್ಲಿ ಸರಸ್ ಅಭಿವೃದ್ಧಿಪಡಿಸುವ ಕಾರ್ಯ ಆರಂಭಿಸಲಾಯಿತು. ಹಣಕಾಸು ಸಮಸ್ಯೆಯಿಂದಾಗಿ ರಷ್ಯಾ ಆರಂಭಿಕ ಹಂತದಲ್ಲೇ ಈ ಯೋಜನೆಯಿಂದ ಹಿಂದೆ ಸರಿಯಿತು. 1995ರಲ್ಲಿ ಯೋಜನೆಗೆ ಚುರುಕು ನೀಡಲು ಸರ್ಕಾರ ಸಿವಿಲ್ ಏರ್‌ಕ್ರಾಫ್ಟ್ ಆಯಂಡ್ ಡೆವಲಪ್‌ಮೆಂಟ್ ಅನ್ನು ಸ್ಥಾಪಿಸಿತು. ಸರ್ಕಾರದ ಅನುಮೋದನೆ ಸಮಸ್ಯೆ ಹಿನ್ನೆಲೆಯಲ್ಲಿ ಸರ್ಕಾರ 1998ರಲ್ಲಿ ಸರಸ್ ಅಭಿವೃದ್ಧಿ ಕಾರ್ಯವನ್ನು ತಾತ್ಕಾಲಿಕವಾಗಿ ರದ್ದು ಮಾಡಿತು. 1999ರಲ್ಲಿ ಮತ್ತೆ ಅಭಿವೃದ್ಧಿ ಕಾರ್ಯಕ್ಕೆ ವೇಗ ಸಿಕ್ಕಿತು.

**ವಿಮಾನ ವಿನ್ಯಾಸ:**

ಮೊದಲ ಮಾದರಿ ವಿಮಾನ ಎರಡು 850 ಎಚ್‌ಪಿ ಪ್ರಟ್ ಆಯಂಡ್ ವೈಟ್ನೆ ಪಿಟಿ6ಎ- 66 ಟರ್ಬೋಪ್ರಾಪ್ ಎಂಜಿನ್‌ಗಳನ್ನು ಹೊಂದಿತ್ತು. ಮೊದಲ ಹಾರಾಟ ನಡೆದದ್ದು ಮೇ 29, 2004ರಂದು. ಈ ವಿಮಾನ ಅರೆ ಏರ್‌ಫೀಲ್ಡ್‌ಗಳು, ಹುಲ್ಲಿನಿಂದ ಕೂಡಿದ ರನ್‌ವೇಗಳ ಮೂಲಕ ಹಗಲು ರಾತ್ರಿ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಹೊಂದಿವೆ. ಹೈ ಆಲ್ಟಿಟ್ಯೂಡ್ ಹಾಗೂ ಉಷ್ಣ ವಾತಾವರಣದಲ್ಲೂ ಕಾರ್ಯಾಚರಿಸುವ ಸಾಮರ್ಥ್ಯ ಹೊಂದಿದೆ. ಈ ವಿಮಾನದ ಅಭಿವೃದ್ಧಿಯು ಸ್ವದೇಶಿ ಪ್ರಯಾಣಿಕರ ವಿಮಾನವನ್ನು ಹೊಂದುವ ದೇಶದ ಪ್ರಯತ್ನವಾಗಿದೆ.



**ಹೊಸ ಮಾದರಿ:**

ಈ ವಿಮಾನ ಅಭಿವೃದ್ಧಿ 50, 100 ಸೀಟುಗಳ ವಿಮಾನ ಅಭಿವೃದ್ಧಿಪಡಿಸಲು ಭಾರತದ ಏರೋ ಎಂಜಿನಿಯರ್‌ಗಳು ಗಮನಹರಿಸಲಿದ್ದಾರೆ. 14 ಸೀಟರ್ ಸದ್ಯ ಸರಸ್‌ನ ಮೊದಲ ಮಾದರಿಯನ್ನು ಆಧುನಿಕ ವಿನ್ಯಾಸದ ಅಗತ್ಯಕ್ಕೆ ತಕ್ಕಂತೆ ಮೇಲ್ದರ್ಜೆಗೇರಿಸಲಾಗಿದೆ. 850 ಎಚ್‌ಪಿ ಎಂಜಿನ್ ಬದಲು 1,200 ಎಚ್‌ಪಿ ಎಂಜಿನ್ ಅಳವಡಿಸಲಾಗಿದೆ. ಈ ವಿಮಾನ 14 ಸೀಟುಗಳನ್ನು ಹೊಂದಿರಲಿದೆ.

**ಅಣು ಸಾಮಾಗ್ರಿಗಳ ಭದ್ರತೆ ಸೂಚ್ಯಂಕ (Nuclear Materials Security Index): ಭಾರತಕ್ಕೆ 23 ನೇ ಸ್ಥಾನ**

ಅಮೆರಿಕಾ ಮೂಲದ ನ್ಯೂಕ್ಲಿಯರ್ ಥ್ರೀಟ್ ಇನ್ನಿಯೇಟಿವ್ (Nuclear Threat Initiative) ಹೊರತಂದಿರುವ ಅಣು ಸಾಮಾಗ್ರಿಗಳ ಭದ್ರತೆ ಸೂಚ್ಯಂಕ 2014 ಪಟ್ಟಿಯಲ್ಲಿ ಭಾರತ 23 ನೇ ಸ್ಥಾನವನ್ನು ಪಡೆದುಕೊಂಡಿದೆ. ಅಣು ಸಾಮಾಗ್ರಿಗಳ ಸುರಕ್ಷಿತ ಬಳಕೆಯಲ್ಲಿ ಭಾರತ ಸಾಕಷ್ಟು ಹಿಂದೆ ಬಿದ್ದಿದೆ ಎಂದು ಸಮೀಕ್ಷೆಯಲ್ಲಿ ಹೇಳಲಾಗಿದೆ.

- ವಿಶ್ವದಲ್ಲಿ ಅತಿ ಹೆಚ್ಚಾಗಿ ಪರಮಾಣು ಬಳಸುವ 25 ರಾಷ್ಟ್ರಗಳಲ್ಲಿ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ. ಸಮೀಕ್ಷೆಯಲ್ಲಿ 100 ಅಂಕಗಳಿಗೆ 44 ಅಂಕಗಳನ್ನು ಗಳಿಸುವ ಮೂಲಕ ಭಾರತ 23 ನೇ ಸ್ಥಾನವನ್ನು ಪಡೆದುಕೊಂಡಿದೆ.
- ಅಮೆರಿಕ ಪಟ್ಟಿಯಲ್ಲಿ ಪ್ರಥಮ ಸ್ಥಾನವನ್ನು ಕಾಯ್ದುಕೊಂಡರೆ, ಭಾರತದ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ ಮತ್ತು ಚೀನಾ ರಾಷ್ಟ್ರಗಳು ಭಾರತಕ್ಕಿಂತ ಮುಂದಿದೆ ಎಂಬುದೇ ಸಮಾಧಾನಕರ ಸಂಗತಿ.
- ಸಮೀಕ್ಷೆಯಲ್ಲಿ 64 ಅಂಕಗಳನ್ನು ಗಳಿಸುವ ಮೂಲಕ ಚೀನಾ 20 ನೇ ಸ್ಥಾನವನ್ನು ಪಡೆದುಕೊಂಡಿದೆ. ಪಾಕಿಸ್ತಾನ 46 ಅಂಕಗಳೊಂದಿಗೆ 22 ನೇ ಸ್ಥಾನವನ್ನು ಗಳಿಸಿಕೊಂಡಿದೆ.

**ಭಾರತದ ಕಳಪೆ ಸಾಧನೆಗೆ ಕಾರಣ:**

- ಅಣು ಸಾಮಾಗ್ರಿಗಳನ್ನು ಸುರಕ್ಷಿತವಾಗಿ ಬಳಸುವಲ್ಲಿ ಭಾರತ ಸಾಕಷ್ಟು ಹಿಂದೆ ಬಿದ್ದಿರುವುದು ಸಮೀಕ್ಷೆಯಿಂದ ದೃಢಪಟ್ಟಿದೆ. ಪಾಕಿಸ್ತಾನ ಹಾಗೂ ಚೀನಾ ದೇಶಗಳು ಈ ಪಟ್ಟಿಯಲ್ಲಿ ಭಾರತವನ್ನು ಹಿಂದಿವೆ. ಭ್ರಷ್ಟಚಾರ, ರಾಜಕೀಯ ಇಚ್ಛಾಶಕ್ತಿ ಕೊರತೆ, ಸೂಕ್ತ ಕಾನೂನು ಚೌಕಟ್ಟು ಇಲ್ಲದಿರುವುದು ಹಾಗೂ ಕಾನೂನು ಅನುಷ್ಠಾನದಲ್ಲಿ ಹಿತಾಸಕ್ತಿ ಕೊರತೆ ಜತೆಗೆ ಹೆಚ್ಚುತ್ತಿರುವ ಪರಮಾಣು ಶಸ್ತಾಸ್ತ್ರಗಳ ಬಳಕೆ ಭಾರತದ ಕಳಪೆ ಸಾಧನೆಗೆ ಕನ್ನಡಿ ಹಿಡಿದಿವೆ.

**ನಾಸಾದಿಂದ 'ಸಂಪನ್ಮೂಲ ಅನ್ವೇಷಕ ಮತ್ತು ಗಂಗಾವತರಣ' ಎಂಬ ಹೊಸ ಯೋಜನೆಗಳು**

ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾ ಚಂದ್ರನಲ್ಲಿ ನೀರನ್ನು, ಮಂಗಳನಲ್ಲಿ ಆಮ್ಲಜನಕವನ್ನೂ ಆ ಗ್ರಹಗಳಲ್ಲಿ ದೊರಕುವಂತಹ ಧಾತುಗಳನ್ನು (ಮೂಲವಸ್ತು) ಬಳಸಿಕೊಂಡೇ ಉತ್ಪಾದಿಸುವ ಮಹತ್ತರ ಗುರಿಯನ್ನು ಹಾಕಿಕೊಂಡಿದೆ.



**ಯೋಜನೆಯ ಹೆಸರೇನು?**

ಇದಕ್ಕೆ 'ಸಂಪನ್ಮೂಲ ಅನ್ವೇಷಕ' ಯೋಜನೆ ಎಂದು ಹೆಸರಿಸಿದೆ. ಭೂಮಿಯ ಸ್ವಾಭಾವಿಕ ಉಪಗ್ರಹ ಚಂದ್ರನಲ್ಲಿ 2018ರ ಹೊತ್ತಿಗೆ 'ಗಂಗಾವತರಣ' ಮಾಡುವ ಉದ್ದೇಶ ಇರಿಸಿಕೊಂಡಿರುವ ನಾಸಾ, ಇದಕ್ಕಾಗಿ ಈಗಾಗಲೇ ರೂಪರೇಷೆ ಸಿದ್ಧಮಾಡಿದೆ.

**ಏನಿದು ಯೋಜನೆ?**

- ಚಂದ್ರನಂಗಳದಲ್ಲಿ ರೋವರ್ ಸಾಧನ ಇಳಿಸಿ, ಅದರಲ್ಲಿರುವ ಶೋಧಕದಿಂದ ಜಲಜನಕ ಧಾತುವುಳ್ಳ ಖನಿಜವನ್ನು ಪತ್ತೆ ಮಾಡುವುದು.
- ನಂತರ ಅದನ್ನು ಬೈರಿಗೆಯಿಂದ ಕೊರೆದು, ಸುತ್ತಿಗೆಯಿಂದ ಕುಟ್ಟಿ ಬಿಸಿ ಮಾಡಿ ಅದರಲ್ಲಿ ಸಾಂದ್ರವಾಗಿರುವ ಜಲದ್ರವ್ಯವನ್ನು ಆವಿ ರೂಪದಲ್ಲಿ ಹೊರತೆಗೆಯುವುದು ಈ ಯೋಜನೆಯ ರೂಪರೇಷೆ.
- ಹಾಗೆಯೇ ಅಂಗಾರಕನಲ್ಲಿ 2020ರ ಹೊತ್ತಿಗೆ ಜೀವವಾಯುವನ್ನು ಉತ್ಪಾದಿಸುವ ಗುರಿ ಇರಿಸಿಕೊಂಡಿರುವ ನಾಸಾ ಇದಕ್ಕೆ ಇನ್ನೂ ಸಾಧನ- ಸಲಕರಣೆಗಳ ರೂಪರೇಷೆ ಸಿದ್ಧಮಾಡಿಲ್ಲ.
- ನಾಸಾ ಇದೇ ಮೊದಲ ಬಾರಿಗೆ ಭೂಮಿಯ ಬೇರೆಡೆ ಸಂಪನ್ಮೂಲ ಬಳಕೆಯನ್ನು ಪ್ರಮಾಣೀಕರಿಸುವ (ಐಎಸ್‌ಆರ್‌ಯು) ಪ್ರಯತ್ನ ಮಾಡಿದೆ.



## ಕ್ರೀಡೆ

**ಫುಟ್ ಬಾಲ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ 2013ನೇ ಸಾಲಿನ ಫಿಫಾ 'ಬ್ಯಾಲನ್ ಡಿ ಓರ್' ಪ್ರಶಸ್ತಿ**

ಪೋರ್ಚುಗಲ್‌ನ ಸ್ಟಾರ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ 2013ನೇ ಸಾಲಿನ ಫಿಫಾ 'ಬ್ಯಾಲನ್ ಡಿ ಓರ್' ಪ್ರಶಸ್ತಿ ಮುಡಿಗೇರಿಸಿ ಕೊಳ್ಳುವ ಮೂಲಕ ಕಳೆದ ನಾಲ್ಕು ವರ್ಷಗಳಿಂದ ಅರ್ಜೆಂಟೀನಾದ ಲಿಯೊನೆಲ್ ಮೆಸ್ಸಿ ಪ್ರಶಸ್ತಿ ಮೇಲೆ ಸ್ಥಾಪಿಸಿದ್ದ ಆಧಿಪತ್ಯಕ್ಕೆ ತೆರೆ ಎಳೆದಿದ್ದಾರೆ.

**ರೊನಾಲ್ಡೊ ಶ್ರೇಷ್ಠ ಆಟಗಾರ:**

ರಿಯಲ್ ಮ್ಯಾಡ್ರಿಡ್‌ನ 28 ವರ್ಷದ ಸ್ಟಾರ್ ಆಟಗಾರ ರೊನಾಲ್ಡೊ 2008ರ ಬಳಿಕ ವಿಶ್ವದ ಶ್ರೇಷ್ಠ ಫುಟ್ಬಾಲ್ ಆಟಗಾರ ಪ್ರಶಸ್ತಿಯಾದ ಬ್ಯಾಲನ್ ಡಿ'ಓರ್ ಪ್ರಶಸ್ತಿಗೆ ಪಾತ್ರರಾದರು. ಪ್ರಶಸ್ತಿಯ ಹಾಟ್ ಫೇವರಿಟ್ ಆಗಿದ್ದ ಮೆಸ್ಸಿ ಈ ಬಾರಿ ನಿರಾಸೆಗೊಳಗಾದರು. ಪ್ರಶಸ್ತಿ ರೇಸ್‌ನಲ್ಲಿದ್ದ ಫ್ರಾನ್ಸ್‌ನ ಫ್ರಾಂಕ್ ರಿಬೆರಿ ಕೂಡ ಪ್ರಶಸ್ತಿ ಸಮೀಪದಲ್ಲಿ ಎಡವಿದರು.ರೊನಾಲ್ಡೊ ಪರ ಶೇಕಡಾ 27.99ರಷ್ಟು ಮತ ಬಿದ್ದರೆ, ಮೆಸ್ಸಿ ಪರ ಶೇ. 24.72 ಮತ್ತು ರಿಬೆರಿಗೆ ಶೇ. 23.36 ಮತಗಳು ದಾಖಲಾಗಿದ್ದವು.

**ಅತೀ ಹೆಚ್ಚು ಗೋಲ್:**

- ರೊನಾಲ್ಡೊ ಕಳೆದ ವರ್ಷ 56 ಪಂದ್ಯಗಳಲ್ಲಿ 66 ಗೋಲು ಸಿಡಿಸಿ ಮೆಸ್ಸಿಯನ್ನು ಅತಿ ಹೆಚ್ಚು ಗೋಲು ಗಳಿಕೆಯಲ್ಲಿ ಹಿಂದಿಕ್ಕಿದ್ದರು. ರಿಬೆರಿ 65 ಗೋಲು ಗಳಿಸಿದ್ದರು.
- ಬೇಯರ್ನ್ ಮ್ಯೂನಿಚ್ ತಂಡ ಚಾಂಪಿಯನ್ಸ್ ಲೀಗ್ ಬಂಡೆಸ್ಲಿಗಾ ಮತ್ತು ಜರ್ಮನಿ ಕಪ್ ಗೆಲ್ಲುವಲ್ಲಿ ಪ್ರಧಾನ ಪಾತ್ರ ವಹಿಸಿದ್ದ ರಿಬೆರಿ ಮೂರನೇ ಸ್ಥಾನ ಪಡೆದರು.
- ಅಂತಾರಾಷ್ಟ್ರೀಯ ಕೋಚ್‌ಗಳು, ನಾಯಕರು ಮತ್ತು ಮಾಧ್ಯಮಗಳು ಮತದಾನದ ಮೂಲಕ ಪ್ರಶಸ್ತಿ ಆಯ್ಕೆ ನಡೆದಿದ್ದು.
- ಬ್ರೆಜಿಲ್‌ನ ಫುಟ್ಬಾಲ್ ದಂತಕತೆ ಪೀಲೆಗೆ ವಿಶೇಷ ಗೌರವ ಬ್ಯಾಲನ್ ಡಿ'ಓರ್ ಪ್ರಶಸ್ತಿ ಪ್ರದಾನ ಮಾಡಲಾಯಿತು.
- ಬೇಯರ್ನ್ ತಂಡದ ಜುಪ್ ಹೆಂಕೆಸ್ ಶ್ರೇಷ್ಠ ಕೋಚ್ ಪ್ರಶಸ್ತಿಗೆ ಪಾತ್ರರಾದರೆ, ಜರ್ಮನಿಯ ಗೋಲ್‌ಕೀಪರ್ ನಾಡಿನ್ ಅಂಗೆರರ್ ವನಿತೆಯರ ಬ್ಯಾಲನ್ ಡಿ'ಓರ್ ಮತ್ತು ಕೋಚ್ ಸಿಲ್ವಿಯಾ ನೈಡ್ ವನಿತೆಯರ ಶ್ರೇಷ್ಠ ಕೋಚ್ ಪ್ರಶಸ್ತಿ ಸ್ವೀಕರಿಸಿದರು.
- ಸ್ವೀಡನ್ ಪರ ಜ್ಲಾಟಾನ್ ಇಬ್ರಾಹಿಮೊವಿಕ್ 40 ಅಡಿ ದೂರದಿಂದ ಗೋಲು ಸಿಡಿಸಿದ್ದಕ್ಕಾಗಿ 'ಬೆಸ್ಟ್ ಗೋಲ್' ಪ್ರಶಸ್ತಿ ಗಳಿಸಿದರು.

**ಏಕದಿನ ಕ್ರಿಕೆಟ್‌ನಲ್ಲಿ 300 ವಿಕೆಟ್ ಉರುಳಿಸಿದ ಭಾರತದ ಮೊದಲ ವಿಕೆಟ್ ಕೀಪರ್ ಧೋನಿ**

ಏಕದಿನ ಕ್ರಿಕೆಟ್‌ನಲ್ಲಿ ವಿಕೆಟ್ ಹಿಂದೆ 300 ವಿಕೆಟ್ ಉರುಳಿಸಿದ ಭಾರತದ ಮೊದಲ ವಿಕೆಟ್ ಕೀಪರ್ ಎಂಬ ದಾಖಲೆಗೆ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಭಾಜನರಾಗಿದ್ದಾರೆ. ನ್ಯೂಜಿಲೆಂಡ್ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ ರಾಸ್ ಟೇಲರ್ ಕ್ಯಾಚ್ ಪಡೆದ ಧೋನಿ ಈ ಸಾಧನೆ ಮಾಡಿದರು. ಅಲ್ಲದೆ ಈ ಸಾಧನೆ ಮಾಡಿದ ವಿಶ್ವದ 4ನೇ ವಿಕೆಟ್ ಕೀಪರ್ ಎನಿಸಿದ್ದಾರೆ.

**ದಾಖಲೆ ವೀರರು:**

- 32 ವರ್ಷದ ಧೋನಿ ಈಗ 293 ಪಂದ್ಯಗಳಿಂದ ಒಟ್ಟು 301 ವಿಕೆಟ್ ಪಡೆದ ದಾಖಲೆ ಹೊಂದಿದ್ದಾರೆ.



ಸಂಪರ್ಕಿಸಿ:karunaduexams.com

- ಈ ದಾಖಲೆಯೊಂದಿಗೆ ಧೋನಿ, ಆಸ್ಟ್ರೇಲಿಯಾದ ಆಡಂ ಗಿಲ್‌ಕ್ರಿಸ್ಟ್ 472 ವಿಕೆಟ್ (287 ಪಂದ್ಯ), ಶ್ರೀಲಂಕಾದ ಕುಮಾರ ಸಂಗಕ್ಕಾರ 424 ವಿಕೆಟ್ (362 ಪಂದ್ಯ) ಹಾಗೂ ದಕ್ಷಿಣ ಆಫ್ರಿಕಾದ ಮಾರ್ಕ್ ಬೌಷರ್ 424 ವಿಕೆಟ್ (295 ಪಂದ್ಯ) ಅವರ ಕ್ಲಬ್ ಸೇರಿಕೊಂಡಿದ್ದಾರೆ.

ಆಸ್ಟ್ರೇಲಿಯನ್ ಓಪನ್ ಗ್ರ್ಯಾಂಡ್ ಸ್ಲಾಮ್ ಟೆನಿಸ್ ಟೂರ್ನಿಯ ನೂತನ ಚಾಂಪಿಯನ್ ಲೀ ನಾ

ಚೀನಾದ ಲೀ ನಾ ವರ್ಷದ ಮೊದಲ ಗ್ರ್ಯಾಂಡ್ ಸ್ಲಾಮ್ ಟೆನಿಸ್ ಟೂರ್ನಿಯಾದ ಆಸ್ಟ್ರೇಲಿಯನ್ ಓಪನ್‌ನ ವನಿತೆಯರ ಸಿಂಗಲ್ಸ್‌ನಲ್ಲಿ ಹೊಸ ಚಾಂಪಿಯನ್ ಆಗಿ ಮೂಡಿ ಬಂದಿದ್ದಾರೆ. ರಾಡ್ ಲೇವರ್ ಕೋರ್ಟ್‌ನಲ್ಲಿ ನಡೆದ ವನಿತೆಯರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ ನೇರ ಸೆಟ್‌ಗಳಿಂದ ಅಧಿಕಾರಯುತ ಗೆಲುವು ಸಾಧಿಸಿ ಮೊದಲ ಬಾರಿಗೆ ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿ ಮುಡಿಗೇರಿಸಿಕೊಂಡರು.

**ಎರಡನೇ ಗ್ರಾಂಡ್ ಸ್ಲಾಮ್:**

- ಲೀಗೆ ಇದು ವೃತ್ತಿಜೀವನದ ಎರಡನೇ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿಯಾಗಿದೆ.
- ಇದಕ್ಕೂ ಮುನ್ನ 2011ರಲ್ಲಿ ಫ್ರೆಂಚ್ ಓಪನ್ ಗೆದ್ದುಕೊಂಡಿದ್ದರು.

ಲೀ 2011ರಲ್ಲಿ ಆಸ್ಟ್ರೇಲಿಯನ್ ಓಪನ್‌ನಲ್ಲಿ ಮೊದಲ ಬಾರಿ ಫೈನಲ್ ಪ್ರವೇಶಿಸಿದ್ದರು. ಆದರೆ ಕಿಮ್ ಕ್ಲಿಸ್ಟರ್ ವಿರುದ್ಧ ಸೋತು ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿ ಹೊಂದಿದರೆ, ಕಳೆದ ವರ್ಷ ಫೈನಲ್‌ನಲ್ಲಿ ವಿಕ್ಟೋರಿಯಾ ಅಜರೆಂಕಾ ವಿರುದ್ಧ ಮುಗ್ಗರಿಸಿದ್ದರು.

ಡೇವಿಸ್ ಕಪ್ ಏಷ್ಯಾ-ಓಶಿನಿಯಾ ಗುಂಪಿನ ಮೊದಲ ಸುತ್ತಿನಲ್ಲಿ ಭಾರತಕ್ಕೆ ಜಯ

ಭಾರತದ ಯುವ ಆಟಗಾರರಾದ ಸಾಕೇತ್ ಮೈನೆನಿ ಮತ್ತು ಯುಕಿ ಭಾಂಬ್ರಿ ರಿವರ್ಸ್ ಸಿಂಗಲ್ಸ್‌ನಲ್ಲೂ ಮಿಂಚುವ ಮೂಲಕ ಭಾರತ ತಂಡ ಡೇವಿಸ್ ಕಪ್ ಏಷ್ಯಾ-ಓಶಿನಿಯಾ ಗುಂಪು-1 ಮೊದಲ ಸುತ್ತಿನ ಹೋರಾಟದಲ್ಲಿ ಚೈನೀಸ್ ತೈಪೆ ವಿರುದ್ಧ 5-0 ಯಿಂದ ವೈಟ್‌ವಾಷ್ ಸಾಧನೆ ಮಾಡಿದೆ.

**ಸಾಕೇತ್-ಯುಕಿ ಸಾಧನೆ:**

ಭಾರತ ತಂಡ 3-0ಯಿಂದ ಸರಣಿ ಗೆದ್ದಿದ್ದರಿಂದ ರಿವರ್ಸ್ ಸಿಂಗಲ್ಸ್‌ನಲ್ಲಿ ಸೋಮ್‌ದೇವ್ ಹೊರಗುಳಿದಿದ್ದರು. ಅವರ ಸ್ಥಾನದಲ್ಲಿ ಆಡುವ ಅವಕಾಶ ಪಡೆದ ಸಾಕೇತ್ ಮೈನೆನಿ 6-1, 6-4ರಿಂದ ತನಗಿಂತ ಉನ್ನತ ಶ್ರೇಯಾಂಕಿತ ಆಟಗಾರ ಸಂಗ್ ಹುವಾ ಯಾಂಗ್ ಅವರನ್ನು ಸೋಲಿಸಿ ಮುನ್ನಡೆಯನ್ನು 4-0ಗೆ ಹೆಚ್ಚಿಸಿದರು. ಅಂತಿಮ ಪಂದ್ಯದಲ್ಲಿ ಚೆನ್ ಬದಲಿಗೆ ಆಡಿದ ಹಿಸೆನ್-ಯಿನ್ ಪೆಂಗ್ ಅವರನ್ನು ಯುಕಿ ಭಾಂಬ್ರಿ 7-5, 6-0 ಸೆಟ್‌ಗಳಿಂದ 55 ನಿಮಿಷಗಳ ಹೋರಾಟದಲ್ಲಿ ಸೋಲಿಸಿ ಭಾರತಕ್ಕೆ ಕ್ಲೀನ್‌ಸ್ವೀಪ್ ಗೆ ನೆರವಾದರು. ಮೊದಲ ಸಿಂಗಲ್ಸ್‌ನಲ್ಲಿ ಜಯ ಸಾಧಿಸಿದ್ದ 22 ವರ್ಷದ ಯುಕಿ, ಟೂರ್ನಿಯಲ್ಲಿ ಎರಡನೇ ಜಯ ಸಾಧಿಸಿದಂತಾಯಿತು.

**ವೈಟ್ ವಾಷ್ ಸಾಧನೆ:**

2005ರ ಬಳಿಕ ಎದುರಾಳಿ ತಂಡದೆದುರು ಭಾರತ ವೈಟ್‌ವಾಷ್ ಸಾಧನೆ ಮಾಡುತ್ತಿರುವುದು ಇದು ಮೂರನೇ ಬಾರಿಯಾಗಿದೆ. ಭಾರತ ಇನ್ನು ವಿಶ್ವ ಬಣ ಪ್ಲೇ ಆಫ್ನಲ್ಲಿ ಸ್ಥಾನ ಪಡೆಯಲು ಏಪ್ರಿಲ್‌ನಲ್ಲಿ ಕೊರಿಯಾ ಸವಾಲನ್ನು ಎದುರಿಸಬೇಕಾಗಿದೆ.

**ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಯ ಚಾಂಪಿಯನ್ ಆಗಿ ಹೊರಹೊಮ್ಮಿದ ಕರ್ನಾಟಕ**

ಕರ್ನಾಟಕ ತಂಡ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಯ ಚಾಂಪಿಯನ್ ಆಗಿ ಹೊರಹೊಮ್ಮಿದೆ. 21ನೇ ಶತಮಾನದಲ್ಲಿ ಕರ್ನಾಟಕವು ದಾಖಲಿಸುತ್ತಿರುವ ಮೊದಲ ಜಯ ಇದಾಗಿದೆ. ಈ ಹಿಂದೆ 20ನೇ ಶತಮಾನದಲ್ಲಿ ಅಂದರೆ 1998-99ರಲ್ಲಿ ಕರ್ನಾಟಕ ರಣಜಿಯಲ್ಲಿ ಗೆದ್ದಿತ್ತು.

ಕರ್ನಾಟಕವು ಮಹಾರಾಷ್ಟ್ರ ತಂಡವನ್ನು 7 ವಿಕೆಟ್‌ಗಳಿಂದ ಮಣಿಸಿ 7ನೇ ಬಾರಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. ಇದರೊಂದಿಗೆ ಅತಿ ಹೆಚ್ಚು ಬಾರಿ ರಣಜಿ ಗೆದ್ದ ಎರಡನೇ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ದೆಹಲಿ ತಂಡ 7 ಬಾರಿ ಗೆದ್ದರೆ, ಮುಂಬೈ 40 ಬಾರಿ ಪ್ರಶಸ್ತಿ ಗೆದ್ದು ಅಗ್ರಸ್ಥಾನದಲ್ಲಿದೆ. ಇಡೀ ಟೂರ್ನಿಯಲ್ಲಿ ಒಂದೂ ಪಂದ್ಯ ಸೋಲದ ಕರ್ನಾಟಕ ಸೋಲರಿಯದ ತಂಡವಾಗಿ ಪ್ರಶಸ್ತಿ ಎತ್ತಿ ಹಿಡಿದಿದೆ.

**ಕರ್ನಾಟಕಕ್ಕೆ 7ನೇ ಪ್ರಶಸ್ತಿ:**

13ನೇ ಬಾರಿ ಫೈನಲ್ ಪ್ರವೇಶಿಸಿದ್ದ ಕರ್ನಾಟಕಕ್ಕೆ ಇದು 7ನೇ ರಣಜಿ ಟ್ರೋಫಿ ಆಗಿದೆ. ಇದರೊಂದಿಗೆ ಮುಂಬೈ ತಂಡ ಅತಿ ಹೆಚ್ಚು ಬಾರಿ ಪ್ರಶಸ್ತಿ ಗೆದ್ದ ತಂಡ ಎಂಬ ಹೆಗ್ಗಳಿಕೆಯನ್ನು ದೆಹಲಿ ತಂಡದ ಜತೆ ಹಂಚಿಕೊಂಡಿದೆ. ದೆಹಲಿ ಹಾಗೂ ಕರ್ನಾಟಕ ತಂಡಗಳು ತಲಾ 7 ಬಾರಿ ಪ್ರಶಸ್ತಿ ಗೆದ್ದಿವೆ. ಮುಂಬೈ ತಂಡ ಅತಿ ಹೆಚ್ಚು ಬಾರಿ (40) ಪ್ರಶಸ್ತಿ ಗೆದ್ದ ತಂಡವಾಗಿದೆ.

**ವಿಶೇಷಗಳು:**

- 2 ಕೋಟಿ ರೂ.: ಕರ್ನಾಟಕಕ್ಕೆ ಸಿಕ್ಕ ಪ್ರಶಸ್ತಿ ಮೊತ್ತ
- 1 ಕೋಟಿ ರೂ.: ರನ್ನರ್ ಅಪ್ ಮಹಾರಾಷ್ಟ್ರಕ್ಕೆ ಲಭಿಸಿದ ಬಹುಮಾನ ಮೊತ್ತ
- 7 ನೇ ಬಾರಿ: ರಣಜಿ ಟ್ರೋಫಿ ಗೆದ್ದ ಕರ್ನಾಟಕ
- 15 ವರ್ಷ: ನಂತರ ಕರ್ನಾಟಕಕ್ಕೆ ರಣಜಿ
- 6 ನೇ ನಾಯಕ: ವಿನಯ್‌ಕುಮಾರ್ ರಣಜಿ ಟ್ರೋಫಿ ಗೆದ್ದ ಕರ್ನಾಟಕ ನಾಯಕ
- 70 ವರ್ಷ: 7 ದಶಕಗಳಿಂದ ಒಮ್ಮೆಯೂ ಗೆಲ್ಲದ ಮಹಾರಾಷ್ಟ್ರ

**2014 ಲುಸೊಫೊನಿ ಕ್ರೀಡಾಕೂಟಕ್ಕೆ (Lusophony Games) ಗೋವಾ ಅತಿಥ್ಯ**

ಪೋರ್ಚಗೀಸ್ ಮಾತನಾಡುವ ದೇಶಗಳು ಭಾಗವಹಿಸುವ ಲುಸೊಫೊನಿ ಕ್ರೀಡಾಕೂಟ ಈ ವರ್ಷ ಗೋವಾದಲ್ಲಿ ನಡೆಯಲಿದೆ. ಜನವರಿ 18-29 ರ ವರೆಗೆ ನಡೆಯುವ ಲೂಸೊಫೊನಿ ಕ್ರೀಡಾಕೂಟ 3ನೇ ಆವೃತ್ತಿಯಾದಾಗಿದ್ದು, ಗೋವಾದ ಫಟೊರ್ಡ ಕ್ರೀಡಾಂಗಣದಲ್ಲಿ ನಡೆಯಲಿದೆ. ಈ ಕ್ರೀಡಾಕೂಟದ ಅಧ್ಯಕ್ಷತೆಯನ್ನ ಗೋವಾದ ಮುಖ್ಯಮಂತ್ರಿಗಳಾದ ಮನೋಹರ್ ಪಣಿಕರ್ ವಹಿಸಿಕೊಳ್ಳಲ್ಲಿದ್ದಾರೆ.

**ಲುಸೊಫೊನಿ ಕ್ರೀಡಾಕೂಟ 2014**:

- ಜನವರಿ 18-29 ವರೆಗೆ ನಡೆಯಲಿರುವ ಈ ಕ್ರೀಡಾಕೂಟ ಇದೇ ಮೊದಲ ಬಾರಿಗೆ ಭಾರತದಲ್ಲಿ ಆಯೋಜಿಸಲಾಗುತ್ತಿದೆ.
- ಲುಸೊಫೊನಿ 2014 ರ ಕ್ರೀಡಾಕೂಟದ ಚಿಹ್ನೆ "ಜೊಜೊ (Jojo)"
- ವುಶು (Wushu) ಕ್ರೀಡೆ ಇದೇ ಮೊದಲ ಬಾರಿಗೆ ಈ ಕ್ರೀಡಾಕೂಟದಲ್ಲಿ ಸೇರ್ಪಡೆಗೊಳ್ಳುತ್ತಿದೆ.
- ಅಥ್ಲೆಟಿಕ್ಸ್, ಬಾಸ್ಕೆಟ್ ಬಾಲ್, ಬೀಚ್ ವಾಲಿಬಾಲ್, ಫುಟ್ ಬಾಲ್, ಜುಡೊ, ಟೆಬಲ್ ಟೆನ್ನಿಸ್, ಟೆಕ್ ವೊಂಡೊ, ವಾಲಿ ಬಾಲ್ ಹಾಗೂ ವುಶು ಈ ಬಾರಿಯ ಕ್ರೀಡಾಕೂಟದ ಪ್ರಮುಖ ಕ್ರೀಡೆಗಳು.

**ಲುಸೊಫೊನಿ ಕ್ರೀಡಾಕೂಟ**

- ಲುಸೊಫೊನಿ ಕ್ರೀಡಾಕೂಟ ಪೋರ್ಚಗೀಸ್ ಮಾತನಾಡುವ ರಾಷ್ಟ್ರಗಳ ಅಥ್ಲೆಟಿಕ್ ಗಳು ಭಾಗವಹಿಸುವ ವಿವಿಧ ಕ್ರೀಡೆಗಳ ಕೂಟ. ಅವುಗಳೆಂದರೆ ಅಂಗೊಲ, ಬ್ರೆಜಿಲ್, ಕೇಪ್ ವರ್ಡೆ, ಈಸ್ಟ್ ತಿಮೊರ್, ಗಿನಿಯಾ-ಬಿಸು, ಮಾಕು, ಮೊಝುಮಂಬಿಕ್, ಪೋರ್ಚಗಲ್, ಸೊ ಟೊಂ ಮತ್ತು ಪ್ರಿನ್ಸಿಪೆ ಹಾಗೂ ಸಹಭಾಗಿತ್ವ ರಾಷ್ಟ್ರಗಳಾದ ಭಾರತ, ಶ್ರೀಲಂಕಾ ಮತ್ತು ಈಕ್ವಟೋರಿಯಲ್ ಗಿನಿಯಾ.
- ಮೊದಲ ಬಾರಿಗೆ ಲುಸೊಫೊನಿ ಕ್ರೀಡಾಕೂಟ 2006 ರಲ್ಲಿ ಚೀನಾದ ಮಾಕು ವಿನಲ್ಲಿ ಆಯೋಜಿಸಲಾಗಿತ್ತು. 2009 ರಲ್ಲಿ ಪೋರ್ಚಗಲ್ ನ ಲಿಸ್ಬನ್ ಮತ್ತು 2014 ರ ಕ್ರೀಡಾ ಕೂಟ ಭಾರತದ ಗೋವಾದಲ್ಲಿ ನಡೆಯಲಿದೆ. 2017 ರಲ್ಲಿ ಈ ಕ್ರೀಡಾಕೂಟ ಮೊಝುಮಂಬಿಕ್ ನ ಮಪುಟ ಹಾಗೂ 2021 ರಲ್ಲಿ ಅಂಗೊಲದ ಲುವಾಂಡದಲ್ಲಿ ನಡೆಯಲಿವೆ.



ಸಂಪರ್ಕಿಸಿ:karunaduexams.com

# ಪರಿಸರ

## ಧ್ರುವೀಯ ಸುಳಿಗಾಳಿಗೆ (ಪೋಲಾರ್ ವೋರ್ಟೆಕ್ಸ್) ತತ್ತರಿಸಿದ ಅಮೆರಿಕ

ಧ್ರುವೀಯ ಸುಳಿಗಾಳಿ(ಪೋಲಾರ್ ವೋರ್ಟೆಕ್ಸ್)ಯಿಂದಾಗಿ ಅಮೆರಿಕ ಅಕ್ಷರಶಃ ತತ್ತರಿಸಿದೆ. ಇಲ್ಲಿನ ಕೆಲ ಪ್ರದೇಶಗಳಲ್ಲಿ ತಾಪಮಾನ -40 ಡಿ.ಸೆ. ತಲುಪಿದ್ದು ಜನರು ಮನೆಯಿಂದ ಹೊರಬರದ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಸಾವಿರಾರು ವಿಮಾನಗಳ ಸಂಚಾರ ಸ್ಥಗಿತಗೊಂಡಿದೆ. ಶಾಲೆ, ಕಾಲೇಜುಗಳು, ಅಂಗಡಿ ಮುಂಗಟ್ಟುಗಳು ಮುಚ್ಚಿವೆ. ಈ ಹಿನ್ನೆಲೆಯಲ್ಲಿ ಪೋಲಾರ್ ವೋರ್ಟೆಕ್ಸ್ ಬಗ್ಗೆ ಒಂದಿಷ್ಟು ಮಾಹಿತಿ.

**ಧ್ರುವೀಯ ಸುಳಿಗಾಳಿ ಎಂದರೇನು?**

ಪೋಲಾರ್ ವೋರ್ಟೆಕ್ಸ್ ಅನ್ನು ಆರ್ಕ್ಟಿಕ್ ಸೈಕ್ಲೋನ್ ಎಂದೂ ಕರೆಯುತ್ತಾರೆ. ಪೋಲಾರ್ ವೋರ್ಟೆಕ್ಸ್(ಧ್ರುವೀಯ ಸುಳಿಗಾಳಿ) ಹುಟ್ಟುವುದು ಉತ್ತರ ಧ್ರುವದಲ್ಲಿ. ಅತ್ಯಂತ ಶೀತದ, ಕಡಿಮೆ ತಾಪಮಾನದ ಈ ಪ್ರದೇಶಗಳು ಚಳಿಗಾಲದಲ್ಲಿ ಬಲಿಷ್ಠವಾಗಿ, ಬೇಸಗೆಯಲ್ಲಿ ದುರ್ಬಲವಾಗುತ್ತವೆ. ಇಲ್ಲಿ ಹುಟ್ಟಿದ ಸಾಂದ್ರ ಹಾಗೂ ಶೀತವಾದ ಗಾಳಿಯು ಉತ್ತರ ಧ್ರುವದಿಂದ ಬೇರ್ಪಟ್ಟು ಭಾರಿ ಪ್ರಮಾಣದ ಮಾರುತದೊಂದಿಗೆ ದಕ್ಷಿಣದೆಡೆಗೆ ಬೀಸಲಾರಂಭಿಸಿದೆ. ಇದರಿಂದಲೇ ಅಮೆರಿಕದಲ್ಲಿ ಧ್ರುವೀಯ ಸುಳಿಗಾಳಿಯು ಪ್ರತಾಪ ಮೆರೆಯುತ್ತಿದೆ.

**ಏಕೆ ಅಪಾಯಕಾರಿ?**

- ವಾತಾವರಣದ ತಾಪಮಾನವು ಅತ್ಯಂತ ಕಡಿಮೆ ಮಟ್ಟಕ್ಕಿಳಿಯುವ ಕಾರಣ ಸೂಕ್ತ ಬಂದೋಬಸ್ತ್ ಅಂದರೆ ದೇಹ ಮುಚ್ಚಿಕೊಳ್ಳುವ ವಸ್ತ್ರ ಧರಿಸದೇ ಹೋದಲ್ಲಿ ದೇಹವು ಐದೇ ನಿಮಿಷದಲ್ಲಿ ಮಂಜುಗಡ್ಡೆಯಂತಾಗಬಹುದು.
- ಅತಿಯಾದ ಶೀತ ತಾಪಮಾನವು ಫ್ರಾಸ್ಟ್‌ಬೈಟ್(ಭಾರಿ ಚಳಿಗೆ ದೇಹವೊಡ್ಡುವುದರಿಂದ ದೇಹದ ಅಂಗಾಂಗಗಳಿಗೆ ಹಾನಿ. ಅಂದರೆ, ಮೂಗು, ಕೈಬೆರಳುಗಳು ಹಾಗೂ ಕಾಲಿನ ಬೆರಳುಗಳಿಗೆ ಹಾನಿಯಾಗಿ ಕ್ರಮೇಣ ಇದು ಗ್ಯಾಂಗ್ರೀನ್ ಆಗಿ ಬದಲಾಗಬಹುದು), ಹೈಪೋಥರ್ಮಿಯಾ(ದೇಹದ ಉಷ್ಣತೆ ಅತ್ಯಂತ ಕಡಿಮೆ ಮಟ್ಟಕ್ಕಿಳಿಯುವುದು)ದಂತಹ ಸಮಸ್ಯೆಗೆ ಕಾರಣವಾಗಬಹುದು.
- ವಾಹನ ಸ್ಟಾರ್ಟ್ ಆಗದೇ ಸಮಸ್ಯೆ ಉಂಟಾಗಬಹುದು. ಶೀತ ಗಾಳಿ ಗಂಟೆಗೆ 100 ಮೈಲು(160 ಕಿ.ಮೀ.) ವೇಗದಲ್ಲಿ ಆರ್ಕ್ಟಿಟ್ ಅನ್ನು ಸುತ್ತಲಾರಂಭಿಸುತ್ತದೆ.

**ಕಾರಣಗಳೇನು?**

ಧ್ರುವೀಯ ಸುಳಿಗಾಳಿಯು ಕೆಳಮುಖವಾಗಿ ಚಲಿಸುವುದು ಅಪ್ರದಕ್ಷಿಣಾಕಾರವಾಗಿ ಸುತ್ತುತ್ತಾ ಗಾಳಿಯು ಆರ್ಕ್ಟಿಟ್‌ನ ಶೀತಗಾಳಿಯೊಂದಿಗೆ ಬೆರೆಯುತ್ತದೆ. ಸುಳಿಗಾಳಿಯು ದುರ್ಬಲಗೊಂಡು, ಪ್ರತ್ಯೇಕವಾಗುತ್ತದೆ ,ಆರ್ಕ್ಟಿಟ್ ಮಾರುತವು ದಕ್ಷಿಣದತ್ತ ಚಲಿಸುತ್ತದೆ; ಇಲ್ಲಿ ಈ ಗಾಳಿ ಕೇವಲ ಶೀತ ಮಾತ್ರವಲ್ಲ, ನೈಜ ಆರ್ಕ್ಟಿಕ್ ಗಾಳಿಯಾಗಿರುತ್ತದೆ. ಸುಳಿಗಾಳಿ ದುರ್ಬಲಗೊಂಡು ಚದುರಿಹೋಗುತ್ತದೆ. ಆರ್ಕ್ಟಿಟ್‌ನಲ್ಲಿ ಬಿಸಿಯಾಗುವ ತಾಪಮಾನವೇ ಸುಳಿಗಾಳಿಯನ್ನು ಚದುರುವಂತೆ ಮಾಡುತ್ತದೆ ಎನ್ನುವುದು ವಿಜ್ಞಾನಿಗಳ ಅಭಿಪ್ರಾಯ.

**WWF-India ಮತ್ತು ಟಾಟಾ ಹೌಸಿಂಗ್ ಡೆವೆಲೆಪ್ ಮೆಂಟ್ ಸಂಸ್ಥೆಯ ಪಾಲುದಾರಿಕೆಯಲ್ಲಿ ಹಿಮ ಚಿರತೆ ಸಂರಕ್ಷಣೆಗೆ ಯೋಜನೆ**

ಅಳಿವಿನ ಅಂಚಿನಲ್ಲಿರುವ ಹಿಮ ಚಿರತೆಗಳ ಸಂರಕ್ಷಣೆಗೆ ವಿಶ್ವ ವನ್ಯಜೀವಿ ನಿಧಿ-ಭಾರತ (WWF) ಹಾಗೂ ರಿಯಲ್ ಎಸ್ಟೇಟ್ ದಿಗ್ಗಜ ಟಾಟಾ ಹೌಸಿಂಗ್ ಡೆವೆಲಪ್ ಮೆಂಟ್ ಸಂಸ್ಥೆ ಜಂಟಿಯಾಗಿ ಕಾರ್ಯಕ್ರಮವನ್ನು ರೂಪಿಸಿವೆ. 'Save Our Snow Leopard' (ನಮ್ಮ ಹಿಮ ಚಿರತೆಗಳನ್ನು ಸಂರಕ್ಷಿಸಿ) ಎಂಬ ಹೆಸರಿನ ಈ ಯೋಜನೆಯಡಿ ದೇಶದಲ್ಲಿ ಅಳಿವಿನ ಅಂಚಿನಲ್ಲಿರುವ ಹಿಮ ಚಿರತೆಗಳ ಸಂರಕ್ಷಣೆಗೆ ಶ್ರಮಿಸಲಿದೆ.

- ಭಾರತದಲ್ಲಿ ಸುಮಾರು 400-700 ಹಿಮ ಚಿರತೆಗಳು ಇರುವುದಾಗಿ ಕಂಡುಬಂದಿದೆ. ವಿಶ್ವದಾದ್ಯಂತ ಹಿಮ ಚಿರತೆಗಳ ಸಂಖ್ಯೆ 7000 ಕ್ಕೂ ಹೆಚ್ಚು ಇರಬಹುದು ಎಂದು ಅಂದಾಜಿಸಲಾಗಿದೆ. ಭಾರತದ ಹಿಮಾಚಲ ಪ್ರದೇಶ, ಅರುಣಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಉತ್ತರಖಂಡ ಮತ್ತು ಸಿಕ್ಕಿಂ ಹಿಮ ಚಿರತೆಗಳು ಕಂಡು ಬರುವ ಪ್ರಮುಖ ರಾಜ್ಯಗಳು.
- ಟಾಟಾ ಹೌಸಿಂಗ್ ಡೆವೆಲಪ್ ಮೆಂಟ್ ಸಂಸ್ಥೆ ಮತ್ತು WWF-India ಪಾಲುದಾರಿಕೆಯಲ್ಲಿ ಹೊರತಂದಿರುವ ಈ ಯೋಜನೆಯಡಿ ಆನ್ ಲೈನ್ ಮುಖಾಂತರ ದತ್ತಿ ಸಂಗ್ರಹಿಸುವ ಮೂಲಕ ಹಿಮ ಚಿರತೆಗಳ ಸಂರಕ್ಷಣೆಗೆ ಕ್ರಮಕೈಗೊಳ್ಳಲಾಗುವುದು.
- "Save Our Snow Leopard" ಯೋಜನೆಯಡಿ ದೇಶದಲ್ಲಿ ಹಿಮ ಚಿರತೆಗಳು ನೆಲೆಸಿರುವ ಪ್ರದೇಶಗಳ ಬಗ್ಗೆ ಸಮಗ್ರ ಅಧ್ಯಯನವನ್ನು ನಡೆಸಲಾಗುವುದು. ಹಿಮ ಚಿರತೆಗಳ ಅಳಿವಿನಲ್ಲಿ ಮಾನವನ ಪಾತ್ರ ಮತ್ತು ಅದನ್ನು ಬಗೆಹರಿಸುವ ಬಗ್ಗೆಯೂ ಅಧ್ಯಯನ ನಡೆಸಲಾಗುವುದು. ಕೇವಲ ಸಂರಕ್ಷಣೆ ಅಲ್ಲದೇ ಹಿಮ ಚಿರತೆಗಳ ಬಗ್ಗೆ ಜನರಲ್ಲಿ ಅರಿವನ್ನು ಸಹ ಮೂಡಿಸಲಾಗುವುದು.
- ಈ ಯೋಜನೆಗಾಗಿ ಟಾಟಾ ಸಂಸ್ಥೆ ಪ್ರತಿ ವರ್ಷ ರೂ 15 ಲಕ್ಷ ದೇಣಿಗೆ ನೀಡಲಿದೆ. ಟಾಟಾ ಸಂಸ್ಥೆ ಈಗಾಗಲೇ ಹುಲಿ ಸಂರಕ್ಷಣೆಗೆ ಇಂತದೇ ಯೋಜನೆಗಳನ್ನು ಜಾರಿಗೊಳಿಸಿದೆ.

**ಮೇಘಾಲಯದ ಚಿರಾಪುಂಜಿಯಲ್ಲಿ 34 ವರ್ಷಗಳಲ್ಲೇ ಅತ್ಯಂತ ಕಡಿಮೆ ಮಳೆ ದಾಖಲು**

ಪ್ರಪಂಚದಲ್ಲೇ ಅತಿ ಹೆಚ್ಚು ಮಳೆ ಬೀಳುವ ಪ್ರದೇಶ ಎಂಬ ಪಟ್ಟವನ್ನು ಅಧಿಕೃತವಾಗಿ ಕಳೆದುಕೊಂಡಿರುವ ಮೇಘಾಲಯದ ಚಿರಾಪುಂಜಿಯ ಈಗ ಮಳೆಯ 'ಬರ' ಅನುಭವಿಸುತ್ತಿದೆ. 2013ರಲ್ಲಿ 34 ವರ್ಷಗಳಲ್ಲೇ ಅತ್ಯಂತ ಕಡಿಮೆ ಮಳೆ ದಾಖಲಾಗಿದೆ.

**ಮಳೆಯ 'ಬರ':**

ಸಾಮಾನ್ಯವಾಗಿ ಚಿರಾಪುಂಜಿಯಲ್ಲಿ ವರ್ಷಕ್ಕೆ 11,262 ಮಿ.ಮೀ. ಮಳೆಯಾಗಬೇಕು. ಆದರೆ ಕಳೆದ ವರ್ಷ ಚಿರಾಪುಂಜಿ ಪಟ್ಟಣದಲ್ಲಿ ಕೇವಲ 7562 ಮಿ.ಮೀ. ಮಳೆ ಸುರಿದಿದೆ. ಈಗ ಸೊಹ್ರಾ ಎಂದು ಹೆಸರು ಬದಲಿಸಿಕೊಂಡಿರುವ ಚಿರಾಪುಂಜಿಯಲ್ಲಿ 1979ರಲ್ಲಿ ಕಡಿಮೆ ಅಂದರೆ 6950 ಮಿ.ಮೀ. ಮಳೆಯಾಗಿತ್ತು. ಅದು ಬಿಟ್ಟರೆ ಈಗ ದಾಖಲಾಗಿರುವುದು ಅತ್ಯಂತ ಕಡಮೆ ಮಳೆ. 1962ರಲ್ಲಿ ಸಾರ್ವಕಾಲಿಕ ಅತ್ಯಂತ ಕಡಿಮೆ ಮಳೆ ಸುರಿದಿತ್ತು. ಆ ವರ್ಷ ಕೇವಲ 6807 ಮಿ.ಮೀ. ಮಳೆಯಾಗಿತ್ತು.

**ಮಾವ್‌ಸಿನ್ರಾಮ್:**

ಚಿರಾಪುಂಜಿ ಸನಿಹದಲ್ಲೇ ಇರುವ ಮಾವ್‌ಸಿನ್ರಾಮ್ ಪಟ್ಟಣ ಪ್ರಪಂಚದಲ್ಲೇ ಅತಿ ಹೆಚ್ಚು ಮಳೆಯಾಗುವ ಪ್ರದೇಶ ಎಂಬ ದಾಖಲೆಯನ್ನು ಸದ್ಯ ಹೊಂದಿದೆ. ಸಾಮಾನ್ಯ ಪ್ರಮಾಣಕ್ಕಿಂತ ಕಡಮೆ ಮಳೆಯಾಗುವುದು ಸಾಮಾನ್ಯ ಎಂದು ಹವಾಮಾನ ತಜ್ಞರು ವಿಶ್ಲೇಷಿಸುತ್ತಾರೆ. 2001 (9015

ಮಿ.ಮೀ.), 2005 (9755 ಮಿ.ಮೀ.), 2006 (8732 ಮಿ.ಮೀ.) ಹಾಗೂ 2009 (8723 ಮಿ.ಮೀ.) ರಲ್ಲೂ ಹೀಗಾಗಿತ್ತು ಎಂದು ಉತ್ತರ ಕೊಡುತ್ತಾರೆ. ಚಿರಾಪುಂಜಿಯಲ್ಲಿ 26 ಸಾವಿರ ಮಿ.ಮೀ. ವರೆಗೂ ಮಳೆಯಾದ ಇತಿಹಾಸ ಇದೆ.

**ಕಾರಣ ಏನು?**

ಸುಣ್ಣದಕಲ್ಲು ಗಣಿಗಾರಿಕೆಗಾಗಿ ಅಪಾರ ಪ್ರಮಾಣದ ಮರಗಳನ್ನು ಕಡಿಯುತ್ತಿರುವುದು ಹಾಗೂ ಹಲವು ಸಿಮೆಂಟ್ ಘಟಕಗಳನ್ನು ತೆರೆಯುತ್ತಿರುವುದರಿಂದ ಚಿರಾಪುಂಜಿಯಲ್ಲಿ ಮಳೆಯ ಪ್ರಮಾಣ ಕಡಮೆಯಾಗುತ್ತಿದೆ ಎನ್ನಲಾಗಿದೆ. ಆದರೆ ಹವಾಮಾನ ತಜ್ಞರು ಬೇರೆಯದೇ ಕಾರಣ ನೀಡುತ್ತಾರೆ. ಬಂಗಾಳ ಕೊಲ್ಲಿಯಲ್ಲಿ ಉಂಟಾಗುವ ವಾಯುಭಾರ ಕುಸಿತ ಈಗ ಭಾರತದ ಕೇಂದ್ರ ಹಾಗೂ ಉತ್ತರ ಭಾಗದ ಮೇಲೆ ಪ್ರಭಾವ ಬೀರುತ್ತಿರುವುದರಿಂದ ಹೀಗಾಗುತ್ತಿದೆ. ಈಶಾನ್ಯ ರಾಜ್ಯಕ್ಕೆ ತೇವಾಂಶ ಕಡಮೆ ಪೂರೈಕೆಯಾಗುತ್ತಿದೆ ಎನ್ನುತ್ತಾರೆ.

**ಭಾರತದ ಗಾಳಿಯ ಗುಣಮಟ್ಟ ತೀರಾ ಕೆಳಮಟ್ಟದಲ್ಲಿ: ಅಮೆರಿಕದ ಯೇಲ್ ವಿಶ್ವವಿದ್ಯಾಲಯ ಸಮೀಕ್ಷೆ**

ಜಾಗತಿಕ ಮಟ್ಟದಲ್ಲಿ ಭಾರತದ ಗಾಳಿಯ ಗುಣಮಟ್ಟ ತೀರಾ ಕೆಳಮಟ್ಟದಲ್ಲಿದೆ ಎಂದು ಅಮೆರಿಕದ ಯೇಲ್ ವಿಶ್ವವಿದ್ಯಾಲಯ ನಡೆಸಿರುವ ಸಮೀಕ್ಷೆಯಿಂದ ತಿಳಿದು ಬಂದಿದೆ.

**ಗಾಳಿ ಗುಣಮಟ್ಟದ ಸಮೀಕ್ಷೆ:**

- ಯೇಲ್ ವಿಶ್ವವಿದ್ಯಾಲಯ 178 ರಾಷ್ಟ್ರಗಳಲ್ಲಿ ಗಾಳಿಯ ಗುಣಮಟ್ಟದ ಸಮೀಕ್ಷೆ ನಡೆಸಿ 'ಪರಿಸರ ಗುಣಮಟ್ಟ ಸೂಚಿ-2014' (ಇಪಿಐ) ವರದಿ ಸಿದ್ಧಪಡಿಸಿದೆ.
- ಈ ಸೂಚಿಯಲ್ಲಿ ಭಾರತ 174ನೇ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ಪಾಕಿಸ್ತಾನ, ಚೀನಾ, ನೇಪಾಳ, ಬಾಂಗ್ಲಾದೇಶಗಳಿವೆ. ಸ್ವಿಟ್ಜರ್ಲೆಂಡ್ ಮೊದಲ ಸ್ಥಾನದಲ್ಲಿದೆ.
- ಸಮೀಕ್ಷೆ 178 ರಾಷ್ಟ್ರಗಳ ಹವಾಮಾನ ಗುಣಮಟ್ಟ, ಜೀವವೈವಿಧ್ಯದ ಸ್ಥಿತಿಗತಿ, ನೀರು ಮತ್ತು ನೈರ್ಮಲ್ಯದ ಬಗ್ಗೆಯೂ ವಿಶ್ಲೇಷಣೆ ನಡೆಸಿದೆ.
- ಇದರಲ್ಲಿ ಭಾರತ 155ನೇ ಶ್ರೇಣಿ ಪಡೆದಿದೆ. ಇತರ 'ಬ್ರಿಕ್' ರಾಷ್ಟ್ರಗಳಾದ ಚೀನಾ (118), ಬ್ರೆಜಿಲ್ (77), ರಷ್ಯಾ (73), ದಕ್ಷಿಣ ಆಫ್ರಿಕಾಗಳಿಗೆ (72) ಹೋಲಿಸಿದರೆ ಇಲ್ಲೂ ಭಾರತದ ಪ್ರದರ್ಶನ ಕೆಳಮಟ್ಟದಲ್ಲಿಯೇ ಇದೆ.

**ಶೇ.100 ನೈರ್ಮಲೀಕರಣದ ಸಾಧನೆ ಮಾಡಿದ ರಾಷ್ಟ್ರದ ಏಕೈಕ ರಾಜ್ಯವಾಗಿ ಸಿಕ್ಕಿಂ ರಾಜ್ಯ**

ಗ್ರಾಮೀಣ ಮತ್ತು ನಗರ ವಸತಿಗಳು, ಶಾಲೆಗಳು, ನಿರ್ಮಲೀಕರಣ ಸಮುಚ್ಚಯಗಳು ಮತ್ತು ಅಂಗನವಾಡಿಗಳಲ್ಲಿ ನೂರಕ್ಕೆ ನೂರರಷ್ಟು ನಿರ್ಮಲೀಕರಣದ ಸಾಧನೆ ಮಾಡಿದ ಭಾರತದ ಏಕೈಕ ರಾಜ್ಯ ಎಂಬ ಹೆಗ್ಗಳಿಕೆಗೆ ಸಿಕ್ಕಿಂ ಪಾತ್ರವಾಗಿದೆ.

**ಎಲ್ಲಾ ಮನೆಗಳಿಗೂ ಶೌಚಾಲಯ:**

ಸಿಕ್ಕಿಂನ ಎಲ್ಲ 6,10,577 ನಿವಾಸಿಗಳು ಅತ್ಯುತ್ತಮ ನಿರ್ಮಲೀಕರಣ ವ್ಯವಸ್ಥೆಯುಳ್ಳ ಶೌಚಾಲಯ ಸವಲತ್ತುಗಳನ್ನು ಹೊಂದಿದ್ದಾರೆ. ಹಿಮಾಲಯ ತಪ್ಪಲಿನ ಈ ರಾಜ್ಯ 98,043 ಮನೆಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಿದೆ. ಜನವರಿವರೆಗಿನ ಅವಧಿಯಲ್ಲಿ 87,014 ಮನೆಗಳಿಗೆ ಶೌಚಾಲಯ ನಿರ್ಮಿಸಬೇಕೆಂಬ ಗುರಿಯನ್ನು ರಾಜ್ಯ ಹೊಂದಿತ್ತು. ಕೇಂದ್ರ ಸರ್ಕಾರದ ಕುಡಿಯುವ ನೀರು ಮತ್ತು ನಿರ್ಮಲೀಕರಣ ಸಚಿವಾಲಯ ಅನುಷ್ಠಾನಗೊಳಿಸಿದ ನಿರ್ಮಲ ಭಾರತ ಅಭಿಯಾನದ ಅಡಿಯಲ್ಲಿ ಈ ಸಾಧನೆ ಮಾಡುವ ಮೂಲಕ ಶೇಕಡಾ 112.67 ರಷ್ಟು ಗುರಿ ಸಾಧನೆ ಮಾಡಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಾಧನೆ ಏನು?**

- ಸ್ವಚ್ಛ ಪರಿಸರದಲ್ಲಿ ಆರೋಗ್ಯಕರವಾದ ನಿರ್ಮಲೀಕರಣ ಸಾಧನೆಗಾಗಿ ಸಮಗ್ರತಾ ಸಿದ್ಧಾಂತ ಅಳವಡಿಸಿಕೊಳ್ಳುವ ಮೂಲಕ ಒಟ್ಟಾರೆ ಅಭಿವೃದ್ಧಿಯನ್ನು ತೀವ್ರಗೊಳಿಸುವ ನಿಟ್ಟಿನ ಜನಜಾಗೃತಿ ಕಾರ್ಯದಲ್ಲೂ ರಾಜ್ಯ ಯಶಸ್ವಿಯಾಗಿದೆ.
- ಸಮಗ್ರ ನೈರ್ಮಲ್ಯೀಕರಣ ಯೋಜನೆಯ ಅಡಿಯಲ್ಲಿ ಒಟ್ಟು 1,772 ಶಾಲೆಗಳಲ್ಲಿ ಶೌಚಾಲಯ ಕಲ್ಪಿಸಲಾಗಿದ್ದು, ಇದ್ದ ಗುರಿ 1,604 ಶಾಲೆಗಳು. ತನ್ಮೂಲಕ ಶೇಕಡಾ 110.47 ಸಾಧನೆ ಸಾಧ್ಯವಾಗಿದೆ.
- ರಾಜ್ಯದಲ್ಲಿ 789 ಶೌಚಾಲಯ ಸಮುಚ್ಚಯಗಳ ನಿರ್ಮಾಣ ಗುರಿ ಹೊಂದಲಾಗಿತ್ತು. ಆದರೆ 1,105 ಶೌಚಾಲಯ ಸಮುಚ್ಚಯಗಳ ನಿರ್ಮಾಣ ಮಾಡುವ ಮೂಲಕ ಶೇಕಡಾ 140.5ರಷ್ಟಿ ಸಾಧನೆ ಸಾಧ್ಯವಾಗಿದೆ.
- ಅಂಗನವಾಡಿಗಳಲ್ಲಿ ಉದ್ದೇಶಿತ 340 ಶೌಚಾಲಯಗಳಿಗೆ ಬದಲಾಗಿ 516 ಶೌಚಾಲಯ ನಿರ್ಮಾಣ ಮಾಡುವ ಮೂಲಕ ಶೇಕಡಾ 151.76 ಗುರಿ ಸಾಧಿಸಲಾಗಿದೆ.

**1999 ರಲ್ಲಿ ಚಾಲನೆ:**

1999 ರಲ್ಲಿ ಮುಖ್ಯಮಂತ್ರಿ ಪವನ್ ಚಾಮ್ಲಿಂಗ್ ಅವರು ಸಂಪೂರ್ಣ ಸ್ವಚ್ಛತೆ ಸಾಧಿಸುವ ಗುರಿಯೊಂದಿಗೆ ಈ ನಿರ್ಮಲ ಭಾರತ ಅಭಿಯಾನಕ್ಕೆ ಚಾಲನೆ ನೀಡಿದ್ದರು. ರಾಜ್ಯದ ಗ್ರಾಮೀಣ ಹಾಗೂ ನಗರ ಪ್ರದೇಶಗಳು ಸೇರಿದಂತೆ 7.096 ಚದರ ಕಿಮೀ ವ್ಯಾಪ್ತಿಯನ್ನು ಸಂಪೂರ್ಣ ಸ್ವಚ್ಛತೆಯ ವ್ಯಾಪ್ತಿಗೆ ತರಲು ಆಗ ಉದ್ದೇಶಿಸಲಾಗಿತ್ತು. ರಾಜ್ಯದ ಎಲ್ಲ ಗ್ರಾಮಸಭೆಗಳಿಗೂ ತಮ್ಮ ಕಾರ್ಯಕ್ರಮ ಪಟ್ಟಿಯಲ್ಲಿ ನಿರ್ಮಲೀಕರಣಕ್ಕೆ ಆದ್ಯತೆ ನೀಡುವುದನ್ನು ರಾಜ್ಯದಲ್ಲಿ ಕಡ್ಡಾಯಗೊಳಿಸಲಾಗಿತ್ತು.

# ಸುದ್ಧಿಯಲ್ಲಿರುವ ವ್ಯಕ್ತಿಗಳು

## ಮೈಕ್ರೋಸಾಫ್ಟ್ ಸ್ಥಾಪಕ ಬಿಲ್ ಗೇಟ್ಸ್ ವಿಶ್ವದ ಅತ್ಯಂತ ಜನಪ್ರಿಯ ವ್ಯಕ್ತಿ :ಟೈಮ್ಸ್ ಸಮೀಕ್ಷೆ

ಮೈಕ್ರೋಸಾಫ್ಟ್ ಸ್ಥಾಪಕ ಬಿಲ್ ಗೇಟ್ಸ್ ಅವರು ವಿಶ್ವದ ಅತ್ಯಂತ ಜನಪ್ರಿಯ ವ್ಯಕ್ತಿ. ಭಾರತ ಸೇರಿದಂತೆ 13 ರಾಷ್ಟ್ರಗಳಲ್ಲಿ ಟೈಮ್ಸ್ ಸಂಸ್ಥೆ ನಡೆಸಿದ ಸಮೀಕ್ಷೆ ಈ ವಿಚಾರವನ್ನು ಬಹಿರಂಗಪಡಿಸಿದೆ. ಸಮೀಕ್ಷೆ ಮೂಲಕ ವಿಶ್ವದಲ್ಲೇ ಅತಿ ಹೆಚ್ಚು ಜನಮೆಚ್ಚುಗೆ ಗಳಿಸಿರುವ 30 ಮಂದಿಯ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ.

**ಸಮೀಕ್ಷೆಯಲ್ಲಿ ಭಾರತೀಯರು:**

ಜನಮೆಚ್ಚುವ ವಿಶ್ವದ 30 ವ್ಯಕ್ತಿಗಳ ಪಟ್ಟಿಯಲ್ಲಿ ಆರು ಮಂದಿ ಭಾರತೀಯರು ಸ್ಥಾನ ಪಡೆದಿದ್ದಾರೆ. ಕ್ರಿಕೆಟ್ ಮಾಂತ್ರಿಕ ಸಚಿನ್ ತೆಂಡುಲ್ಕರ್ ಅವರು 5ನೇ ಸ್ಥಾನದಲ್ಲಿದ್ದರೆ, ಬಿಜೆಪಿ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿ 7ನೇ ಸ್ಥಾನ ಅಲಂಕರಿಸಿದ್ದಾರೆ. ಉಳಿದಂತೆ ಬಾಲಿವುಡ್‌ನ ಪ್ರಸಿದ್ಧ ನಟ ಅಮಿತಾಭ್ ಬಚ್ಚನ್ (9), ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಂ (10), ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆ (14), ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ (18), ಉದ್ಯಮಿ ರತನ್ ಟಾಟಾ (30) ಅವರೂ ಸ್ಥಾನ ಪಡೆದಿದ್ದಾರೆ.

**ವಿಶ್ವ ದಿಗ್ಗಜರು:**

ಒಟ್ಟಾರೆ ಪಟ್ಟಿಯಲ್ಲಿ ಮೈಕ್ರೋಸಾಫ್ಟ್ ಅಧ್ಯಕ್ಷ ಬಿಲ್ ಗೇಟ್ಸ್ ಅವರು ಮೊದಲ ಸ್ಥಾನದಲ್ಲಿದ್ದರೆ, ಅಮೆರಿಕ ಅಧ್ಯಕ್ಷ ಬರಾಕ್ ಒಬಾಮಾ, ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್, ಪೋಪ್ ಫ್ರಾನ್ಸಿಸ್ ಹಾಗೂ ಚೀನಾ ಅಧ್ಯಕ್ಷ ಕ್ಷಿ ಜಿನ್‌ಪಿಂಗ್ ಅವರು ಕ್ರಮವಾಗಿ 2, 3, 4, 5ನೇ ಸ್ಥಾನ ಪಡೆದಿದ್ದಾರೆ.

**ಸಮೀಕ್ಷೆ ಹೇಗೆ?**

ಭಾರತ, ಗ್ರೇಟ್ ಬ್ರಿಟನ್, ಫ್ರಾನ್ಸ್, ಜರ್ಮನಿ, ರಷ್ಯಾ, ಅಮೆರಿಕ, ಆಸ್ಟ್ರೇಲಿಯಾ, ಪಾಕಿಸ್ತಾನ, ಇಂಡೋನೇಷ್ಯಾ, ಚೀನಾ, ಈಜಿಪ್ಟ್, ನೈಜೀರಿಯಾ, ಬ್ರೆಜಿಲ್‌ನಲ್ಲಿನ 14 ಸಾವಿರ ಜನರನ್ನು ಸಂದರ್ಶಿಸಿ 'ಯುಗವ್' ಎಂಬ ಖಾಸಗಿ ಸಂಸ್ಥೆಯು 'ವಿಶ್ವದ ಅತಿ ಹೆಚ್ಚು ಮೆಚ್ಚುಗೆಯ ವ್ಯಕ್ತಿಗಳ ಸಮೀಕ್ಷೆ' ನಡೆಸಿ ಈ ಪಟ್ಟಿ ಸಿದ್ಧಪಡಿಸಿದೆ. 13 ದೇಶಗಳ ಸಮೀಕ್ಷೆಯನ್ನೂ ಈ ಸಂಸ್ಥೆ ಬಿಡುಗಡೆ ಮಾಡಿದೆ.

## ಬಾಲಿವುಡ್ ಮತ್ತು ಬಂಗಾಳಿ ಸಿನಿಮಾದ ಹಿರಿಯ ನಟಿ ಸುಚಿತ್ರಾ ಸೇನ್ ವಿಧಿವಶ

ಬಾಲಿವುಡ್ ಮತ್ತು ಬಂಗಾಳಿ ಸಿನಿಮಾದ ಹಿರಿಯ ನಟಿ ಸುಚಿತ್ರಾ ಸೇನ್ ಅವರು ತೀವ್ರ ಹೃದಯಾಘಾತದಿಂದ ವಿಧಿವಶರಾದರು. ದೇವದಾಸ್, ಆಂಧೀ, ದೀಪ್ ಜ್ವಲೇ ಜಾಯೆ, ಅಗ್ನಿಪರೀಕ್ಷಾ, ಸಪ್ತಪದಿ ಸೇರಿದಂತೆ 60ರಷ್ಟು ಹಿಂದಿ ಹಾಗೂ ಬಂಗಾಳಿ ಚಿತ್ರಗಳಲ್ಲಿ ಸೇನ್ ನಟಿಸಿದ್ದರು. ಅಂತಾರಾಷ್ಟ್ರೀಯ ಪ್ರಶಸ್ತಿ ಪಡೆದ ಪ್ರಪ್ರಥಮ ಭಾರತೀಯ ನಟಿ ಎಂಬ ಹೆಗ್ಗಳಿಕೆಗೂ ಇವರು ಪಾತ್ರರಾಗಿದ್ದರು.

**ಬಂಗಾಳಿ 'ಗ್ರೆಟಾ ಗಾರ್ಬೋ':**

60ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿರುವ ಮೋಹಕ ಅಭಿನೇತ್ರಿ ಸುಚಿತ್ರಾ ಅವರು, ಬಂಗಾಳಿ ಸಿನಿಮಾದ 'ಗ್ರೆಟಾ ಗಾರ್ಬೋ' (ಹಾಲಿವುಡ್‌ನ ಹೆಸರಾಂತ ನಟಿ) ಎಂದೇ ಹೆಸರು ಪಡೆದಿದ್ದರು. ಬೆಳ್ಳಿ ತೆರೆಯ 'ದೇವಿ'ಯೆಂದು ಖ್ಯಾತರಾಗಿದ್ದ ಅವರು ಹಿಂದಿಯ 'ದೇವದಾಸ್', 'ಆಂಧಿ',

'ಬೊಂಬಾಯಿ ಕಾ ಬಾಬು', 'ಮಮತಾ' ಮತ್ತು ಬಂಗಾಳಿಯ 'ಸಾತ್ ಪಾಕೆ ಬಂಧಾ', 'ಅಗ್ನಿ ಪರೀಕ್ಷಾ', 'ಸಪ್ತಪದಿ', 'ದೀಪ್ ಜ್ವಲೆ ಜಾಯೀ', 'ಉತ್ತರ ಫಲ್ಗುಣಿ' ಗಳಂತಹ ಶ್ರೇಷ್ಠ ಸಿನಿಮಾಗಳಲ್ಲಿ ಮನೋಜ್ಞವಾಗಿ ಅಭಿನಯಿಸಿದ್ದರು.

**ಸಾಧನೆ- ಪ್ರಶಸ್ತಿ:**

- 'ದೇವದಾಸ್' (1955) ಚಿತ್ರಕ್ಕೆ ರಾಷ್ಟ್ರೀಯ ಪ್ರಶಸ್ತಿ ಪಡೆದ ಸುಚಿತ್ರಾ, 'ಸಾತ್ ಪಾಕೆ ಬಂಧಾ' (1963) ಸಿನಿಮಾದ ಅಭಿನಯಕ್ಕಾಗಿ ಮಾಸ್ಕೊ ಚಲನಚಿತ್ರೋತ್ಸವದಲ್ಲಿ 'ಉತ್ತಮ ನಾಯಕಿ' ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಈ ಮೂಲಕ ಅಂತರರಾಷ್ಟ್ರೀಯ ಸಿನಿಮಾ ಉತ್ಸವದಲ್ಲಿ ಮೊತ್ತ ಮೊದಲ ಬಾರಿಗೆ ಪ್ರಶಸ್ತಿ ಪಡೆದ ಭಾರತೀಯ ನಟಿ ಎಂಬ ಹೆಗ್ಗಳಿಗೆಯೂ ಅವರದ್ದಾಯಿತು.
- 'ಪದ್ಮ ಶ್ರೀ' ಪ್ರಶಸ್ತಿಗೆ ಭಾಜನರಾಗಿದ್ದ ಅವರಿಗೆ ಪಶ್ಚಿಮ ಬಂಗಾಳ ಸರ್ಕಾರ ರಾಜ್ಯದ ಅತ್ಯುನ್ನತ ಗೌರವವಾದ 'ವಂಗ ವಿಭೂಷಣ' ಪ್ರಶಸ್ತಿಯನ್ನು 2012ರಲ್ಲಿ ನೀಡಿತ್ತು.
- 2005ರಲ್ಲಿ ಅವರಿಗೆ ಭಾರತೀಯ ಸಿನಿಮಾದ ಅತ್ಯುನ್ನತ ಗೌರವವಾದ 'ದಾದಾಸಾಹೇಬ್ ಪಾಲ್ಕೆ' ಪ್ರಶಸ್ತಿ ನೀಡಲಾಯಿತು.

**<u>ದಕ್ಷಿಣ ಧ್ರುವಕ್ಕೆ ಟ್ರೆಕ್ಕಿಂಗ್ ನಡೆಸಿದ ವಿಶ್ವದ ಅತೀ ಕಿರಿಯ ವ್ಯಕ್ತಿ ಲೆವಿಸ್ ಕ್ಲಾರ್ಕ್</u>**

ದಕ್ಷಿಣ ಧ್ರುವದತ್ತ ತನ್ನ ಪ್ರಯಾಣವನ್ನು 48 ದಿನಗಳಲ್ಲಿ ಪೂರ್ಣಗೊಳಿಸುವ ಮೂಲಕ ಬ್ರಿಟನ್‌ನ 16ರ ಹರೆಯದ ಲೆವಿಸ ಕ್ಲಾರ್ಕ್ ಹೊಸ ದಾಖಲೆ ನಿರ್ಮಿಸಿದ್ದಾನೆ. ಶೀತಗಾಳಿ ಮತ್ತು ಭಾರೀ ಹಿಮಪಾತದ ಹೊರತಾಗಿಯೂ 1,129 ಕಿ.ಮೀ.ಗಳ ಪ್ರಯಾಣವನ್ನು ಈತ ಯಶಸ್ವಿಯಾಗಿ ಪೂರ್ಣಗೊಳಿಸಿದ್ದು ದಕ್ಷಿಣ ಧ್ರುವಕ್ಕೆ ಟ್ರೆಕ್ಕಿಂಗ್ ನಡೆಸಿದ ವಿಶ್ವದ ಅತೀ ಕಿರಿಯ ವ್ಯಕ್ತಿ ಎಂಬ ಹೆಗ್ಗಳಿಕೆಗೂ ಪಾತ್ರನಾಗಿದ್ದಾನೆ.

**ದಕ್ಷಿಣಯಾನ:**

ಬ್ರಿಸ್ಟಲ್‌ನ 'ದ ಕ್ವೀನ್ ಎಲಿಜಬೆತ್ ಹಾಸ್ಪಿಟಲ್ ಸ್ಕೂಲ್'ನ ವಿದ್ಯಾರ್ಥಿಯಾಗಿರುವ ಲೆವಿಸ್ ಕ್ಲಾರ್ಕ್ ಮೈನಸ್ 50 ಡಿಗ್ರಿಗಳಷ್ಟು ಕನಿಷ್ಠ ತಾಪಮಾನದ ಹೊರತಾಗಿಯೂ 48 ದಿನಗಳಲ್ಲಿ ತನ್ನ ಗುರಿ ಮುಟ್ಟಿದನು. ಅಂಟಾರ್ಟಿಕ ತೀರದಿಂದ ತನ್ನ ಪ್ರಯಾಣವನ್ನು ಆರಂಭಿಸಿದ್ದ ಈತ ಭಾರೀ ಹಿಮಪಾತ ಮತ್ತು ತಾಸಿಗೆ 193 ಕಿ.ಮೀ.ವೇಗದಲ್ಲಿ ಬೀಸುತ್ತಿರುವ ಶೀತಗಾಳಿಯನ್ನೂ ಲೆಕ್ಕಿಸದೇ ತನ್ನ ಯಾನವನ್ನು ಮುಂದುವರಿಸಿ ಯಶಸ್ವಿಯಾಗಿ ಅಮುಂಡ್‌ಸನ್ -ಸ್ಕಾಟ್ ದಕ್ಷಿಣ ಧ್ರುವ ಕೇಂದ್ರವನ್ನು ತಲುಪಿದನು.

**ದಾಖಲೆ ಮುರಿದ ಲೆವಿಸ್:**

ಕೆನಡಾದ ಮೆಕ್‌ನಾಯರ್ ಲಾಂಡ್ರಿ 2005ರಲ್ಲಿ ತನ್ನ 18ರ ಹರೆಯದಲ್ಲಿ ಇದೇ ಹಾದಿಯಲ್ಲಿ ದಕ್ಷಿಣ ಧ್ರುವಕ್ಕೆ ಯಶಸ್ವಿಯಾಗಿ ಪ್ರಯಾಣಿಸಿದ್ದಳು. ಇದೀಗ ಲಾಂಡ್ರಿಯ ದಾಖಲೆಯನ್ನು ಕ್ಲಾರ್ಕ್ ಮುರಿದಿದ್ದಾನೆ. ಕ್ಲಾರ್ಕ್ ತನ್ನ 16ನೇ ಜನ್ಮದಿನದ ಎರಡು ವಾರಗಳ ಬಳಿಕ ದಕ್ಷಿಣ ಧ್ರುವದತ್ತ ಪ್ರಯಾಣವನ್ನು ಆರಂಭಿಸಿದ್ದನು. ತಾಸಿಗೆ 8 ಕಿ.ಮೀ.ಗಳನ್ನು ನಡಿಗೆಯ ಮೂಲಕ ಕ್ರಮಿಸಿದ ಈತ ದಿನಕ್ಕೆ ಸರಿಸುಮಾರು 29 ಕಿ.ಮೀ. ದೂರವನ್ನು ಪೂರ್ಣಗೊಳಿಸುತ್ತಿದ್ದನು. ತನ್ನ ಪ್ರಯಾಣದುದ್ದಕ್ಕೂ ಶೀತಗಾಳಿಯ ಪರಿಣಾಮ ಅನೇಕ ಆರೋಗ್ಯ ಸಂಬಂಧಿ ಸಮಸ್ಯೆಗಳು ಬಾಧಿಸಿದರೂ ಈ ಎಲ್ಲಾ ಅಡಚಣೆಗಳನ್ನು ಹಿಮ್ಮೆಟ್ಟಿ ಕ್ಲಾರ್ಕ್ ದಕ್ಷಿಣ ಧ್ರುವವನ್ನು ಯಶಸ್ವಿಯಾಗಿ ತಲುಪಿದ್ದಾನೆ.

**ಸುವರ್ಣ ಸಂಭ್ರಮ ಪೂರೈಸಿದ 'ಏ ಮೇರೆ ವತನ್ ಕೀ ಲೋಗೋ' ಹಾಡು**

ಖ್ಯಾತ ಗಾಯಕಿ ಲತಾ ಮಂಗೇಶ್ಕರ್ ಹಾಡಿದ 'ಏ ಮೇರೆ ವತನ್ ಕೀ ಲೋಗೋ ' ಹಾಡು ಸುವರ್ಣ ಸಂಭ್ರಮವನ್ನು ಪೂರೈಸಿ, 51ನೇ ವರ್ಷಕ್ಕೆ ಕಾಲಿಟ್ಟಿದೆ.

**ಹಾಡು ಹುಟ್ಟಿದ ಬಗೆ:**

ಭಾರತ-ಚೀನಾ ಯುದ್ಧ ಸಂದರ್ಭ ಕವಿ ಪ್ರದೀಪ್ ಈ ಹಾಡನ್ನು ಬರೆದಿದ್ದರು. ಇವರು ಸ್ವತಃ ಬಾಂಬೆ ಟಾಕೀಸಿನ ಹಾಡುಗಾರರಾಗಿದ್ದು, ಸಂಗೀತಸಂಯೋಜಕರೂ ಹೌದು. ಕವಿ ಪ್ರದೀಪ್ ಅವರು ಹಾಡಿಗೆಹಾಕಿದ್ದ ರಾಗಗಳನ್ನು ಪ್ರಸಿದ ಸಂಗೀತನಿರ್ದೇಶಕ ಸಿ.ರಾಮಚಂದ್ರನ್ ಅವರು ಪುನರ್‌ಸಂಯೋಜನೆ ಮಾಡಿದ್ದು, 1963ರ ಗಣರಾಜ್ಯೋತ್ಸವ ಪ್ರಯುಕ್ತ ಲತಾ ಮಂಗೇಶ್ಕರ್ ಅವರೇ ಹಾಡಿದ್ದರು.

**ಹಾಡು ಹಳೆಯದಾದರೂ...**

'ಏ ಮೇರೆ ವತನ್ ಕೀ ಲೋಗೋ' ಹಾಡು ಇಂದಿಗೂ ಸೈನಿಕರ ಪಾಲಿಗೆ ಮಹತ್ತರವಾದ ಪ್ರೇರಕ ಶಕ್ತಿ. 1963ರಲ್ಲಿ ಮೊದಲ ಬಾರಿಗೆ ಚೀನಾ-ಭಾರತ ಯುದ್ಧ ಕಳೆದು ಕೇವಲ ಎರಡೇ ತಿಂಗಳು. ಸೈನಿಕರ ಬಲಿದಾನಸ್ಮರಿಸಿ ಲತಾಜಿ ಎದೆ ಭಾರವಾಗುವಂತೆ ಹಾಡಿದಾಗ ಅದನ್ನು ಆಕಾಶವಾಣಿ ರೆಕಾರ್ಡ್ ಮಾಡಿದ್ದು ಬಳಿಕದೇಶದ ತುಂಬೆಲ್ಲ ಬಿತ್ತರಿಸಿತ್ತು. ಬಳಿಕ ಎಚ್‌ಎಮ್‌ವಿ ಹಾಡಿನ್ನು ಲಾತಾ ಮಂಗೇಶ್ಕರ್ ಕಂಠದಲ್ಲಿ ಮುದ್ರಣ ಮಾಡಿದ್ದು, ದೇಶದ ತುಂಬ ಹಂಚಿತ್ತು. ಅದಾಗಲೇ ಸಾಕಷ್ಟು ಜನಪ್ರಿಯತೆ ಪಡೆದಿದ್ದಹಾಡನ್ನು ಇಂದಿನವರೆಗೂ, ಸ್ವಾತಂತ್ರ್ಯ ದಿನ, ಗಣರಾಜ್ಯೋತ್ಸವ ದಿನದಂದು ದೇಶಭಕ್ತಿಯ ಸಂಕೇತವಾಗಿ ಹಾಡಲಾಗುತ್ತದೆ.

**ವಿಶ್ವದ ಅತಿ ಮಲಿನ ನಗರ ಎಂಬ ಅಪಖ್ಯಾತಿಗೆ ದೇಶದ ರಾಜಧಾನಿ ದಿಲ್ಲಿ**

ವಿಶ್ವದ ಅತಿ ಮಲಿನ ನಗರ ಎಂಬ ಅಪಖ್ಯಾತಿಗೆ ದೇಶದ ರಾಜಧಾನಿ ದಿಲ್ಲಿ ಪಾತ್ರವಾಗಿದೆ. ನಂತರದ ಸ್ಥಾನಗಳು ಚೀನಾದ ಬೀಜಿಂಗ್, ಕೈರೋ, ಸ್ಯಾಂಟಿಯಾಗೋ, ಮೆಕ್ಸಿಕೋ ಪಾಲಾಗಿವೆ.

**ವರದಿಯಲ್ಲೇನಿದೆ?**

ಅಮೆರಿಕದ ಯೇಲ್ ವಿಶ್ವವಿದ್ಯಾಲಯವು ವಿಶ್ವದ 178 ದೇಶಗಳಲ್ಲಿ ಅಧ್ಯಯನ ನಡೆಸಿ ಪರಿಸರ ಸಾಧನಾ ಸೂಚ್ಯಂಕ ಬಿಡುಗಡೆ ಮಾಡಿದ್ದು, ಇದರಲ್ಲಿ ದಿಲ್ಲಿ ಮಲಿನ ನಗರಿ ಎಂಬ ಅಪಖ್ಯಾತಿ ಪಡೆದುಕೊಂಡಿದೆ. ಇದೇ ವೇಳೆ ಭಾರತವು ಕಳೆದ ಸಲದ ತನ್ನ ಸ್ಥಾನದಿಂದ 32 ಸ್ಥಾನದಷ್ಟು ಕುಸಿದಿದ್ದು 155ನೇ ಸ್ಥಾನ ಪಡೆದುಕೊಂಡಿದೆ. ಆದರೆ ವಾಯು ಮಾಲಿನ್ಯವೊಂದನ್ನೇ ಗಮನಿಸಿದರೆ ಭಾರತ 174ನೇ ಸ್ಥಾನ ಪಡೆದಿದೆ.

**ಸ್ವಿಸ್ ಅತ್ಯಂತ ನಿರ್ಮಲ ದೇಶ:**

ಸ್ವಿಜರ್ಲೆಂಡ್, ಲಕ್ಸಂಬರ್ಗ್, ಆಸ್ಟ್ರೇಲಿಯಾ, ಸಿಂಗಾಪುರ ಮತ್ತು ಚೆಕ್ ಗಣರಾಜ್ಯ- ಟಾಪ್ 5 'ಸ್ವಚ್ಛ ದೇಶಗಳು' ಎಂಬ ಖ್ಯಾತಿಗೆ ಪಾತ್ರವಾಗಿವೆ. ಭಾರತದ ನೆರೆ ದೇಶಗಳಾದ ಶ್ರೀಲಂಕಾ (69), ಚೀನಾ (118), ನೇಪಾಳ (139), ಪಾಕಿಸ್ತಾನ (148) ಭಾರತಕ್ಕಿಂತ ಉತ್ತಮ ಸಾಧನೆ ಪ್ರದರ್ಶಿಸಿವೆ. ಬಾಂಗ್ಲಾದೇಶ 169ನೇ ಸ್ಥಾನ ಸಂಪಾದಿಸಿ ಭಾರತಕ್ಕಿಂತ ಕೆಳಗಿನ ಸ್ಥಾನದಲ್ಲಿದೆ.

## ಮೈಕ್ರೋಸಾಫ್ಟ್ ಸಂಸ್ಥೆಯ ನೂತನ ಸಿಇಒ ಆಗಿ ಭಾರತೀಯ ಸಂಜಾತ ಸತ್ಯಾ ನಡೆಲ್ಲಾ ನೇಮಕ

ಐಟಿ ದೈತ್ಯ ಮೈಕ್ರೋಸಾಫ್ಟ್ ಸಂಸ್ಥೆಯ ನೂತನ ಸಿಇಒ ಆಗಿ ಭಾರತೀಯ ಸಂಜಾತ ಸತ್ಯಾ ನಡೆಲ್ಲಾ ಅವರು ನೇಮಕವಾಗಿದ್ದಾರೆ. ಪ್ರಸ್ತುತ ಮೈಕ್ರೋಸಾಫ್ಟ್ ಸಿಇಒ ಸ್ಟೀವ್ ಬಾಲ್ಮರ್ನ್ ಅವರ ಉತ್ತರಾಧಿಕಾರಿಯಾಗಿ ಆಗಿ ಹೈದರಾಬಾದ್ ಮೂಲದ ಸತ್ಯ ನಡೆಲ್ಲಾ ಅವರು ಆಯ್ಕೆಯಾಗಿದ್ದಾರೆ.

**ಮೂರನೇ ಸಿಇಒ:**

ಇದರೊಂದಿಗೆ ಜಗತ್ತಿನ ಮತ್ತೂಂದು ದೊಡ್ಡ ಕಂಪನಿ ಚುಕ್ಕಾಣಿ, ಮತ್ತೂಬ್ಬ ಭಾರತೀಯನ ತೆಕ್ಕೆಗೆ ಸಿಕ್ಕಂತಾಗಿದೆ. ಈ ಹಿಂದೆ ಕರ್ನಾಟಕದ ಸೊಸೆ ಇಂದ್ರಾ ನೂಯಿ ತಂಪು ಪಾನೀಯ ದೈತ್ಯ ಪೆಪ್ಸಿಕೋದ ಸಿಇಒ ಆಗುವ ಮೂಲಕ ಹೊಸ ದಾಖಲೆ ಸ್ಥಾಪಿಸಿದ್ದರು.ಹಾಲಿ ಸಿಇಒ ಸ್ಟೀವ್ ಬಾಲ್ಮರ್, ಮುಂದಿನ ಆಗಸ್ಟ್‌ನಲ್ಲಿ ನಿವೃತ್ತಿಯಾಗಲಿದ್ದು, ಆ ಬಳಿಕ ಸತ್ಯ ಹೊಸ ಹುದ್ದೆ ವಹಿಸಿಕೊಳ್ಳುವ ಸಾಧ್ಯತೆ ಇದೆ. 40 ವರ್ಷಗಳ ಇತಿಹಾಸ ಹೊಂದಿರುವ ಮೈಕ್ರೋಸಾಫ್ಟ್ನಲ್ಲಿ ಸತ್ಯ ಮೂರನೇ ಸಿಇಒ ಆಗಿರಲಿದ್ದು, ಮೊದಲ ಅಮೆರಿಕನ್ನೇತರ ವ್ಯಕ್ತಿಯಾಗಿರಲಿದ್ದಾರೆ.

**ಗೇಟ್ಸ್‌ಗೆ ಗೇಟ್‌ಪಾಸ್:**

ಇದೇ ವೇಳೆ ಕಂಪನಿಯ ಹಾಲಿ ಅಧ್ಯಕ್ಷ ಬಿಲ್‌ಗೇಟ್ಸ್ ಅವರನ್ನು ಅಧ್ಯಕ್ಷ ಹುದ್ದೆಯಿಂದ ಕೆಳಗಿಳಿಸಿ ಅವರ ಸ್ಥಾನಕ್ಕೆ ಜಾನ್ ಥಾಂಪ್ಸನ್ ಅವರನ್ನು ನೇಮಿಸಲೂ ಆಡಳಿತ ಮಂಡಳಿ ನಿರ್ಧರಿಸಿದೆ. ಜೊತೆಗೆ ಬಿಲ್‌ಗೇಟ್ಸ್ ಅವರಿಗೆ ತಾಂತ್ರಿಕ ಸಲಹೆಗಾರನೆಂಬ ಹೊಸ ಕೆಲಸ ವಹಿಸಿಕೊಡಲಾಗಿದೆ.

**ನಾಡೆಲ್ಲ ಪರಿಚಯ:**

ಸತ್ಯ ನಾಡೆಲ್ಲ ಹೈದ್ರಾಬಾದ್ ಮೂಲದವರು. ಬಾಲ್ಯದ ವಿದ್ಯಾಭ್ಯಾಸವನ್ನು ಹೈದ್ರಾಬಾದ್‌ನಲ್ಲಿ ಪೂರೈಸಿದ ಸತ್ಯ, ಮಣಿಪಾಲದಲ್ಲಿ ಎಲೆಕ್ಟ್ರಾನಿಕ್ಸ್ ಆಯಂಡ್ ಕಮ್ಯುನಿಕೇಷನ್‌ನಲ್ಲಿ ಇಂಜಿನಿಯರಿಂಗ್ ಪದವಿ ಪಡೆದರು. ಬಳಿಕ ಅಮೆರಿಕಕ್ಕೆ ತೆರಳಿ ಸನ್ ಮೈಕ್ರೋಸಿಸ್ಟಮ್ಸ್‌ನಲ್ಲಿ ಉದ್ಯೋಗಕ್ಕೆ ಸೇರಿಕೊಂಡ ಸತ್ಯ, 1992ರಲ್ಲಿ ಪ್ರೋಗ್ರಾಮ್ ಮ್ಯಾನೇಜರ್ ಆಗಿ ಮೈಕ್ರೋಸಾಫ್ಟ್ ಕಂಪನಿಗೆ ಸೇರಿದರು. ಕಂಪ್ಯೂಟರ್ ತಂತ್ರಜ್ಞಾನದಲ್ಲಿ ವಿಶ್ವದ ಶೇ.90ರಷ್ಟು ಮಂದಿ ಮೈಕ್ರೋಸಾಫ್ಟ್ ತಂತ್ರಾಂಶಗಳನ್ನೇ ಬಳಸುತ್ತಿದ್ದು, ಆ ವಿಚಾರದಲ್ಲಿ ಸಂಸ್ಥೆಗೆ ಸರಿಸಾಟಿ ಇಲ್ಲ. ಆದರೆ ಮೊಬೈಲ್ ತಂತ್ರಾಂಶ ವಿಚಾರದಲ್ಲಿ ವಿಶ್ವದ ಶೇ.4ರಷ್ಟು ಜನ ಮಾತ್ರ ವಿಂಡೋಸ್ ಮೊಬೈಲ್ ಗಳನ್ನು ಬಳಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಅವರು ಸಾಕಷ್ಟು ಕಾರ್ಯಗಳನ್ನು ಮಾಡಬೇಕಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ..

## ನೇಪಾಳದ ನೂತನ ಪ್ರಧಾನಿಯಾಗಿ ಕಾಂಗ್ರೆಸ್ ನ ಸುಶೀಲ್ ಕೊಯಿರಾಲ ಆಯ್ಕೆ

ನೇಪಾಳ ಕಾಂಗ್ರೆಸ್‌ನ ಹಿರಿಯ ಮುಖಂಡ ಸುಶೀಲ್ ಕೊಯಿರಾಲ ಅವರು ಸಿಪಿಎನ್‌ಯುಎಂಎಲ್ ಪಕ್ಷದ ಬೆಂಬಲದೊಂದಿಗೆ ನೇಪಾಳ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ. ಈ ಮೂಲಕ ರಾಜಕೀಯ ಅರಾಜಕತೆ ಅಂತ್ಯ ಕಂಡಿದೆ.

**ಏಕಮಾತ್ರ ಸ್ಪರ್ಧಿ:**

16 ವರ್ಷಗಳ ಕಾಲ ನೇಪಾಳದಿಂದ 'ಸ್ವಯಂ ದೂರ ಉಳಿದಿದ್ದ' 74 ವರ್ಷ ವಯಸ್ಸಿನ ಕೊಯಿರಾಲ, ಪ್ರಧಾನಿ ಹುದ್ದೆಗೆ ನಡೆದ ಸ್ಪರ್ಧೆಯಲ್ಲಿ ಏಕಮಾತ್ರ ಸ್ಪರ್ಧಿಯಾಗಿದ್ದರು. ವಿಧಾನಸಭೆಯ 601 ಸದಸ್ಯರಲ್ಲಿ ಕೊಯಿರಾಲ 405 ಮತಗಳನ್ನು ಪಡೆದಿದ್ದರು. ಯುಸಿಪಿಎನ್ ಮಾವೋವಾದಿ,

ರಾಷ್ಟ್ರೀಯ ಪ್ರಜಾತಂತ್ರ ಪಕ್ಷ ನೇಪಾಳ ಹಾಗೂ ಕೆಲ ಚಿಕ್ಕ ಪಕ್ಷಗಳೂ ಸೇರಿದಂತೆ 148 ಸದಸ್ಯರು ಕೊಯಿರಾಲ ವಿರುದ್ಧ ಮತ ಚಲಾಯಿಸಿದ್ದರು. ಮಧ್ಯಂತರ ಸಂವಿಧಾನದ ಪ್ರಕಾರ ಪ್ರಧಾನಿ ಹುದ್ದೆ ಅಲಂಕರಿಸಲು ಶೇಕಡಾ 50 ಮತಗಳನ್ನು ಪಡೆಯಬೇಕಾಗುತ್ತದೆ. ಮತದಾನ ಬಳಿಕ ಸಂಸತ್ತಿನ ಸ್ಪೀಕರ್ ಸೂರ್ಯ ಬಹದ್ದೂರ್ ಥಾಪಾ ಅವರು ಹರ್ಷೋದ್ಗಾರದ ನಡುವೆ ಕೊಯಿರಾಲ ಅವರು ಬಹುಮತವನ್ನು ಪಡೆದಿರುವುದಾಗಿ ಪ್ರಕಟಿಸಿದರು.

**ಸುಶೀಲ್ ಕೊಯಿರಾಲ:**

ಭಾರತ ಹಾಗೂ ನೇಪಾಳದಲ್ಲಿ ವಿವಿಧ ಸಂದರ್ಭಗಳಲ್ಲಿ ಕೊಯಿರಾಲ ಅವರು ಆರು ವರ್ಷ ಜೈಲುವಾಸ ಅನುಭವಿಸಿದ್ದಾರೆ. ಪೂರ್ವ ನೇಪಾಳದಲ್ಲಿರುವ ಬಿರಾತ್‌ನಗರದಲ್ಲಿ ಜನಿಸಿದ ಇವರು, ಸರಳ ಜೀವನ ಹಾಗೂ ಉನ್ನತ ಚಿಂತನೆಗೆ ಹೆಸರಾದವರು. ಕೊಯಿರಾಲ ಅವರು ನೇಪಾಳದ ಆರನೇ ಪ್ರಧಾನಿ. 2008ರಲ್ಲಿ ಅರಸೊತ್ತಿಗೆ ಕೊನೆಗೊಂಡಾಗಿನಿಂದ ನೇಪಾಳದ ಕೊಯಿರಾಲ ಅವರಿಗೂ ಮುನ್ನ ಐವರು ಪ್ರಧಾನಿಗಳನ್ನು ಕಂಡಿದೆ.

## <u>ಬೆಂಝ್ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದ ಮುಖ್ಯಸ್ಥರಾಗಿ ಭಾರತೀಯ ಸಂಜಾತ ಮನುಸಾಲೆ ನೇಮಕ</u>

ಬೆಂಝ್ ಕಂಪನಿ ಭಾರತದಲ್ಲಿ ಸ್ಥಾಪಿಸಿರುವ ಅಧ್ಯಯನ ಮತ್ತು ಅಭಿವೃದ್ಧಿ ಕೇಂದ್ರಕ್ಕೆ ಆಡಳಿತ ನಿರ್ದೇಶಕ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಇದೇ ಮೊದಲ ಬಾರಿಗೆ ಭಾರತೀಯರೊಬ್ಬರು, ಅದರಲ್ಲೂ ಕನ್ನಡಿಗರೊಬ್ಬರು ನೇಮಕಗೊಂಡಿದ್ದಾರೆ. ಮೂಲತಃ ಪುತ್ತೂರಿನವರೇ ಆದ ಮತ್ತು ಸಂಪೂರ್ಣ ಶಿಕ್ಷಣವನ್ನು ಕರ್ನಾಟಕದಲ್ಲೇ ಪಡೆದ ಮನುಸಾಲೆ ಅವರು ಏಪ್ರಿಲ್ 1 ರಿಂದ ಭಾರತದಲ್ಲಿರುವ ಬೆಂಝ್ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

**ಇದೇ ಮೊದಲು:**

ಬೆಂಝ್ ಸಂಸ್ಥೆ ಇತಿಹಾಸದಲ್ಲಿ ಭಾರತೀಯರೊಬ್ಬರು ಇಷ್ಟು ಉನ್ನತ ಹುದ್ದೆಗೆ ಏರುತ್ತಿರುವುದು ಇದೇ ಮೊದಲು. ಕನ್ನಡಿಗರೊಬ್ಬರು ಬೆಂಝ್ ಸಂಸ್ಥೆಯಲ್ಲಿ ಇಷ್ಟು ಉನ್ನತ ಹುದ್ದೆಗೇರಿದ ಉದಾಹರಣೆಯೇ ಇಲ್ಲ. 2010ರಿಂದ ಭಾರತದಲ್ಲಿರುವ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದ ಮುಖ್ಯಸ್ಥರಾಗಿದ್ದ ಡಾ. ಜೆನ್ಸ್ ಕಟ್ಟಾರಿಯಸ್ ಅವರು ಇದೇ ಸಂದರ್ಭದಲ್ಲಿ ಹೊಸ ಮುಖ್ಯಸ್ಥರಾದ ಮನು ಸಾಲೆ ಅವರಿಗೆ ಬೆಂಝ್ ಕಾರ್ ಕೀ ಹಸ್ತಾಂತರಿಸುವ ಮೂಲಕ ವಿಧ್ಯುಕ್ತವಾಗಿ ಅಧಿಕಾರ ಹಸ್ತಾಂತರ ಮಾಡಿದ್ದಾರೆ.

**ಕಿರು ಪರಿಚಯ:**

ಮನು ಸಾಲೆ ಅವರು 1973ರ ಮೇ 4ರಂದು ದಕ್ಷಿಣ ಕನ್ನಡ ತಾಲೂಕಿನ ಪುತ್ತೂರಿನಲ್ಲಿ ಜನಿಸಿದರು. ಹಾಸನ ಹಾಗೂ ಮೈಸೂರಿನಲ್ಲಿ ಅಧ್ಯಯನ ನಡೆಸಿದ ಅವರು, ಮೈಸೂರು ವಿಶ್ವವಿದ್ಯಾಲಯದಿಂದ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್‌ನಲ್ಲಿ ಎಂಜಿನಿಯರಿಂಗ್ ಪದವಿ ಪಡೆದರು. 1995ರಲ್ಲಿ ಕ್ಯಾಂಪಸ್ ಆಯ್ಕೆ ಪ್ರಕ್ರಿಯೆಯಲ್ಲಿ ಬಾಷ್ ಸಂಸ್ಥೆಗೆ ಆಯ್ಕೆಯಾದರು. ನಂತರ ಬ್ರಾಜಿಲ್, ಜರ್ಮನಿ, ಚೈನಾ, ದಕ್ಷಿಣ ಕೊರಿಯಾಗಳಲ್ಲಿ ಬಾಷ್ ಸಂಸ್ಥೆಯಲ್ಲೇ ಕೆಲಸ ಮಾಡಿದ ಅವರು, 2011ರ ಜೂನ್‌ನಲ್ಲಿ ಭಾರತದಲ್ಲಿರುವ ಬೆಂಝ್ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರದಲ್ಲಿ ಎಲಿಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥರಾಗಿ ಸೇರಿದರು. 2012ರಲ್ಲಿ ಉಪ ಆಡಳಿತ ನಿರ್ದೇಶಕರಾಗಿ ನೇಮಕಗೊಂಡಿದ್ದರು.

1996ರಲ್ಲಿ ಬೆಂಝ್ ಸಂಸ್ಥೆ ಭಾರತದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ ಸ್ಥಾಪಿಸಿದ್ದು, ಈಗ ಅದರಲ್ಲಿ 1400 ಮಂದಿ ಉದ್ಯೋಗ ಪಡೆದಿದ್ದಾರೆ. ಬೆಂಝ್ ಸಂಸ್ಥೆ ಜರ್ಮನಿಯ ಹೊರಗೆ ಹೊಂದಿರುವ ಅತ್ಯಂತ ದೊಡ್ಡ ಮತ್ತು ಆಧುನಿಕ ಸಂಶೋಧನಾ ಕೇಂದ್ರ ಇದಾಗಿದೆ

ಕರುನಾಡು ಎಕ್ಸಾಮ್ಸ್

# ಪ್ರಶಸ್ತಿಗಳು

## ಉಡುಪಿ ಮೂಲದ ಮೀರಾ ಚಂದ್ರಶೇಖರ ಅವರಿಗೆ ಅಮೆರಿಕದ ಶ್ರೇಷ್ಠ ಶಿಕ್ಷಕಿ ಪ್ರಶಸ್ತಿ

ಉಡುಪಿ ಮತ್ತು ಚೆನ್ನೈನಲ್ಲಿ ಓದಿ ಅಮೆರಿಕದಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿರುವ ಮೀರಾ ಚಂದ್ರಶೇಖರ ಅವರು ಅಮೆರಿಕದ ಶ್ರೇಷ್ಠ ಶಿಕ್ಷಕಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಇಲ್ಲಿನ ಮಿಸ್ಸೌರಿ ವಿಶ್ವವಿದ್ಯಾಲಯದ ಭೌತಶಾಸ್ತ್ರ ಪ್ರಾಧ್ಯಾಪಕಿ ಮೀರಾ ಚಂದ್ರಶೇಖರ ಅವರನ್ನು ಅಮೆರಿಕದ 2014ರ ಅತ್ಯುನ್ನತ ಶಿಕ್ಷಕಿ ಪ್ರಶಸ್ತಿ ಗೌರವಕ್ಕೆ ಆಯ್ಕೆಮಾಡಲಾಗಿದೆ ಎಂದು ಬಾಯ್ಲರ್ ವಿಶ್ವವಿದ್ಯಾಲಯ ತಿಳಿಸಿದೆ.

**'ರಾಬರ್ಟ್ ಫಾಸ್ಟರ್ ಚೆರ್ರಿ ಅವಾರ್ಡ್':**

ಈ ವಿಶ್ವವಿದ್ಯಾಲಯ ಶ್ರೇಷ್ಠ ಬೋಧನೆ ಕೈಗೊಂಡವರಿಗಾಗಿ ಪ್ರತಿವರ್ಷ 'ರಾಬರ್ಟ್ ಫಾಸ್ಟರ್ ಚೆರ್ರಿ ಅವಾರ್ಡ್' ನೀಡುತ್ತಿದೆ. ಇದು ಅಮೆರಿಕದಲ್ಲಿಯೇ ಅತಿ ಹೆಚ್ಚು ಸಂಭಾವನೆ ನೀಡುವ ಪ್ರಶಸ್ತಿ. ಪ್ರಶಸ್ತಿಯ ಮೌಲ್ಯ ಅಂದಾಜು ರೂ. 1.54 ಕೋಟಿ. ಅಲ್ಲದೇ, ಮೀರಾ ಅವರು ಮಿಸ್ಸರಿ ವಿವಿಯ ಭೌತಶಾಸ್ತ್ರ ವಿಭಾಗದಿಂದ ರೂ.15.40 ಲಕ್ಷ ಬಹುಮಾನವನ್ನೂ ಪಡೆಯಲಿದ್ದಾರೆ. ಮೀರಾ ಅವರು ಉಡುಪಿಯ ಎಂಜಿಎಂ ಕಾಲೇಜಿನಲ್ಲಿ ಪದವಿ, ಮೈಸೂರು ವಿ.ವಿ ಹಾಗೂ ಐಐಟಿ ಮದ್ರಾಸ್‌ನಿಂದ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಪ್ರಶಸ್ತಿಗಾಗಿ ಅಮೆರಿಕದ ಶಿಕ್ಷಣ ಸಂಸ್ಥೆಗಳ ಒಟ್ಟು 600 ಜನ ಪ್ರಾಧ್ಯಾಪಕರು ಅರ್ಜಿ ಸಲ್ಲಿಸಿದ್ದರು.

## ಫ್ರಾನ್ಸ್‌ನ ಡಾಫ್ಟ್ ಪುಂಕ್ ಸಂಗೀತ ಜೋಡಿಗೆ ಗ್ರ್ಯಾಮಿ ಪ್ರಶಸ್ತಿಯ ಸಿಂಹಪಾಲು

ಫ್ರಾನ್ಸ್‌ನ ಎಲೆಕ್ಟ್ರಾನಿಕ್ ಸಂಗೀತ ಜೋಡಿ ಡಾಫ್ಟ್ ಪುಂಕ್, 2014ನೇ ಸಾಲಿನ ಗ್ರ್ಯಾಮಿ ಪುರಸ್ಕಾರದ ಐದು ವಿಭಾಗಗಳಲ್ಲಿ ಪ್ರಶಸ್ತಿ ಬಾಚಿಕೊಂಡಿದೆ.

**5 ಪ್ರಶಸ್ತಿಗಳು:**

ಡಾಫ್ಟ್ ಪುಂಕ್ ಜೋಡಿಯ 'ರಾಂಡಮ್ ಆಕ್ಸೆಸ್ ಮೆಮೊರಿ' ಆಲ್ಬಂ ವರ್ಷದ ಆಲ್ಬಂ ಎಂಬ ಗೌರವಕ್ಕೆ ಪಾತ್ರವಾದರೆ, ವರ್ಷದ ಅತ್ಯುತ್ತಮ ಗೀತೆ ವಿಭಾಗದಲ್ಲಿ ಇದೇ ಜೋಡಿಯ 'ಗೆಟ್ ಲಕ್ಕಿ' ಹಾಡು ಪ್ರಶಸ್ತಿ ಗೆದ್ದುಕೊಂಡಿದೆ. ಉತ್ತಮ ಪಾಪ್ ನೃತ್ಯ ವಿಭಾಗ, ಎಲೆಕ್ಟ್ರಾನಿಕ್ ಆಲ್ಬಂ ಹಾಗೂ ಅತ್ಯುತ್ತಮ ಆಲ್ಬಂ ನಿರ್ಮಾಣ ವಿಭಾಗಗಳಲ್ಲಿಯೂ ಡಾಫ್ಟ್ ಪುಂಕ್ (ಈ ಜೋಡಿಯ ನಿಜ ಹೆಸರು ಗ್ಯುಮಾ ನ್ಯುವೆಲ್ ಡಿ ಹೊಮೆಮ್‌ಕ್ರಿಸ್ಟೊ ಮತ್ತು ಥಾಮಸ್ ಬಂಗಲ್ಟರ್) ಗ್ರ್ಯಾಮಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದೆ.

**ಇತರೆ ಪ್ರಶಸ್ತಿ:**

- ನ್ಯೂಜಿಲೆಂಡ್‌ನ 17 ವರ್ಷದ ಪಾಪ್ ಗಾಯಕಿ ಸಾಂಗ್‌ಸ್ಟ್ರೆಸ್ ಲಾರ್ಡೆ ಅವರ 'ರಾಯಲ್ಸ್' ಆಲ್ಬಂ, ವರ್ಷದ ಅತ್ಯುತ್ತಮ ಹಾಡು, ಪಾಪ್ ಏಕವ್ಯಕ್ತಿ ಪ್ರದರ್ಶನ ವಿಭಾಗಗಳಲ್ಲಿ ಪ್ರಶಸ್ತಿ ಗಿಟ್ಟಿಸಿಕೊಂಡಿದೆ.
- ಮರಣೋತ್ತರ ವಿಭಾಗದಲ್ಲಿ ನಾಮಕರಣಗೊಂಡಿದ್ದ ಪಂಡಿತ್ ರವಿಶಂಕರ್ ಅವರ 'ದ ಲಿವಿಂಗ್ ರೂಮ್ ಸೆಷನ್ಸ್ ಭಾಗ-2' ಪ್ರಶಸ್ತಿ ಗೆಲ್ಲಲು ವಿಫಲವಾಗಿದೆ. ಇದೇ ಆಲ್ಬಂನ ಮೊದಲ ಭಾಗಕ್ಕೆ ಕಳೆದ ವರ್ಷ ಪ್ರಶಸ್ತಿ ಲಭಿಸಿತ್ತು. ಸಮಾರಂಭ-ದಲ್ಲಿ ಖ್ಯಾತ ಸಂಗೀತ ನಿರ್ದೇಶಕ ಎ.ಆರ್. ರೆಹಮಾನ್ ಇದ್ದರು.



ಸಂಪರ್ಕಿಸಿ:karunaduexams.com

## ಚೂರು-ಪಾರು ಸುದ್ದಿಗಳು

- **ಕುಂಗ್ ಫು ಚಿತ್ರಗಳ ಜನಕ ಹಾಲಿವುಡ್ ನಿರ್ಮಾಪಕ ರನ್ ರನ್ ಶಾ ನಿಧನ:** ಕುಂಗ್ ಫು ಚಿತ್ರಗಳನ್ನು ಜಗತ್ತಿಗೆ ಪರಿಚಯಿಸಿದ ಹಾಲಿವುಡ್ ನಿರ್ಮಾಪಕ ರನ್ ರನ್ ಶಾ ನಿಧನರಾಗಿದ್ದಾರೆ. ಶಾ ಅವರು 1967ರಲ್ಲಿ ಶಾ ಬ್ರದರ್ಸ್ ಸ್ಟುಡಿಯೋವನ್ನು ಆರಂಭಿಸಿದ್ದರು. ಇದು ಪ್ರಸಕ್ತ ವಿಶ್ವದ ಅತ್ಯಂತ ದೊಡ್ಡ ಸ್ಟುಡಿಯೋಗಳ ಪೈಕಿ ಒಂದಾಗಿದೆ. ತಮ್ಮ ಚಿತ್ರಗಳಲ್ಲಿ ಕುಂಗ್ ಫು ಕಲೆಯನ್ನು ಮೊತ್ತಮೊದಲ ಬಾರಿಗೆ ಅಳವಡಿಸಿಕೊಂಡಿದ್ದ ಶಾ, ಈ ಮೂಲಕ ಎಲ್ಲೆಡೆ ಇಂತಹ ಕಲೆಯನ್ನು ತಲುಪಿಸುವಲ್ಲಿ ನೆರವಾಗಿದ್ದರು.

- **ಅಮೆರಿಕಾದ ಫೆಡರಲ್ ರಿಸರ್ವ ಬ್ಯಾಂಕ್ ಅಧ್ಯಕ್ಷೆಯಾಗಿ ಜೇನೆಟ್ ಯೆಲೆನ್:** 100 ವರ್ಷಗಳ ಇತಿಹಾಸವಿರುವ ಅಮೆರಿಕಾದ ಕೇಂದ್ರ ಬ್ಯಾಂಕ್ ಆದ ಫೆಡರಲ್ ರಿಸರ್ವ್‌ನ ಮೊದಲ ಮಹಿಳಾ ಅಧ್ಯಕ್ಷೆಯಾಗಿ ಜೇನೆಟ್ ಯೆಲೆನ್ ಫೆಬ್ರವರಿ 1 ರಂದು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಯೆಲೆನ್ ಅವರನ್ನು ಅಧ್ಯಕ್ಷೆಯನ್ನಾಗಿ ಆಯ್ಕೆ ಮಾಡಿರುವ ಅಧ್ಯಕ್ಷ ಒಬಾಮಾ ನಿರ್ಧಾರಕ್ಕೆ ಅಮೆರಿಕ ಸೆನೆಟ್ ಸಮ್ಮತಿ ನೀಡಿದೆ.

- **ರಿಯಲ್ ಮ್ಯಾಡ್ರಿಡ್ ತಂಡದ ಕ್ರಿಶ್ಚಿಯಾನೊ ರೊನಾಲ್ಡೊಗೆ ವೃತ್ತಿಜೀವನದಲ್ಲಿ 400ನೇ ಗೋಲ್:** ರಿಯಲ್ ಮ್ಯಾಡ್ರಿಡ್ ತಂಡದ ಸ್ಟಾರ್ ಆಟಗಾರ ಕ್ರಿಶ್ಚಿಯಾನೊ ರೊನಾಲ್ಡೊ ತಮ್ಮ ವೃತ್ತಿಜೀವನದಲ್ಲಿ ಒಟ್ಟು 400 ಗೋಲು ಗಳಿಸಿದ್ದಾರೆ. ಈ ಮೂಲಕ 400 ಗೋಲುಗಳಿಸಿದ ಅಪರೂಪದ ಸಾಧಕರ ಸಾಲಿನಲ್ಲಿ ನಿಂತಿದ್ದಾರೆ. ಅಂತಾರಾಷ್ಟ್ರೀಯ ಫುಟ್‌ಬಾಲ್ ಪಂದ್ಯಗಳಲ್ಲಿ ಅವರು 47 ಗೋಲನ್ನು ಗಳಿಸಿದ್ದರೂ, ಲೀಗ್ ಪಂದ್ಯಗಳಲ್ಲಿ ಉಳಿದ ಗೋಲುಗಳನ್ನು ಬಾರಿಸಿದ್ದಾರೆ. ರಿಯಲ್‌ಮ್ಯಾಡ್ರಿಡ್ ವರ್ಸಸ್ ಸೆಲ್ಟಾವಿಗೋ ಪಂದ್ಯದಲ್ಲಿ 2 ಗೋಲು ಗಳಿಸುವ ಅವರು ಈ ಸಾಧನೆ ಮಾಡಿದ್ದಾರೆ.

- **ಹಾವೇರಿಯಲ್ಲಿ ಮುಂದಿನ ವರ್ಷದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ :** ಮುಂದಿನ ವರ್ಷದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹಾವೇರಿಯಲ್ಲಿ ನಡೆಯಲಿದೆ. ಮಡಿಕೇರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕಗಳ ಸಭೆಯಲ್ಲಿ 81ನೇ ಸಾಹಿತ್ಯ ಸಮ್ಮೇಳನವನ್ನು ಸರ್ವಜ್ಞನ ನಾಡಿನಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಹಾವೇರಿಯಲ್ಲಿ ಅಖಿಲ ಭಾರತ ಮಟ್ಟದ ಸಾಹಿತ್ಯ ಸಮ್ಮೇಳನ ನಡೆಯುವುದು ಇದೇ ಮೊದಲು.

- **ಸಾಮಾಜಿಕ ಸೇವಾ ಕಾರ್ಯಕರ್ತೆ ಮೇಧಾ ಪಾಟ್ಕರ್ ಗೆ ಬಸವ ಕೃಷಿ ಪ್ರಶಸ್ತಿ:** ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ 2014ನೇ ಸಾಲಿನ ಬಸವ ಕೃಷಿ ಪ್ರಶಸ್ತಿಗೆ ಮಧ್ಯಪ್ರದೇಶದ ಪರಿಸರವಾದಿ, ಸಾಮಾಜಿಕ ಸೇವಾ ಕಾರ್ಯಕರ್ತೆ ಮೇಧಾ ಪಾಟ್ಕರ ಅವರನ್ನು ಆಯ್ಕೆ ಮಾಡಲಾಗಿದೆ ಕೃಷಿ ಹಾಗೂ ಕೃಷಿಕರನ್ನು ರಕ್ಷಿಸುವ ಮತ್ತು ಪ್ರೋತ್ಸಾಹಿಸುವ ಉದ್ದೇಶದಿಂದ 2012ರಲ್ಲಿ ರಾಷ್ಟ್ರಮಟ್ಟದ ಬಸವ ಕೃಷಿ ಪ್ರಶಸ್ತಿ ಸ್ಥಾಪಿಸಲಾಗಿದೆ. 2012ರಲ್ಲಿ ರಾಜಸ್ಥಾನದ ರಾಜೇಂದ್ರಸಿಂಗ್, 2013ರಲ್ಲಿ ಅಣ್ಣಾ ಹಜಾರೆ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗಿದೆ. ಪ್ರಶಸ್ತಿ 50 ಸಾವಿರ ರೂ. ನಗದು, ತಾಮ್ರ ಪತ್ರ ಹಾಗೂ ಸ್ಮರಣ ಫಲಕ ಹೊಂದಿದೆ.

- **ಇಸ್ರೇಲ್‌ನ ಮಾಜಿ ಪ್ರಧಾನಿ ಏರಿಯಲ್ ಶರೋನ್ ನಿಧನ:** ಇಸ್ರೇಲ್‌ನ ಮಾಜಿ ಪ್ರಧಾನಿ ಏರಿಯಲ್ ಶರೋನ್ ನಿಧನರಾದರು. ಪಾರ್ಶ್ವವಾಯುವಿಗೆ ತುತ್ತಾಗಿದ್ದ ಅವರು ಎಂಟು ವರ್ಷಗಳಿಂದ ಟೆಲ್ ಅವೀವ್ ನಗರ ಬಳಿಯ ಆಸ್ಪತ್ರೆಯೊಂದರಲ್ಲಿ ಕೋಮಾ ಸ್ಥಿತಿಯಲ್ಲಿದ್ದರು. ಇಸ್ರೇಲ್‌ನ 11ನೇ ಪ್ರಧಾನಿ ಆಗಿದ್ದ ಶರೋನ್ ಕೊನೆಯುಸಿರೆಳೆಯುವಾಗ ಅವರ ಕುಟುಂಬದ ಸದಸ್ಯರು

ಆಸ್ಪತ್ರೆಯಲ್ಲಿದ್ದರು. ಇಸ್ರೇಲ್ ಸ್ವಾತಂತ್ರ್ಯ ಪಡೆದ ನಂತರ ನಡೆದ ಯುದ್ಧಗಳಿಗೆ ಶೆರೋನ್ ನೀಡಿದ ಕೊಡುಗೆಗಳಿಂದ ಅವರು ದೇಶದಲ್ಲಿ 'ಮಿ. ಸೆಕ್ಯೂರಿಟಿ' ಎಂದೇ ಗುರುತಿಸಿಕೊಳ್ಳುತ್ತಿದ್ದರು. ಆದರೆ, ಅರಬ್ ಜಗತ್ತು ಅವರನ್ನು 'ಸಾಬ್ರಾ ಮತ್ತು ಷಟಿಲಾದ ಕಟುಕ' ಎಂದು ಸಂಭೋದಿಸುತ್ತಿತ್ತು. 1982ರಲ್ಲಿ ಶರೋನ್ ರಕ್ಷಣಾ ಸಚಿವರಾಗಿದ್ದಾಗ ಲೆಬನಾನ್ ಮೇಲೆ ಇಸ್ರೇಲ್ ದಾಳಿ ನಡೆಸಿತ್ತು. ಈ ದಾಳಿಯ ರೂವಾರಿ ಶೆರೋನ್ ಆಗಿದ್ದರು.

- **<u>ಭಾರ್ತಿ ಏರ್‌ಟೆಲ್ ಲಿಮಿಟೆಡ್ ಮತ್ತು ರಿಲಯನ್ಸ್ ಜಿಯೋ ಇನ್ಫೋಕಾಮ್ ಲಿಮಿಟೆಡ್ ನಡುವೆ ಒಪ್ಪಂದ:</u>** ದೂರಸಂಪರ್ಕ ಮೂಲ ಸೌಕರ್ಯಗಳನ್ನು ಹಂಚಿಕೊಳ್ಳುವ ನಿಟ್ಟಿನಲ್ಲಿ ಭಾರ್ತಿ ಏರ್‌ಟೆಲ್ ಲಿಮಿಟೆಡ್ ಮತ್ತು ರಿಲಯನ್ಸ್ ಜಿಯೋ ಇನ್ಫೋಕಾಮ್ ಲಿಮಿಟೆಡ್ ಒಪ್ಪಂದವೊಂದಕ್ಕೆ ಸಹಿ ಹಾಕಿವೆ. ಇದರ ಪ್ರಕಾರ ಉಭಯ ಕಂಪನಿಗಳು ದೂರಸಂಪರ್ಕ ಕ್ಷೇತ್ರದಲ್ಲಿ ಪರಸ್ಪರ ಮೊಬೈಲ್ ಟವರ್ ಮತ್ತು ತಾಂತ್ರಿಕ ವಿಚಾರಗಳ ಹಂಚಿಕೆ ಮಾಡಿಕೊಳ್ಳಲಿವೆ. ರಿಲಯನ್ಸ್ ಜಿಯೋ ಇನ್ಫೊಕಾಮ್ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ (ಆರ್‌ಐಎಲ್)ನ ಸಹವರ್ತಿ ಸಂಸ್ಥೆಯಾಗಿದೆ. ಇದು ದೇಶದ 22 ದೂರಸಂಪರ್ಕ ವಲಯಗಳಲ್ಲಿ ಪರವಾನಗಿ ಹೊಂದಿದೆ.ಭಾರ್ತಿ ಏರ್ ಟೆಲ್ 11 ದೂರಸಂಪರ್ಕ ವಲಯಗಳಲ್ಲಿ 35,376 ಟವರ್‌ಗಳನ್ನು ಹೊಂದಿದೆ. 1,75,705 ಕಿಲೋಮೀಟರ್‌ನಷ್ಟು ಆಪ್ಟಿಕ್ ಫೈಬರ್ ಕೇಬಲ್ ಸಂಪರ್ಕ ಜಾಲವನ್ನು ಹೊಂದಿದೆ.

- **<u>'ಅಮೆರಿಕನ್ ಹಸಲ್' ಚಿತ್ರಕ್ಕೆ ಮೂರು ಗೋಲ್ಡನ್ ಗ್ಲೋಬ್ ಪ್ರಶಸ್ತಿಗೆ:</u>** ಆಸ್ಕರ್ ಪುರಸ್ಕಾರದ ದಿಕ್ಸೂಚಿ ಎಂದೇ ಪರಿಗಣಿಸಲಾಗಿರುವ ಗೋಲ್ಡನ್ ಗ್ಲೋಬ್ ಪ್ರಶಸ್ತಿಗಳು ಘೋಷಣೆಯಾಗಿದ್ದು, 'ಅಮೆರಿಕನ್ ಹಸಲ್' ಚಿತ್ರ ಮೂರು ಪ್ರಶಸ್ತಿಗೆ ಪಾತ್ರವಾಗಿದೆ. ಇದೇ ವೇಳೆ 71 ಗೋಲ್ಡನ್ ಗ್ಲೋಬ್ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು, ಅಮೆರಿಕನ್ ಹಸಲ್ ಚಿತ್ರ ಅತ್ಯುತ್ತಮ ಹಾಸ್ಯ ಚಿತ್ರ ಗೌರವಕ್ಕೆ ಪಾತ್ರವಾಗಿದೆ. ಜೊತೆಗೆ ಆಯಮಿ ಆಯಡಮ್ಸ್ ಮತ್ತು ಜೆನ್ನಿಫರ್ ಲಾರೆನ್ಸ್ ಕ್ರಮವಾಗಿ ಇದೇ ಚಿತ್ರಕ್ಕಾಗಿ ಅತ್ಯುತ್ತಮ ಪೋಷಕ ನಟರ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

- **<u>ಬ್ಯಾಂಕ್ ಆಫ್ ಬರೋಡಗೆ ಪ್ರಶಸ್ತಿ:</u>** ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ವಲಯದಲ್ಲಿ (MSME) ನೀಡಲಾಗುವ ಪ್ರಶಸ್ತಿಗೆ ಬ್ಯಾಂಕ್ ಆಫ್ ಬರೋಡ ಆಯ್ಕೆಯಾಗಿದೆ. ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮ ಇಲಾಖೆ ಈ ಪ್ರಶಸ್ತಿಯನ್ನು ನೀಡುತ್ತಿದೆ.

- **<u>ಉತ್ತರಖಂಡ ಸರ್ಕಾರಿ ಸೇವೆ ನೇಮಕಾತಿ ವಯಸ್ಸು ಹೆಚ್ಚಳ</u>**: ಸರ್ಕಾರಿ ಸೇವೆಗೆ ನೇಮಕವಾಗುವ ಸಾಮಾನ್ಯ ವರ್ಗದ ಅಭ್ಯರ್ಥಿಗಳ ವಯಸ್ಸಿನ ಮಿತಿಯನ್ನು 35 ವರ್ಷದಿಂದ 40 ವರ್ಷಕ್ಕೆ ಹೆಚ್ಚಿಸುವ ಮಹತ್ವದ ನಿರ್ಣಯವನ್ನು ಉತ್ತರಖಂಡ ಸರ್ಕಾರ ಕೈಗೊಂಡಿದೆ. ಸರ್ಕಾರದ ಈ ಕ್ರಮ 35 ವರ್ಷ ಕಳೆದರೂ ಉದ್ಯೋಗ ವಂಚಿತರಾಗಿರುವ ಸಾವಿರಾರು ಉದ್ಯೋಗಾಕಾಂಕ್ಷಿಗಳಿಗೆ ವರದಾನವಾಗಲಿದೆ, ಅಷ್ಟೇ ಅಲ್ಲದೇ ಉತ್ತರಖಂಡ ಸರ್ಕಾರ ಸದ್ಯದಲ್ಲೇ 40,000 ಕ್ಕೂ ಹೆಚ್ಚು ಖಾಲಿ ಇರುವ ಸರ್ಕಾರಿ ಉದ್ಯೋಗ ತುಂಬುವ ಪ್ರಕ್ರಿಯೆಗೆ ಚಾಲನೆ ನೀಡಲಿದೆ.

- **<u>"ಲಿಟ್ಲ್ ಐ" ಸಂಸ್ಥೆಯನ್ನು ಖರೀದಿಸಿದ ಫೇಸ್ ಬುಕ್:</u>** ವಿಶ್ವದ ಪ್ರಸಿದ್ಧ ಸಾಮಾಜಿಕ ತಾಣ ಫೇಸ್ ಬುಕ್ ಬೆಂಗಳೂರು ಮೂಲದ "ಲಿಟ್ಲ್ ಐ" ಸಾಫ್ಟ್ ವೇರ್ ಸಂಸ್ಥೆಯನ್ನು ಖರೀದಿಸಿದೆ. ಈ ಮೂಲಕ ಭಾರತದಲ್ಲಿ ಇದೇ ಮೊದಲ ಬಾರಿಗೆ ಫೇಸ್ ಬುಕ್ ಸಂಸ್ಥೆಯೊಂದನ್ನು ಖರೀದಿಸಿದಂತಾಗಿದೆ. 2012 ರಲ್ಲಿ ಸ್ಥಾಪಿಸಲಾಗಿರುವ ಲಿಟ್ಲ್ ಐ ಸಂಸ್ಥೆಯನ್ನು ಯಾವ ಮೊತ್ತಕ್ಕೆ ಖರೀದಿಸಲಾಗಿದೆ ಎಂಬುದರ ಬಗ್ಗೆ

ಸದ್ಯ ಯಾವುದೇ ವಿವರಣೆಯನ್ನು ಫೇಸ್ ಬುಕ್ ನೀಡಿಲ್ಲ. ಆಂಡ್ರಾಯಿಡ್ ತಂತ್ರಾಂಶ ಆಧಾರಿತ ಅಪ್ಲಿಕೇಶನ್ ಗಳ ವಿಶ್ಲೇಷಣೆ, ಬಳಕೆ ಅಭಿವೃದ್ಧಿ ಮುಂತಾದವುಗಳನ್ನು ಲಿಟ್ಲ್ ಐ ನಡೆಸುತ್ತಿದೆ.

- **ಅಸ್ಸಾಂ ನ ಜೋರ್ಹತ್ ಜಿಲ್ಲೆ ಈಗ ತಂಬಾಕು ಮುಕ್ತ:** ಅಸ್ಸಾಂ ನ ಜೋರ್ಹತ್ ಜಿಲ್ಲೆಯನ್ನು ತಂಬಾಕು ಮುಕ್ತ ಜಿಲ್ಲೆಯೆಂದು ಇತ್ತೀಚೆಗೆ ಘೋಷಿಸಲಾಗಿದೆ. ಜಿಲ್ಲೆಯ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಸೇವನೆ, ಮಾರಾಟವನ್ನು ನಿಷೇಧಿಸಲಾಗಿದ್ದು, ಈ ಖ್ಯಾತಿಯನ್ನು ಪಡೆದ ಅಸ್ಸಾಂ ನ ಮೊದಲ ಜಿಲ್ಲೆ.

- **ಪಾಕಿಸ್ತಾನದಲ್ಲೂ ಆಮ್ ಆದ್ಮಿ ಪಕ್ಷ ಸ್ಥಾಪನೆ:** ಅರವಿಂದ್ ಕೇಜ್ರಿವಾಲ್ ನೇತೃತ್ವದ ಆಮ್ಆದ್ಮಿಪಕ್ಷ ದೆಹಲಿಯಲ್ಲಿ ಮಾಡಿದ ಮೋಡಿ ಇದೀಗ ಭಾರತದ ಗಡಿಯನ್ನು ದಾಟಿ ಪಾಕಿಸ್ತಾನಕ್ಕೂ ಹಬ್ಬಿದೆ. ಅಕ್ಷರಶಃ ಪಾಕಿಸ್ತಾನದಲ್ಲೂ ಒಂದು ಆಮ್ಆದ್ಮಿಪಕ್ಷ ಸ್ಥಾಪನೆಯಾಗಲು ಸಿದ್ಧತೆ ನಡೆದಿದೆ. ಭ್ರಷ್ಟಾಚಾರದ ವಿರುದ್ಧ ಭಾರತದಲ್ಲಿ ಹೋರಾಟ ನಡೆಸಿ ಯಶಸ್ವಿಯಾಗಿರುವ ಅರವಿಂದ್ ಕೇಜ್ರಿವಾಲ್‌ರಿಂದ ಪ್ರಭಾವಿತರಾಗಿ ಪಾಕಿಸ್ತಾನದಲ್ಲಿ ಮಾರ್ಚ್ ವೇಳೆಗೆ ಆಮ್ಆದ್ಮಿ ಪಕ್ಷ ಸ್ಥಾಪಿಸಲು ಅಭಿಯಾನ ಆರಂಭಿಸಲಾಗಿದೆ. ಈಗಾಗಲೇ ಪಾಕಿಸ್ತಾನದ 8 ನಗರಗಳಲ್ಲಿ, ಸಣ್ಣಹಳ್ಳಿಗಳಲ್ಲಿ ಪಕ್ಷಕ್ಕೆ ಸದಸ್ಯರನ್ನು ಸೇರಿಸಿಕೊಳ್ಳುವ ಅಭಿಯಾನ ಆರಂಭಿಸಲಾಗಿದೆ, ಮಾಜಿ ಕ್ರಿಕೆಟಿಗ ಇಮ್ರಾನ್ ಖಾನ್ ಬೆಂಬಲವೂ ಇದೆ ಎನ್ನಲಾಗಿದೆ. ಸದ್ಯ ಪಾಕ್ 18ರಿಂದ 50ರ ವಯೋಮಿತಿಯೊಳಗಿನವರನ್ನು ಮಾತ್ರ ಸದಸ್ಯರನ್ನು ಸೇರಿಸಿಕೊಳ್ಳುತ್ತಿದೆ.

- **ಮಧ್ಯಾಹ್ನದ ಬಿಸಿಯೂಟ ವಿತರಣೆಯಲ್ಲಿ ಕರ್ನಾಟಕ ದೇಶದಲ್ಲೇ 2ನೇ ಸ್ಥಾನ:** ಮಧ್ಯಾಹ್ನದ ಬಿಸಿಯೂಟ ವಿತರಣೆಯಲ್ಲಿ ಕರ್ನಾಟಕ ದೇಶದಲ್ಲೇ 2ನೇ ಸ್ಥಾನ ಪಡೆದುಕೊಂಡಿದೆ. ಮೊದಲ ಸ್ಥಾನದಲ್ಲಿ ತಮಿಳುನಾಡು ಇದ್ದು, 3 ಮತ್ತು 4ನೇ ಸ್ಥಾನಗಳಲ್ಲಿ ಕೇರಳ, ತ್ರಿಪುರಾ ರಾಜ್ಯಗಲಿವೆ. ಅಚ್ಚರಿಯೆಂದರೆ ಬಿಸಿಯೂಟದ ಯೋಜನೆ ವೇಳೆ ಹಲವು ಅಹಿತಕರ ಘಟನೆಗೆ ಸಾಕ್ಷಿಯಾಗಿದ್ದ ಬಿಹಾರ 5ನೇ ಸ್ಥಾನ ಪಡೆದುಕೊಂಡಿದೆ. 2013ರಲ್ಲಿ ಬಿಹಾರದ ಸರಣ್ ಜಿಲ್ಲೆಯ ಗಂಡಾಮಾನ್ ಹಳ್ಳಿಯ ಪ್ರಾಥಮಿಕ ಶಾಲೆಯಲ್ಲಿ ಮಧ್ಯಾಹ್ನದೂಟ ಸೇವಿಸಿ 23 ಮಕ್ಕಳು ಸಾವಿಗೀಡಾಗಿದ್ದರು. ಇದು ರಾಷ್ಟ್ರಾದ್ಯಂತ ಆಕ್ರೋಶಕ್ಕೆ ಕಾರಣವಾಗಿತ್ತು.

- **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಪ್ರಸಕ್ತ ಸಾಲಿನ ರಾಷ್ಟ್ರ ಪ್ರಶಸ್ತಿ:** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್ಆರ್ ಟಿಸಿ)ಕ್ಕೆ ಪ್ರಸಕ್ತ ಸಾಲಿನ ಪ್ರತಿಷ್ಠಿತ 'ರಾಷ್ಟ್ರದ ಅತ್ಯುತ್ತಮ ಸಾರ್ವಜನಿಕ ಸಾರಿಗೆ ಸಂಸ್ಥೆ ಪ್ರಶಸ್ತಿ' ಲಭಿಸಿದೆ. ಕಾರ್ಯಾಚರಣೆಯಲ್ಲಿ ಅಳವಡಿಸಿಕೊಂಡಿರುವ ಅನ್ವೇಷಣೆಗಳು, 'ಪ್ರಯಾಣಿಕ ಸ್ನೇಹಿ' ಕಾರ್ಯಕ್ರಮಗಳು ಹಾಗೂ ಆಡಳಿತದಲ್ಲಿನ ದಕ್ಷತೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ. ಇತ್ತೀಚಿನ ದಿನಗಳಲ್ಲಿ ಇಂಧನದ ಗಣನೀಯ ಬೆಲೆ ಏರಿಕೆ ನಡುವೆಯೂ ನಿಗಮವು ದೇಶದ 56 ರಾಜ್ಯ ರಸ್ತೆ ಸಾರಿಗೆ ನಿಗಮಗಳ ಪೈಕಿ 8,400 ಬಸ್ಸುಗಳನ್ನು ಕಾರ್ಯಾಚರಣೆಗೊಳಿಸಿ ಲಾಭ ಗಳಿಸಿರುವ ಏಕೈಕ ನಿಗಮ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ.

- **<u>ಭಾರತದ ಲಾಂಗ್‌ಜಂಪ್ ಪಟು ಅಂಜು ಬಾಬಿ ಜಾರ್ಜ್‌ಗೆ ವಿಶ್ವ ಅಥ್ಲೆಟಿಕ್ಸ್ ಚಿನ್ನದ ಪದಕ:</u>** ಭಾರತದ ಲಾಂಗ್‌ಜಂಪ್ ಪಟು ಅಂಜು ಬಾಬಿ ಜಾರ್ಜ್ 9 ವರ್ಷಗಳ ಕಾಯುವಿಕೆ ನಂತರ 2005ರ ಮೊನಾಕ್ಕೊ ವಿಶ್ವ ಅಥ್ಲೆಟಿಕ್ಸ್ ಫೈನಲ್ಸ್‌ನಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ಟೂರ್ನಿಯಲ್ಲಿ ಎರಡನೇ ಸ್ಥಾನ ಪಡೆದು ಬೆಳ್ಳಿ ಪದಕ ಗಳಿಸಿದ್ದರು. ರಷ್ಯಾದ ಟಟ್ಯಾನಾ ಕೊಟೊವಾ ಉದ್ದೀಪನ ಮದ್ದು ಪರೀಕ್ಷೆಯಲ್ಲಿ ಸಿಕ್ಕಿಬಿದ್ದಿದ್ದರಿಂದ ಅವರು ಗೆದ್ದಿದ್ದ ಚಿನ್ನದ ಪದಕವನ್ನು ಅಂಜು ಜಾರ್ಜ್‌ಗೆ ದೊರೆತಿದೆ. ಈಗಾಗಲೇ ವೃತ್ತಿಪರ ಅಥ್ಲೆಟಿಕ್ಸ್‌ಗೆ ವಿದಾಯ ಹೇಳಿರುವ ಅಂಜು, ಜಾಗತಿಕ ಮಟ್ಟದ ಪ್ರತಿಷ್ಠಿತ ಟೂರ್ನಿಯೊಂದರ ಟ್ರ್ಯಾಕ್ ಅಂಡ್ ಫೀಲ್ಡ್‌ನಲ್ಲಿ ಚಿನ್ನದ ಪದಕ ಗೆದ್ದ ಭಾರತದ ಮೊದಲ ಕ್ರೀಡಾಪಟು ಎಂಬ ಸಾಧನೆ ಮಾಡಿದರು.

- **<u>ಕೇರಳದ ಕೊಚ್ಚಿಯಲ್ಲಿ ದೇಶದ ಮೊದಲ ಮೀನುಗಳ ಆಸ್ಪತ್ರೆ ಆರಂಭಿಸಲು ಅನುಮತಿ:</u>** ದೇಶದ ಮೊದಲ ಮೀನುಗಳ ಆಸ್ಪತ್ರೆ ಆರಂಭಿಸಲು ಅನುಮತಿ ದೊರೆತಿದ್ದು, ಆಸ್ಪತ್ರೆ ಕೊಚ್ಚಿಯಲ್ಲಿ ಶೀಘ್ರವೇ ನಿರ್ಮಾಣವಾಗಲಿದೆ. ಕೇಂದ್ರ ಸರ್ಕಾರದ 56 ಲಕ್ಷ ರೂ. ಅನುದಾನದಲ್ಲಿ ಆಸ್ಪತ್ರೆ ನಿರ್ಮಾಣಗೊಳ್ಳಲಿದೆ. ಮೀನುಗಾರರು ಮತ್ತು ಸಮುದ್ರ ಅಧ್ಯಯನ ಕೇರಳ ವಿಶ್ವವಿದ್ಯಾಲಯದ ಅಡಿಯಲ್ಲಿ ಆಸ್ಪತ್ರೆ ಕಾರ್ಯನಿರ್ವಹಿಸಲಿದೆ. ಇದಕ್ಕೆ ಅಕ್ವೆಟಿಕ್ ಎನಿಮಲ್ ಹೆಲ್ತ್ ಲ್ಯಾಬೊರೇಟರಿ ಎಂದು ನಾಮಕರಣ ಮಾಡಲಾಗುವುದು. ಜಲಚರ ಸಾಕಣೆಯಲ್ಲಿ ತೊಡಗಿಕೊಂಡವರಿಗೆ ಆಸ್ಪತ್ರೆ ವರದಾನವಾಗಲಿದ್ದು, ಮೀನುಗಳ ಸಾಕಣಿಕೆಗೆ ಅಗತ್ಯವಿರುವ ತಾಂತ್ರಿಕ ನೆರವನ್ನು ಒದಗಿಸಲಿದೆ. ಅಲ್ಲದೆ ಮೀನುಗಾರರು ಎದುರಿಸುತ್ತಿರುವ ಮಾಲಿನ್ಯ ಸಂಬಂಧಿ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸಲಿದೆ.

- **<u>ಅಮರ ಚಿತ್ರ ಕಥಾದಲ್ಲಿ ಸೌರವ್ ಗಂಗೂಲಿ ಜೀವನ ಚರಿತ್ರೆ:</u>** ಕಳೆದ 50 ವರ್ಷಗಳಿಂದ ಭಾರತೀಯ ಪೌರಾಣಿಕ ಕಥೆಗಳನ್ನು ಮಕ್ಕಳಿಗಾಗಿ ಕಾಮಿಕ್ಸ್ ರೂಪದಲ್ಲಿ ಹೊರತರುತ್ತಿರುವ ಅಮರ ಚಿತ್ರ ಕಥಾ ಇದೇ ಮೊದಲ ಬಾರಿಗೆ ಜೀವಂತ ವ್ಯಕ್ತಿಯೊಬ್ಬರ ಕುರಿತ ಪುಸ್ತಕ ಹೊರತರಲು ನಿರ್ಧರಿಸಿದೆ. ಮಾಜಿ ಕ್ರಿಕೆಟಿಗ ಸೌರವ್ ಗಂಗೂಲಿ ಅವರ ಜೀವನದ ಕುರಿತು ಕಾಮಿಕ್ಸ್‌ನಲ್ಲಿ ಹೊರತರಲು ಸಂಸ್ಥೆ ಮುಂದಾಗಿದೆ. ಕೇವಲ ಪುಸ್ತಕದಲ್ಲಿ ಮಾತ್ರವಲ್ಲದೆ ಟೀವಿ, ಇಂಟರ್‌ನೆಟ್ ಮತ್ತು ಮೊಬೈಲ್‌ನಲ್ಲೂ ಕೂಡ ಆಯನಿಮೇಷನ್ ಹಾಗೂ ಗೇಮ್ಸ್‌ಗಳನ್ನು ಬಿಡುಗಡೆ ಮಾಡಲು ಅಮರ ಚಿತ್ರ ಕಥಾ ತೀರ್ಮಾನಿಸಿದೆ. ಮುಂದಿನ ಪೀಳಿಗೆ ಗಂಗೂಲಿ ಬಗ್ಗೆ ತಿಳಿದುಕೊಂಡು ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಲಿ ಎಂಬ ಕಾರಣದಿಂದ ಗಂಗೂಲಿ ಮೇಲೆ ಪುಸ್ತಕ ಹೊರತರಲಾಗುತ್ತಿದೆ ಎಂದು ಸಂಸ್ಥೆ ಹೇಳಿದೆ.

- **<u>ಜಪಾನ್‌ನಿಂದ ಮೊದಲ ಬಾರಿಗೆ ಮಿಲಿಟರಿ ವಿಮಾನ ಖರೀದಿಸಿದ ಭಾರತ:</u>** ಜಪಾನ್‌ನಿಂದ 10400 ಕೋಟಿ ಮೌಲ್ಯದ ಯುದ್ಧವಿಮಾನಗಳ ಖರೀದಿಗೆ ಭಾರತ ಮುಂದಾಗಿವೆ. ಈ ಮೂಲಕ ಎರಡನೇ ವಿಶ್ವ ಯುದ್ಧದ ಬಳಿಕ ಜಪಾನ್‌ನಿಂದ ಮಿಲಿಟರಿ ವಿಮಾನವೊಂದನ್ನು ಖರೀದಿಸಿದ ಮೊದಲ ರಾಷ್ಟ್ರ ಎನ್ನುವ ಖ್ಯಾತಿಗೆ ಭಾರತ ಪಾತ್ರವಾಗಲಿದೆ. ಅಲ್ಲದೆ ವಿದೇಶಿ ಮಾರುಕಟ್ಟೆಗೆ ಶಸ್ತ್ರಾಸ್ತ್ರಗಳನ್ನು ರಫ್ತು ಮಾಡಲು ವಿಧಿಸಿರುವ ನಿಷೇಧದಿಂದ ಜಪಾನ್ ಹೊರಬರುವುದಕ್ಕೂ ಭಾರತ ಕಾರಣವಾಗಲಿದೆ. ಆಯಂಫಿಬಿಯಸ್ ಯುದ್ಧ ವಿಮಾನ ಖರೀದಿ ವ್ಯವಹಾರಕ್ಕೆ ಉಭಯ ದೇಶಗಳು ಒಪ್ಪಂದ ಮಾಡಿಕೊಳ್ಳಲಿವೆ. ಭಾರತ 15 ಯುದ್ಧ ವಿಮಾನಗಳನ್ನು ಜಪಾನ್‌ನಿಂದ ಖರೀದಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

- **ರಾಜ್ಯ ಸರ್ಕಾರದಿಂದ 'ಪಡಿತರ ಖಾತರಿ' ಯೋಜನೆಗೆ ಚಾಲನೆ:** ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯು ಫೆಬ್ರವರಿ 2014 ರಿಂದ 'ಪಡಿತರ ಖಾತರಿ' ಯೋಜನೆಗೆ ಚಾಲನೆ ನೀಡಿದೆ. ಈ ಯೋಜನೆಯಡಿ ಎಲ್ಲಾ ನ್ಯಾಯಬೆಲೆ ಅಂಗಡಿಯವರು ಪಡಿತರ ಚೀಟಿದಾರರಿಗೆ ಪ್ರತಿ ತಿಂಗಳು ಒಂದನೇ ತಾರೀಖಿನಿಂದ 10 ರವರೆಗೆ ಬೆಳಗ್ಗೆ 8 ರಿಂದ ರಾತ್ರಿ 8 ಗಂಟೆಯವರೆಗೆ ಕಡ್ಡಾಯವಾಗಿ ಪಡಿತರ ಧಾನ್ಯವನ್ನು ವಿತರಿಸಬೇಕು. 11ನೇ ತಾರೀಖಿನಿಂದ ಬೆಳಗ್ಗೆ 8 ರಿಂದ ಮಧ್ಯಾಹ್ನ 12 ಹಾಗೂ ಸಂಜೆ 4 ರಿಂದ ರಾತ್ರಿ 8 ಗಂಟೆಯವರೆಗೆ ಪಡಿತರ ಧಾನ್ಯವನ್ನು ವಿತರಿಸುವ ವ್ಯವಸ್ಥೆ ಜಾರಿಗೊಳಿಸಲಾಗಿದೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದೆ. ಹೆಚ್ಚಿನ ಮಾಹಿತಿಗೆ ಗ್ರಾಹಕರ ಸಹಾಯವಾಣಿ ಸಂಖ್ಯೆ 1967ಕ್ಕೆ ಉಚಿತ ಕರೆ ಮಾಡಬಹುದಾಗಿದೆ.

- **ದೇಶದ ಮೊದಲ ಮೋನೋ ರೈಲು ಮುಂಬೈನಲ್ಲಿ ಲೋಕಾರ್ಪಣೆ:** ದೇಶದ ಮೊದಲ ಮೋನೋ ರೈಲು ಮುಂಬೈನಲ್ಲಿ ಲೋಕಾರ್ಪಣೆಗೊಂಡಿದೆ. ಮುಂಬೈ ಮಹಾನಗರಿಯ ಉಪನಗರಗಳಾದ ವಡಾಲಾ-ಚೆಂಬೂರ್ ಪ್ರದೇಶಗಳನ್ನು ಇದು ಸಂಪರ್ಕಿಸಲಿದ್ದು, 8.9 ಕಿ.ಮೀ. ವ್ಯಾಪ್ತಿ ಹೊಂದಿದೆ. ಪ್ರಯಾಣದರ 5 ರಿಂದ 11 ರೂ. ಇರಲಿದೆ. ಈ ರೈಲು ನಾಲ್ಕು ಹವಾನಿಯಂತ್ರಿತ ಬೋಗಿಗಳನ್ನು ಹೊಂದಿದ್ದು, ಗರಿಷ್ಠ 2300 ಪ್ರಯಾಣಿಕರು ಪ್ರಯಾಣಿಸಬಹುದು. ಒಟ್ಟು 3 ಸಾವಿರ ಕೋಟಿ ರೂ.ಗಳ ಯೋಜನೆ ಇದಾಗಿದ್ದು, ಎರಡು ಹಂತದ್ದಾಗಿದೆ ಎಂದು ಮೆಟ್ರೋಪಾಲಿಟನ್ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರದ ಮುಖ್ಯಸ್ಥರು ಹೇಳಿದ್ದಾರೆ.

- **2015 ರ ವಿಶ್ವಕಪ್ ಕ್ರಿಕೆಟ್ ಗೆಅರ್ಹತೆ ಗಿಟ್ಟಿಸಿದ ಯುಎಇ ಹಾಗೂ ಸ್ಕಾಟ್ಲೆಂಡ್:** ಯುಎಇ ಹಾಗೂ ಸ್ಕಾಟ್ಲೆಂಡ್ ತಂಡಗಳು 2015ರ ವಿಶ್ವಕಪ್‌ನಲ್ಲಿ ಆಡಲು ಅರ್ಹತೆ ಗಿಟ್ಟಿಸಿಕೊಂಡಿವೆ. ನ್ಯೂಜಿಲೆಂಡ್‌ನಲ್ಲಿ ನಡೆದ ವಿಶ್ವಕಪ್ ಅರ್ಹತಾ ಟೂರ್ನಿಯ ಪಾಯಿಂಟ್ ಪಟ್ಟಿಯಲ್ಲಿ ಅಗ್ರ ಎರಡು ಸ್ಥಾನ ಪಡೆಯುವ ಮೂಲಕ ಈ ಅವಕಾಶವನ್ನು ತಮ್ಮದಾಗಿಸಿಕೊಂಡಿವೆ. ಸ್ಕಾಟ್ಲೆಂಡ್ ತಂಡದವರು ತಮ್ಮ ಅಂತಿಮ ಪಂದ್ಯದಲ್ಲಿ ಕೀನ್ಯಾ ಎದುರು 3 ವಿಕೆಟ್ ಜಯ ಸಾಧಿಸುವ ಮೂಲಕ ಪ್ರತಿಷ್ಠಿತ ಟೂರ್ನಿಗೆ ಪ್ರವೇಶ ಪಡೆದರು. ಹಾಗೆಯೇ ಯುಎಇ ತಂಡ 36 ರನ್‌ಗಳಿಂದ ನಮೀಬಿಯಾ ತಂಡವನ್ನು ಬಗ್ಗುಬಡಿದು ವಿಶ್ವಕಪ್‌ನಲ್ಲಿ ಆಡುವ ಅವಕಾಶ ತನ್ನದಾಗಿಸಿಕೊಂಡಿದೆ.

- **ಐಸಿಸಿ ಏಕದಿನ ಮಾನ್ಯತೆ ಕಳೆದುಕೊಂಡ ಕೀನ್ಯಾ, ಹಾಲೆಂಡ್ ಮತ್ತು ಕೆನಡಾ:** ಐಸಿಸಿ ವಿಶ್ವಕಪ್ ಅರ್ಹತಾ ಸುತ್ತಿನ ಪಂದ್ಯಾವಳಿಯಲ್ಲಿ ನೀರಸ ಪ್ರದರ್ಶನ ನೀಡಿದ ಕೀನ್ಯಾ, ಹಾಲೆಂಡ್ ಮತ್ತು ಕೆನಡಾ ತಂಡಗಳು ಐಸಿಸಿ ಏಕದಿನ ಮಾನ್ಯತೆ ಕಳೆದುಕೊಂಡಿವೆ. ಹಾಂಕಾಂಗ್, ಯುಎಇ ಮತ್ತು ಪಪುವಾ ಡಿ ಗುನಿಯಾ ಈ ಸ್ಥಾನ ಪಡೆಯಬಹುದು. ಸ್ಕಾಟ್ಲೆಂಡ್ ಮತ್ತು ಅಫ್ಘಾನಿಸ್ತಾನ ಸಹ ಸದಸ್ಯ ರಾಷ್ಟ್ರಗಳ ಮಾನ್ಯತೆ ಪಡೆದಿದೆ.

- **ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ 'ಕಕ್ಷೀಯ ಕೃಷಿ' ಸಾಧನೆ ಮಾಡಿದ ವಿಜ್ಞಾನಿಗಳು:** ಗಗನಯಾತ್ರಿಗಳು ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ ಇದೇ ಮೊದಲ ಬಾರಿಗೆ ಗೋದಿ, ಬಟಾಣಿ ಹಾಗೂ ತರಕಾರಿಗಳನ್ನು ಯಶಸ್ವಿಯಾಗಿ ಬೆಳೆದಿದ್ದಾರೆ. ಬಾಹ್ಯಾಕಾಶ ಕೇಂದ್ರದಲ್ಲಿರುವ ಪ್ರಾಯೋಗಿಕ ಗ್ರೀನ್ ಹೌಸ್ ನಲ್ಲಿ ಉತ್ತಮ ಗುಣಮಟ್ಟದ ತರಕಾರಿಗಳನ್ನು ಬೆಳೆಸಲಾಗಿದೆ. ಜತೆಗೆ, ಅವುಗಳು ತಿನ್ನಲು ಯೋಗ್ಯವೇ ಎಂಬುದನ್ನೂ ಪರೀಕ್ಷಿಸಲಾಗಿದೆ. ಇನ್ನು ಬಾಹ್ಯಾಕಾಶ ಕೇಂದ್ರದ ಲಾಡಾ ಗ್ರೀನ್‌ಹೌಸ್ ಅನ್ನು ರಿಪೇರಿ ಮಾಡಿದ ಬಳಿಕ ಮುಂದಿನ ವರ್ಷ ರಷ್ಯಾದ ಗಗನಯಾತ್ರಿಗಳು ಅಕ್ಕಿ, ಟೊಮೆಟೋ, ಕಾಳುಮೆಣಸನ್ನೂ ಬೆಳೆಯಲಿದ್ದಾರಂತೆ. ಸದ್ಯಕ್ಕೆ ಬಾಹ್ಯಾಕಾಶ ಕೇಂದ್ರದಲ್ಲಿರುವ ಗಗನಯಾತ್ರಿಗಳಿಗೆ ಭೂಮಿಯಿಂದಲೇ ಆಹಾರ ಪೂರೈಸಲಾಗುತ್ತಿದೆ.

➢ **ಟಿಡಿಎಸ್ ಸಂಗ್ರಹದಲ್ಲಿ ಕರ್ನಾಟಕ ಮತ್ತು ಗೋವಾ ವಲಯ ದೇಶದಲ್ಲೇ ಪ್ರಥಮ:** ಮೂಲದಲ್ಲೇ ಆದಾಯ ಕಡಿತ ತೆರಿಗೆ (ಟಿಡಿಎಸ್) ಸಂಗ್ರಹದಲ್ಲಿ ಕರ್ನಾಟಕ ಮತ್ತು ಗೋವಾ ವಲಯ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ ಎಂದು ಬೆಂಗಳೂರಿನ ಆದಾಯ ತೆರಿಗೆ ಇಲಾಖೆಯ ಮುಖ್ಯ ಆಯುಕ್ತ ತಿಳಿಸಿದ್ದಾರೆ. ದೇಶದ ಆರ್ಥಿಕ ಸಂಪನ್ಮೂಲ ಕ್ರೋಢೀಕರಣದಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವ ಟಿಡಿಎಸ್‌ನ ಬೆಳವಣಿಗೆ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಕರ್ನಾಟಕ ಮತ್ತು ಗೋವಾವನ್ನೊಳಗೊಂಡ ವಲಯದ ಜಿಲ್ಲೆಗಳಲ್ಲಿ ಇದು ಉತ್ತಮವಾಗಿ ಅನುಷ್ಠಾನಗೊಂಡಿದ್ದು ಬೊಕ್ಕಸಕ್ಕೆ ಸಾಕಷ್ಟು ಪ್ರಮಾಣದಲ್ಲಿ ಆದಾಯ ಹರಿದು ಬರುತ್ತಿದೆ . ಟಿಡಿಎಸ್ ಸಂಗ್ರಹದಲ್ಲಿ ಕರ್ನಾಟಕ-ಗೋವಾ ವಲಯ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಕರ್ನಾಟಕದಿಂದ ವರ್ಷಕ್ಕೆ ಟಿಡಿಎಸ್ ಮೂಲಕ 26 ರಿಂದ 27 ಸಾವಿರ ಕೋಟಿ ರೂ. ಆದಾಯ ಬರುತ್ತಿದೆ .

➢ **ಐಐಎಂ-ಬಿ ನ ನೂತನ ಅಧ್ಯಕ್ಷರಾಗಿ ಕಿರಣ್ ಮಜುಂದಾರ್ ಷಾ ನೇಮಕ:** ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ (ಐಐಎಂ-ಬಿ)ಯ ನೂತನ ಅಧ್ಯಕ್ಷೆಯಾಗಿ ಕಿರಣ್ ಮಜುಂದಾರ್ ಷಾ ನೇಮಕಗೊಂಡಿದ್ದಾರೆ. ಐಐಎಂನ ಅಧ್ಯಕ್ಷರಾಗಿದ್ದ ರಿಲಯನ್ಸ್ ಮುಖ್ಯಸ್ಥ ಮುಕೇಶ್ ಡಿ. ಅಂಬಾನಿಯವರು ಹುದ್ದೆಯಿಂದ ಕೆಳಗಿಳಿಯಲು ಇಚ್ಛಿಸಿದ ಹಿನ್ನೆಲೆಯಲ್ಲಿ ನೂತನ ಅಧ್ಯಕ್ಷರ ನೇಮಕವಾಗಿದೆ. ಪ್ರಸಿದ್ಧ ಕಂಪನಿ ಬಯೋಕಾನ್‌ನ ಅಧ್ಯಕ್ಷೆ ಮತ್ತು ಆಡಳಿತ ನಿರ್ದೇಶಕರಾಗಿರುವ ಷಾ, ಕಳೆದ ಕೆಲವು ವರ್ಷಗಳಿಂದ ಐಐಎಂನ ಆಡಳಿತ ಮಂಡಳಿ ಸದಸ್ಯರಾಗಿದ್ದರು. ಷಾ ಅವರು 8 ವರ್ಷಗಳ ಕಾಲ ಹುದ್ದೆಯಲ್ಲಿರಲಿದ್ದಾರೆ. ಇವರು ಐಐಎಂನ ಮೊದಲ ಮಹಿಳಾ ಅಧ್ಯಕ್ಷರೂ ಹೌದು. ನೂತನ ಅಧ್ಯಕ್ಷರ ಪದಗ್ರಹಣ ಬಗ್ಗೆ ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯ ಅಧಿಸೂಚನೆಯನ್ನೂ ಪ್ರಕಟಿಸಿದೆ.

➢ **ಜಾಗತಿಕ ಪತ್ರಿಕಾ ಸ್ವಾತಂತ್ರ್ಯ ಸೂಚಿಯಲ್ಲಿ ಭಾರತಕ್ಕೆ 140ನೇ ಸ್ಥಾನ:** ಜಾಗತಿಕ ಪತ್ರಿಕಾ ಸ್ವಾತಂತ್ರ್ಯ ಸೂಚಿಯಲ್ಲಿ ಭಾರತಕ್ಕೆ 140ನೇ ಸ್ಥಾನ ಸಿಕ್ಕಿದೆ. ಚೀನಾ ಹಾಗೂ ಪಾಕಿಸ್ತಾನ ಕ್ರಮವಾಗಿ 175 ಮತ್ತು 158ನೇ ಸ್ಥಾನದಲ್ಲಿವೆ. '2013ರಲ್ಲಿ ಭಾರತದಲ್ಲಿ 8 ಪತ್ರಕರ್ತರು ಹಿಂಸೆಗೆ ಬಲಿಯಾಗಿದ್ದಾರೆ' ಎಂದು 'ರಿಪೋರ್ಟರ್ಸ್ ವಿದೌಟ್ ಬಾರ್ಡರ್' ವಾರ್ಷಿಕ ವರದಿಯಲ್ಲಿ ತಿಳಿಸಲಾಗಿದೆ. 'ಕಾಶ್ಮೀರ ಹಾಗು ಛತ್ತೀಸಗಡದಲ್ಲಿ ಪತ್ರಕರ್ತರ ಮೇಲೆ ಹಿಂಸಾಚಾರ ಹೆಚ್ಚುತ್ತಿದೆ' ಎಂದೂ ವರದಿಯಲ್ಲಿ ತಿಳಿಸಲಾಗಿದೆ. ಪತ್ರಿಕಾ ಸ್ವಾತಂತ್ರ್ಯ ಸೂಚಿಯಲ್ಲಿ ಫಿನ್‌ಲೆಂಡ್ ಅಗ್ರಸ್ಥಾನದಲ್ಲಿದೆ. ನೆದರ್‌ಲೆಂಡ್ ಹಾಗೂ ನಾರ್ವೆ ಕ್ರಮವಾಗಿ 2 ಮತ್ತು 3ನೇ ಸ್ಥಾನದಲ್ಲಿವೆ. ಕಳೆದ ವರ್ಷ 32ನೇ ಸ್ಥಾನದಲ್ಲಿದ್ದ ಅಮೆರಿಕ ಈ ಬಾರಿ 46ನೇ ಸ್ಥಾನಕ್ಕೆ ಇಳಿದಿದೆ.

➢ **ಪಾಕಿಸ್ತಾನದಿಂದ ಪ್ರವೇಶಿಸುವ ಪ್ರಜೆಗಳಿಗೆ ಪೋಲಿಯೊ ನಿರೋಧಕ ಚುಚ್ಚುಮದ್ದು ಪ್ರಮಾಣಪತ್ರ ಕಡ್ಡಾಯ**: ಭಾರತವು ತನ್ನ ಪೋಲಿಯೊ ಮುಕ್ತ ರಾಷ್ಟ್ರ ಸ್ಥಾನಮಾನ ಸಂರಕ್ಷಿಸುವ ನಿಟ್ಟಿನಲ್ಲಿ ಪಾಕಿಸ್ತಾನದಿಂದ ದೇಶ ಪ್ರವೇಶಿಸುವ ಪ್ರತಿಯೊಬ್ಬರಿಗೂ ಮಾರ್ಚ್ 15 ರಿಂದ ಪೋಲಿಯೊ ನಿರೋಧಕ ಚುಚ್ಚುಮದ್ದು ಪ್ರಮಾಣಪತ್ರ ಸಲ್ಲಿಕೆ ಕಡ್ಡಾಯ ಮಾಡಿದೆ. ಮಾರ್ಚ್ 15ರ ನಂತರ ಭಾರತಕ್ಕೆ ಭೇಟಿ ನೀಡುವ ಪಾಕಿಸ್ತಾನಿಯರು ತಮ್ಮ ವೀಸಾದೊಂದಿಗೆ ಪೋಲಿಯೊ ಚುಚ್ಚುಮದ್ದು ಅಳವಡಿಕೆ ಪ್ರಮಾಣಪತ್ರವನ್ನೂ ಸಲ್ಲಿಸಬೇಕಿದ್ದು, ಸ್ವದೇಶಕ್ಕೆ ಮರಳುವಾಗ ಅದನ್ನು ಹಿಂತಿರುಗಿಸಲಾಗುತ್ತದೆ ಎಂದು ಭಾರತೀಯ ಹೈಕಮಿಷನ್ ಪ್ರಕಟಿಸಿದೆ.



********************